# ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯಾಲಯ (ಆಡಳಿತ, ಅಭಿವೃದ್ಧಿ) ವಿಜಯಪುರ ಇವರ ಸಹಯೋಗದಲ್ಲಿ

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

# 2015 - 16 ನೆಯ ಸಾಲಿನ

# ಎಸ್. ಎಸ್. ಎಲ್. ಸಿ. ಪರೀಕ್ಷೆ

# ನೀಲ ನಕ್ಷೆ ಹಾಗೂ ವಿಶ್ಲೇಷಣೆಯೊಂದಿಗೆ

# ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆಗಳು

# ಪ್ರಥಮ ಭಾಷೆ ಕನ್ನಡ.


ರಚನೆ :

ಶ್ರೀ ಹೆಚ್. ಆರ್. ಭಾಲಿ. ಎಂ.ಎ.ಬಿ.ಎಡ್.
ಅಧ್ಯಕ್ಷರು
ಕನ್ನಡ ಸಮೂಹ, ನಗರವಲಯ
ವಿಜಯಪುರ.
9743238008. 9483944365.

ಶ್ರೀ ಎಂ. ಡಿ. ಪಡಂದಾರ. ಬಿ.ಎ.ಬಿ.ಎಡ್.
ಕಾರ್ಯದರ್ಶಿಗಳು
ಕನ್ನಡ ಸಮೂಹ, ಗ್ರಾಮೀಣವಲಯ
ವಿಜಯಪುರ.
9916553402. 9902219303.

# ಮೊದಲ ಮಾತು

ಇಂದು ಶಿಕ್ಷಣದಲ್ಲಿ ಹೊಸ ಮನ್ವಂತರ ಆರಂಭವಾಗಿದ್ದು, ರಾಷ್ಟ್ರೀಯ ಶಿಕ್ಷಣ ನೀತಿಯಡಿ ಸರಕಾರವು ಮಗು ಕೇಂದ್ರಿಕೃತ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿದೆ. ಇಂದು ಮಗುವಿನ ಕಲಿಕೆ ಪಠ್ಯಪುಸ್ತಕದ ಮಿತಿಗಳನ್ನು ಮೀರಿ ಕಲಿಕಾ ಚಟುವಟಿಕೆಗಳಲ್ಲಿ ತೊಡಗಬೇಕು. ಮೊಗ್ಗಿನಂತಿರುವ ಮಗುವಿನ ಜ್ಞಾನ ಹೂವಿನಂತೆ ಅರಳಿ ಸುಗಂಧ ಸೂಸಬೇಕು. ಶಿಕ್ಷಕರು ಮಕ್ಕಳಲ್ಲಿ ನಿರಂತರ ಕಲಿಕೆ ಕ್ರಿಯಾಶೀಲ ಮನೋಭಾವನೆ ಬೆಳೆಸಬೇಕು. ಮೌಲ್ಯಗಳನ್ನು ರಚನಾತ್ಮಕವಾಗಿ ಬಿತ್ತಬೇಕು. "ಜ್ಞಾನದ ಹೆಬ್ಬಾಗಿಲು" ಎಂದು ಕರೆಯಿಸಿಕೊಳ್ಳುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸಬೇಕಾದರೆ ನೀಲ ನಕ್ಷೆ ಪ್ರಶ್ನಾನುಸಾರ ವಿಶ್ಲೇಷಣೆ ಹಾಗೂ ಪ್ರಶ್ನೆಸಹಿತ ಉತ್ತರಗಳನ್ನೊಳಗೊಂಡ ಪ್ರಶ್ನೆಭಂಡಾರ ಶಿಕ್ಷಕರ ಜೊತೆಗಿದ್ದರೆ ಅನುಕೂಲವಾಗುವುದು. ಹಾಗೂ ಕಲಿಕೆ ಗುಣಾತ್ಮಕವಾಗುವುದು. ಅಂತಹ ಶಾಲೆ ಪ್ರಗತಿಯ ಪಥದಲ್ಲಿರುತ್ತದೆ. ಈ ಕನಸನ್ನು ಹೊತ್ತ ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆಯ ಶಿಕ್ಷಕರು ಕನ್ನಡ ವಿಷಯ ಪರೀವಿಕ್ಷಕರಾದ ಶ್ರೀ ಎ. ಬಿ. ವಾಡೆಯವರ ನಿರ್ದೇಶನದಲ್ಲಿ ಪ್ರಥಮ ಭಾಷೆ ಕನ್ನಡ ವಿಷಯದ ಏಳು ಮಾದರಿ ಪ್ರಶ್ನೆಸಹಿತ ಉತ್ತರಪತ್ರಿಕೆ ಭಂಡಾರ ಸಿದ್ಧಪಡಿಸಿ ಹೊರತಂದಿದ್ದಾರೆ. ಅದು ಶ್ಲಾಘನೀಯ. ಭಾಷಾ ಬೋಧಕರು ಮಗುವಿನ ಮನ ಮುಟ್ಟುವಂತೆ ಬೋಧನೆ ಮಾಡಲು ಪ್ರಯತ್ನಿಸಿರಿ. ಅದು ಮಗುವಿನ ಜ್ಞಾನಜ್ಯೋತಿಯನ್ನು ಬೆಳಗಿಸುವಂತಾಗಲಿ. ಅದು ಶಿಕ್ಷಕ ವೃಂದಕ್ಕೆ ಕೈದೀವಿಗೆಯಾಗಲಿ, ದಿಕ್ಸೂಚಿಯಾಗಲಿ. ವಿಜಯಪುರ ಜಿಲ್ಲೆಯ ಕೀರ್ತಿಪತಾಕೆಯು ಬಾನಂಗಳದಲ್ಲಿ ರಾರಾಜಿಸುವಂತಾಗಲಿ.

ಶ್ರೀ ಶ್ರೀಶೈಲ ಬಿರಾದಾರ ಕೆ.ಇ.ಎಸ್
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ

# ಮುನ್ನುಡಿ

ಆತ್ಮೀಯ ಶಿಕ್ಷಕ ವೃಂದವೇ,

ಹತ್ತನೆಯ ತರಗತಿಯ ಮಕ್ಕಳ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ವಿಜಯಪುರ ಜಿಲ್ಲೆ ಕನ್ನಡ ವಿಷಯ ವೇದಿಕೆಯು ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಸಿ.ಸಿ.ಇ. ಮಾದರಿಯ ಪರಿಷ್ಕೃತ ಪಠ್ಯಾಧಾರಿತ ಏಳು ಪ್ರಶ್ನೆ ಸಹಿತ ಉತ್ತರಪತ್ರಿಕೆಗಳ ಮಾಲಿಕೆಯನ್ನು ನುರಿತ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದ್ದು, ವಿದ್ಯಾರ್ಥಿಗಳ ಯಸಸ್ಸಿಗೆ ಕಲಿಕಾ ಸಾಮರ್ಥ್ಯಕ್ಕೆ ಉತ್ತೇಜಿತರಾಗಲು, ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಮನೋ ಇಂಗಿತ. ಇದರ ಸಂಪೂರ್ಣ ಪ್ರಯೋಜನ ಪಡೆದುಕೊಂಡು ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು ತಮ್ಮ ಆದ್ಯ ಕರ್ತವ್ಯ. ಈ ಕಾರ್ಯದಲ್ಲಿ ತತ್ಪರರಾಗಲು ಬಯಸುವದರೊಂದಿಗೆ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಪಥಿಕರು ನಿವಾಗಬೇಕು ಎಂದು ಬಯಸುವೆ.

ಈ ಹೊತ್ತಿಗೆಯನ್ನು ಹೊರತರಲು ಶ್ರಮಿಸಿದ ಎಲ್ಲ ಸಂಪನ್ಮೂಲ ಶಿಕ್ಷಕರಿಗೂ ಸಹಾಯ ಮಾರ್ಗದರ್ಶನ ನೀಡಿದ ಅಧಿಕಾರಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**"ಶಿಕ್ಷಣ ಎಲ್ಲರ ಆಜನ್ಮಸಿದ್ಧ ಹಕ್ಕು"**

**ಶ್ರೀಮತಿ ಸಾಯಿರಾಬಾನುಖಾನ** ಕೆ.ಇ.ಎಸ್.
**ಕ್ಷೇತ್ರ ಶಿಕ್ಷಣಾಧಿಕಾರಿಗಳು**
**ನಗರ ವಲಯ ವಿಜಯಪುರ.**

# ಸದಾಶಯ

"ಪರಿವರ್ತನೆ ಜಗತ್ತಿನ ನಿಯಮ" ಶಿಕ್ಷಣ ನಿಂತ ನೀರಲ್ಲ, ಸದಾ ಹರಿಯುತ್ತಿರಬೇಕು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ಗುಣಾತ್ಮಕವಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಾಗೂ ಸಿ. ಸಿ. ಇ. ಆಧಾರಿತ ಮೌಲ್ಯಮಾಪನ ಪ್ರಕ್ರಿಯೆಯನ್ನು ನಿರ್ವಹಿಸುವುದು ಅತೀ ಅವಶ್ಯಕ. ಈ ನಿಟ್ಟಿನಲ್ಲಿ ಮಕ್ಕಳ ವಿವಿಧ ಕಲಿಕಾ ಚಟುವಟಿಕೆಗಳ ಆಧಾರಿತ ಮೌಲ್ಯಮಾಪನ ಹಾಗೂ ಪಠ್ಯಾಧಾರಿತ ಪ್ರಶ್ನೆಪತ್ರಿಕೆಗಳ ಮೌಲ್ಯಮಾಪನ ಮಾಡಬೇಕಾಗಿರುವುದರಿಂದ ಈ ದಿಶೆಯತ್ತ ವಿಜಯಪುರ ಜಿಲ್ಲೆ ಕನ್ನಡ ವಿಷಯ ವೇದಿಕೆಯು ದಿಟ್ಟ ಹೆಜ್ಜೆನಿಟ್ಟು ದಾಪುಗಾಲು ಹಾಕಿ "ಧರ್ಮಕ್ಕೆ ಬೆನ್ನಿದೆ, ಒಮ್ಮುಖವಿಲ್ಲ; ಅದು ಸರ್ವತೋಮುಖ ಎಂಬ ವಾಕ್ಯೋಕ್ತಿಯಂತೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಉತ್ತಮ ಫಲಿತಾಂಶಕ್ಕಾಗಿ ಸಿ.ಸಿ.ಇ. ಮಾದರಿಯ ಪರಿಷ್ಕೃತ ಪಠ್ಯಾಧಾರಿತ ಏಳು ಪ್ರಶ್ನೆ ಸಹಿತ ಉತ್ತರಪತ್ರಿಕೆಗಳ ಮಾಲಿಕೆಯನ್ನು ಶ್ರೀ ಎಂ. ಡಿ. ಪಡಂದಾರ ಸಹ-ಶಿಕ್ಷಕರು ವಿ.ಜಿ.ವಿ.ಎಸ್. ಪ್ರೌಢ ಶಾಲೆ, ಲೋಹಗಾಂವ ಗ್ರಾಮೀಣ ವಲಯ ವಿಜಯಪುರ ಹಾಗೂ ಶ್ರೀ ಹೆಚ್. ಆರ್. ಭಾಲಿ. ಸಹ- ಶಿಕ್ಷಕರು ಸರಕಾರಿ ಪ್ರೌಢ ಶಾಲೆ, ರಿಮಾಂಡ್ ಹೋಂ ಹತ್ತಿರ, ಸ್ಟೇಶನ್ನ ರಸ್ತೆ, ವಿಜಯಪುರ ಇವರು ಸಿದ್ಧಪಡಿಸಿದ್ದು, ಅದು ಶ್ಲಾಘನೀಯ. ಅವರ ಪ್ರಯತ್ನ ಫಲಪ್ರದವಾಗಬೇಕಾದರೆ ಶಿಕ್ಷಕ ವೃಂದದವರು ಮಗುವಿನ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸಿ, ಅದರ ಸದುಪಯೋಗಪಡಿಸಿಕೊಂಡರೆ ಅವರ ಶ್ರಮ ಸದ್ವಿನಿಯೋಗವಾದಂತೆ.

**ಶುಭವಾಗಲಿ**

**ಶ್ರೀ ಮಹಾದೇವ ಬೆಳ್ಳಣ್ಣವರ** ಕೆ.ಇ.ಎಸ್.
**ಕ್ಷೇತ್ರ ಶಿಕ್ಷಣಾಧಿಕಾರಿಗಳು**
**ಗ್ರಾಮೀಣ ವಲಯ ವಿಜಯಪುರ.**

# ಆಶಯ

2015 - 16 ನೆಯ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮಾದರಿ ಪ್ರಶ್ನೆ ಪತ್ರಿಕೆಯನ್ವಯ ವಿಜಯಪುರ ನಗರ ಗ್ರಾಮೀಣ ವಲಯದ ಕನ್ನಡ ವಿಷಯ ವೇದಿಕೆಯ ಪ್ರಥಮ ಭಾಷಾ ಕನ್ನಡ ಶಿಕ್ಷಕರು ಸಿದ್ಧಪಡಿಸಿದ ಏಳು ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯೊಂದಿಗೆ ಕಿರು ಹೊತ್ತಿಗೆಯನ್ನು ಹೊರತಂದಿದ್ದಾರೆ. ಅದು ಜಿಲ್ಲೆಯ ಎಲ್ಲ ಶಿಕ್ಷಕ ವೃಂದಕ್ಕೆ ಕೈದೀವಿಗೆಯಂತಿದ್ದು, ಮಕ್ಕಳ ಫಲಿತಾಂಶ ಸುಧಾರಣೆಗೆ ಪೂರಕವಾಗಿದ್ದು, ಅದನ್ನು ಬಳಸಿ ಸದ್ವಿನಿಯೋಗಪಡಿಸಿಕೊಳ್ಳಲು ಅತ್ಯುಪಯುಕ್ತವಾಗಿದ್ದು, ಸದರಿ ಹೊತ್ತಿಗೆಯನ್ನು ಸಹೃದಯಿಗರಾದ ಶಿಕ್ಷಕ ವೃಂದ ಆದರ ಉಪಯುಕ್ತತೆಯನ್ನು ಪಡೆಯಬೇಕು.

ಶ್ರೀ ಎಂ. ಡಿ. ಪಡಂದಾರ ವಿ.ಜಿ.ವಿ.ಎಸ್. ಪ್ರೌಢ ಶಾಲೆ, ಲೋಹಗಾಂವ. ಗ್ರಾಮೀಣ ವಲಯ ವಿಜಯಪುರ ಹಾಗೂ ಶ್ರೀ ಹೆಚ್. ಆರ್. ಭಾಲಿ ಸರಕಾರಿ ಪ್ರೌಢ ಶಾಲೆ, ರಿಮಾಂಡ್ ಹೋಂ ಹತ್ತಿರ, ಸ್ಟೇಶನ್ ರಸ್ತೆ, ವಿಜಯಪುರ. ಇವರ ಪ್ರಯತ್ನ, ಮಕ್ಕಳ ಕಳಕಳಿ ಹಾಗೂ ಶ್ರಮ ಫಲಪ್ರದವಾಗಲಿ ಮತ್ತು ಇನ್ನೂ ಹೆಚ್ಚಿನ ಶೈಕ್ಷಣಿಕ ಕಾರ್ಯಗಳು ಅವರಿಂದ ಮೂಡಿಬರಲೆಂದು ಆಶಿಸುವೆ.

**"ಶಿಕ್ಷಣದಿಂದಲೇ ಸರ್ವತೋಮುಖ ಅಭಿವೃದ್ಧಿ"**

ಶ್ರೀ ಎ. ಬಿ. ವಾಡೆ.
ಕನ್ನಡ ವಿಷಯ ಪರವೀಕ್ಷಕರು
ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಯಪುರ.



# ಕೃತಜ್ಞತೆಗಳು

ಆತ್ಮೀಯ ಸಹೃದಯಿಗಳಾದ ವೃತ್ತಿ ಬಂಧು ಭಗಿನಿಯರೇ, ನಾವು ಶ್ರೀ ಎಂ. ಡಿ. ಪಡಂದಾರ. ಸ.ಶಿ. ವಿ.ಜಿ.ವಿ.ಎಸ್. ಪ್ರೌಢ ಶಾಲೆ, ಲೋಹಗಾಂವ. ಗ್ರಾಮೀಣ ವಲಯ ವಿಜಯಪುರ ಹಾಗೂ ಶ್ರೀ ಹೆಚ್. ಆರ್. ಭಾಲಿ. ಸ.ಶಿ. ಸರಕಾರಿ ಪ್ರೌಢ ಶಾಲೆ, ರಿಮಾಂಡ್ ಹೋಂ ಹತ್ತಿರ, ಸ್ಟೇಶನ್ ರಸ್ತೆ, ವಿಜಯಪುರ. ಪ್ರಥಮ ಭಾಷೆ ಕನ್ನಡ ವಿಷಯ ಬೋಧಕರಾಗಿ ಸೇವೆ ಸಲ್ಲಿಸುತ್ತಿದ್ದು, ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಕಾರ್ಯಾಲಯ ಹಾಗೂ ಕನ್ನಡ ವಿಷಯ ವೇದಿಕೆ ವಿಜಯಪುರ ಇವರ ಬಯಕೆಯಂತೆ 2015 – 16 ನೆಯ ಸಾಲಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರ ಪರಿಷ್ಕೃತ ನೀಲ ನಕ್ಷೆ ಹಾಗೂ ಮಾದರಿ ಪ್ರಶ್ನೆ ಪತ್ರಿಕೆ ಆಧರಿಸಿ, ಮಕ್ಕಳಿಗೆ ಅತೀ ಸುಲಭವಾಗುವ ರೀತಿಯಲ್ಲಿ ಪರೀಕ್ಷೆಯ ಭಯ ಹಾಗೂ ಆತಂಕ ದೂರ ಮಾಡುವ ನಿಟ್ಟಿನಲ್ಲಿ ವರ್ಗ ಕೋಣೆಗಳಲ್ಲಿ ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯನ್ನು ಚರ್ಚಿಸುವುದರಿಂದ ಪ್ರಯೋಜನವಾಗುವುದೆಂದು ಭಾವಿಸಿ, ಏಳು ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯ ಬಂಢಾರವನ್ನು ತಮ್ಮ ಮುಂದಿಡುತ್ತಿದ್ದೇವೆ. ಇದಕ್ಕೆ ಸಹಾಯ ಸಹಕಾರ ಹಾಗೂ ಮಾರ್ಗದರ್ಶನ ನೀಡಿ ಈ ಪ್ರಶ್ನೆ ಪತ್ರಿಕೆ ಬಂಢಾರ ಮೂಢಿ ಬರುವಂತೆ ಮಾಡಿದ ಇಲಾಖೆಯ ಎಲ್ಲ ಅಧಿಕಾರಿ ವರ್ಗದವರಿಗೆ ಚಿರ್‍ಋನೀಯಾಗಿದ್ದೇವೆ.

ಮಗುವಿನ ಜ್ಞಾನಾಭಿವೃದ್ಧಿಗೆ ಪೂರಕವಾಗಲು ಅದರ ಸದ್ವನಿಯೋಗ ಮಾಡಲು ಸಿದ್ಧರಾದ ಎಲ್ಲ ಆತ್ಮೀಯ ವೃತ್ತಿ ಬಾಂದವರಿಗೆ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಸಹಾಯ ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆಗಳು. ವಿಶೇಷವಾಗಿ ಮಾರ್ಗದರ್ಶನ ಮಾಡಿದ ಜಿಲ್ಲ ಹಾಗೂ ತಾಲೂಕಿನ ಕನ್ನಡ ವಿಷಯ ವೇದಿಕೆಯ ಅಧ್ಯಕ್ಷರಿಗೂ ಹಾಗೂ ಪದಾಧಿಕಾರಿಗಳಿಗೂ ಹೃತ್ಪೂರ್ವಕ ಅಭಿನಂದನೆಗಳು.

**“ಬಳಸಿ ಬಳಸಿ ಬೆಳೆಸಿ, ಕನ್ನಡ ಭಾಷೆ ಉಳಿಸಿ"**

ತಮ್ಮ ವಿಶ್ವಾಸಿಕರು
ಶ್ರೀ ಎಂ. ಡಿ. ಪಡಂದಾರ.
ಶ್ರೀ ಹೆಚ್, ಆರ್. ಭಾಲಿ.

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

2015 - 16 ನೆಯ ಸಾಲಿನ

ಪರಿಷ್ಕೃತ ಪಠ್ಯಾಧಾರಿತ ಎಸ್.ಎಸ್.ಎಲ್. ಸಿ. ಪರೀಕ್ಷೆ

**ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ**

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕಗಳು :** 100 **ಅವಧಿ :** 3 ಗಂಟೆಗಳು

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 25 | 25 |
| ಗ್ರಹಿಕೆ | 37 | 37 |
| ಅಭಿವ್ಯಕ್ತಿ | 34 | 34 |
| ಪ್ರಶಂಸೆ | 04 | 04 |
| **ಒಟ್ಟು** | **100** | **100** |

Vijayapur District Kannada Subject Forum

**2. ವಿಷಯಾನುಸಾರ ಪ್ರಾಮುಖ್ಯತೆ :**

| ವಿಷಯ / ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
|---|---|---|---|
| ಗದ್ಯ | 26 | 26 | 13 |
| ಪದ್ಯ | 28 | 28 | 11 |
| ಪಠ್ಯ ಪೋಷಕ ಅಧ್ಯಯನ | 09 | 09 | 05 |
| ಅಪಠಿತ ಗದ್ಯ | 04 | 04 | 01 |
| ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ ಮತ್ತು ವಾಕ್ಯರಚನೆ | 33 | 33 | 19 |
| **ಒಟ್ಟು** | **100** | **100** | **49** |

**3. ಪ್ರಶ್ನಾನುಸಾರ ಪ್ರಾಮುಖ್ಯತೆ :**

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| ವಸ್ತು ನಿಷ್ಠ | 14 | 14 | 14 | 25 ನಿಮಿಷ |
| ಕಿರು ಉತ್ತರಗಳು (1) | 09 | 09 | 09 | 15 ನಿಮಿಷ |
| ಕಿರು ಉತ್ತರಗಳು (2) | 20 | 20 | 10 | 35 ನಿಮಿಷ |
| ದೀರ್ಘ ಉತ್ತರಗಳು (1) | 27 | 27 | 09 | 40 ನಿಮಿಷ |
| ದೀರ್ಘ ಉತ್ತರಗಳು (2) | 20 | 20 | 05 | 25 ನಿಮಿಷ |
| ದೀರ್ಘ ಉತ್ತರಗಳು (3) | 10 | 10 | 02 | 20 ನಿಮಿಷ |
| **ಒಟ್ಟು** | **100** | **100** | **49** | **160 + 20 ನಿ.** |

**4. ಕಠಿಣತೆಯ ಮಟ್ಟ :**

Vijayapur District Kannada Subject Forum

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% | 50% | 20% | **100%** |

**5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :**

| | | |
|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 14 ಪ್ರಶ್ನೆಗಳು | 14 x 1 = 14 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 9 ಪ್ರಶ್ನೆಗಳು | 9 x 1 = 09 |
| ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕದ 10 ಪ್ರಶ್ನೆಗಳು | 10 x 2 = 20 |
| ಐದು - ಆರು ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕದ 9 ಪ್ರಶ್ನೆಗಳು | 9 x 3 = 27 |
| ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕದ 5 ಪ್ರಶ್ನೆಗಳು | 5 x 4 = 20 |
| ಪ್ರಬಂಧ ಮತ್ತು ವಿಸ್ತಾರವಾಗಿ ಉತ್ತರಿಸುವುದು | 5 ಅಂಕದ 2 ಪ್ರಶ್ನೆಗಳು | 2 x 5 = 10 |
| **ಒಟ್ಟು** | **49 ಪ್ರಶ್ನೆಗಳು** | **100 ಅಂಕಗಳು** |

**6.** **ಪ್ರಶ್ನೆ ಪತ್ರಿಕೆ ಅಂಕ ವಿತರಣೆ :**

ಗದ್ಯ : 26. ಪದ್ಯ : 28. ಪಠ್ಯ ಪೋಷಕ ಅಧ್ಯಯನ : 09.

ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 33

**ಒಟ್ಟು :** 100 **ಅವಧಿ :** 3 ಗಂಟೆಗಳು

| ಪ್ರಶನೆಗಳ ಸ್ವರೂಪ | ಗದ್ಯ | ಪದ್ಯ | ಅಪಠಿತ ಗದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯ ರಚನೆ | ಒಟ್ಟು |
|---|---|---|---|---|---|---|---|
| 1. ಬಹು ಆಯ್ಕೆ | - | - | - | - | 10x1=10 | - | 10 |
| 2. ಸಂಬಂಧೀಕರಿಸಿ ಬರೆಯುವುದು | - | - | - | - | 4x1=4 | - | 04 |
| 3. ಒಂದು ವಾಕ್ಯದ ಉತ್ತರಗಳು | 5x1=5 | 3x1=3 | - | 1x1=1 | - | - | 09 |
| 4. 3 – 4 ವಾಕ್ಯಗಳ ಉತ್ತರಗಳು | 4x2=8 | 2x2=4 | - | 4x2=8 | - | - | 20 |
| 5. 5 – 6 ವಾಕ್ಯಗಳ ಉತ್ತರಗಳು ಸಂದರ್ಭಗಳು | 2x3=6 | 2x3=6 | - | - | - | - | 12 |
| 6. ಕವಿ ಕೃತಿ ಪರಿಚಯ | 1x3=3 | 1x3=3 | - | - | - | - | 06 |
| 7. ಛಂದಸ್ಸು | - | - | - | - | 1x3=3 | - | 03 |
| 8. ಅಲಂಕಾರ | - | - | - | - | 1x3=3 | - | 03 |
| 9. ಗಾದೆಗಳು | - | - | - | - | - | 1x3=3 | 03 |
| 10. ಕಂಠಪಾಠ | - | 1x4=4 | - | - | - | - | 04 |
| 11. ಪದ್ಯವನ್ನು ಓದಿ ಅರ್ಥೈಸಿಕೊಂಡು, ಅಡಕಗೊಂಡ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು. | - | 1x4=4 | - | - | - | - | 04 |
| 12. 8 – 10 ವಾಕ್ಯಗಳ ಉತ್ತರಗಳು | 1x4=4 | 1x4=4 | - | - | - | - | 08 |
| 13. ಅಪಠಿತ ಗದ್ಯ ಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು | - | - | 1x4=4 | - | - | - | 04 |

Vijayapur District Kannada Subject Forum

| | | | | | | | |
|---|---|---|---|---|---|---|---|
| 14. ಪತ್ರಲೇಖನ | - | - | - | - | - | 1x5=5 | 05 |
| 15. ಪ್ರಬಂಧ ರಚನೆ | - | - | - | - | - | 1x5=5 | 05 |
| **ಒಟ್ಟು** | **26** | **28** | **04** | **09** | **20** | **13** | **100** |



# 7. ಉದ್ದಿಷ್ಟಾನುಸಾರ ಅಂಕ ವಿಶ್ಲೇಷಣೆ

| ಕ್ರ. ಸಂ. | ಉದ್ದಿಷ್ಟಗಳು | ಪ್ರಶ್ನೆಗಳ ಸ್ವರೂಪ | ಪ್ರಶ್ನೆಗಳು ಮತ್ತು ಅಂಕ | ಒಟ್ಟು |
|---|---|---|---|---|
| 01 | ಸ್ಮರಣೆ | ವ್ಯಾಕರಣ | 1 ಅಂಕದ 12 ಪ್ರಶ್ನೆಗಳು | 12 |
| | 25 | ಗದ್ಯಪಾಠ | 1 ಅಂಕದ 5 ಪ್ರಶ್ನೆಗಳು | 05 |
| | | ಪದ್ಯಪಾಠ | 1 ಅಂಕದ 3 ಪ್ರಶ್ನೆಗಳು | 03 |
| | | ಪಠ್ಯ ಪೋಷಕ ಅಧ್ಯಯನ | 1 ಅಂಕದ 1 ಪ್ರಶ್ನೆ | 01 |
| | | ಪದ್ಯಪಾಠ | 4 ಅಂಕದ 1 ಪ್ರಶ್ನೆ | 04 |
| 02 | ಗ್ರಹಿಕೆ | ವ್ಯಾಕರಣ | 1 ಅಂಕದ 2 ಪ್ರಶ್ನೆಗಳು | 02 |
| | 37 | ಗದ್ಯಪಾಠ | 2 ಅಂಕದ 4 ಪ್ರಶ್ನೆಗಳು | 08 |
| | | ಪದ್ಯಪಾಠ | 2 ಅಂಕದ 2 ಪ್ರಶ್ನೆಗಳು | 04 |
| | | ಪಠ್ಯ ಪೋಷಕ ಅಧ್ಯಯನ | 2 ಅಂಕದ 2 ಪ್ರಶ್ನೆಗಳು | 04 |
| | | ಗದ್ಯಪಾಠ | 3 ಅಂಕದ 1 ಪ್ರಶ್ನೆಗಳು | 03 |
| | | ಪದ್ಯಪಾಠ | 3 ಅಂಕದ 1 ಪ್ರಶ್ನೆಗಳು | 03 |
| | | ವ್ಯಾಕರಣ | 3 ಅಂಕದ 2 ಪ್ರಶ್ನೆಗಳು | 06 |
| | | ವಾಕ್ಯರಚನೆ | 3 ಅಂಕದ 1 ಪ್ರಶ್ನೆಗಳು | 03 |
| | | ಅಪಠಿತ ಗದ್ಯ | 4 ಅಂಕದ 1 ಪ್ರಶ್ನೆಗಳು | 04 |
| 03 | ಅಭಿವ್ಯಕ್ತಿ | ಪಠ್ಯ ಪೋಷಕ ಅಧ್ಯಯನ | 2 ಅಂಕದ 2 ಪ್ರಶ್ನೆಗಳು | 04 |
| | 34 | ಗದ್ಯಪಾಠ | 3 ಅಂಕದ 2 ಪ್ರಶ್ನೆಗಳು | 06 |
| | | ಪದ್ಯಪಾಠ | 3 ಅಂಕದ 2 ಪ್ರಶ್ನೆಗಳು | 06 |
| | | ಗದ್ಯಪಾಠ | 4 ಅಂಕದ 1 ಪ್ರಶ್ನೆಗಳು | 04 |
| | | ಪದ್ಯಪಾಠ | 4 ಅಂಕದ 1 ಪ್ರಶ್ನೆಗಳು | 04 |
| | | ವಾಕ್ಯರಚನೆ | 5 ಅಂಕದ 2 ಪ್ರಶ್ನೆಗಳು | 10 |
| 04 | ಪ್ರಶಂಸೆ | ಪದ್ಯಪಾಠದ ಸಾರಾಂಶ | 4 ಅಂಕದ 1 ಪ್ರಶ್ನೆಗಳು | 04 |
| | 04 | | | |

Vijayapur District Kannada Subject Forum

| | | |
|---|---|---|
| ಒಟ್ಟು | **100** ಅಂಕಗಳು **49** ಪ್ರಶ್ನೆಗಳು | **100** |



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ವಿಷಯ : ಪ್ರಥಮ ಭಾಷೆ ಕನ್ನಡ.

**2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 1.**

| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ ನಿ | ಕಿ ಉ 1 | ದೀ ಉ 2 | ವ ನಿ | ಕಿ ಉ 2 | ದೀ ಉ 1 | ದೀ ಉ 2 | ಕಿ ಉ 2 | ದೀ ಉ 1 | ದೀ ಉ 2 | ದೀ ಉ 3 | ದೀ ಉ 2 | | |
| | **ಗದ್ಯಭಾಗ** | | | | | | | | | | | | | | |
| 01 | ಶಬರಿ. | | 1(1) | | | | 3(1) | | | | | | | **4** | **2** |
| 02 | ಅ. ಗೊರೂರು. | | | | | | | | | | 4(1) | | | **4** | **1** |
| 03 | ಜೀವನ ದೃಷ್ಟಿ. | | | | | | | | | 3(1) | | | | **3** | **1** |
| 04 | ಧರ್ಮ ಸಮದೃಷ್ಟಿ. | | 1(1) | | | 2(1) | | | | | | | | **3** | **2** |
| 05 | ಭಾ.ಶಿ.ಎಂ. ವಿ. | | | | | | | | | 3(1) | | | | **3** | **1** |
| 06 | ಎದೆಗೆ ಬಿದ್ದ ಅಕ್ಷರ. | | 1(1) | | | 2(1) | | | | | | | | **3** | **2** |
| 07 | ವೃಕ್ಷ ಸಾಕ್ಷಿ. | | 1(1) | | | 2(1) | | | | | | | | **3** | **2** |
| 08 | ವ್ಯಾಘ್ರಗೀತೆ. | | 1(1) | | | 2(1) | | | | | | | | **3** | **2** |
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗಳ್. | | | 4(1) | | | | | | | | | | **4** | **1** |
| 02 | ಹ.ಹಾ. ನೋಡಿದಿರಾ. | | | | | | | | | | | | 4(1) | **4** | **1** |
| 03 | ಹಲಗಲಿ ಬೇಡರು. | | | | | | | | | 3(1) | | | | **3** | **1** |
| 04 | ವಚನ ಸೌರಭ. | | 1(1) | | | 2(1) | | | | | | | | **3** | **2** |

VIJAYAPUR DISTRICT KANNADA SUBJECT FORUM

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 05 | ಸಂಕಲ್ಪಗೀತೆ. | | 1(1) | | | | | | | 3(1) | | | | **4** | **2** |
| 06 | ಕೌ. ಕೊಂ. ನೀನು. | | | | | | | | | | 4(1) | | | **4** | **1** |
| 07 | ವೀರಲವ. | | | | | | 3(1) | | | | | | | **3** | **1** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |



| **ಕ್ರ. ಸಂ.** | **ಪಾಠದ ಹೆಸರು** | **ಸ್ಮರಣೆ** | | | **ಗ್ರಹಿಕೆ** | | | | **ಅಭಿವ್ಯಕ್ತಿ** | | | | **ಪ್ರಶಂಸೆ** | **ಅಂಕಗಳು** | **ಪ್ರಶ್ನೆಗಳ ಸಂ.** |
|---|---|---|---|---|---|---|---|---|---|---|---|---|---|---|---|
| | | **ವ** | **ಕಿ** | **ದೀ** | **ವ** | **ಕಿ** | **ದೀ** | **ದೀ** | **ಕಿ** | **ದೀ** | **ದೀ** | **ದೀ** | **ದೀ** | | |
| | | **ನಿ** | **ಉ** | **ಉ** | **ನಿ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | | | | 2(1) | | | | | **2** | **1** |
| 02 | ನಾಮಫಲಕ. | | | | | 2(1) | | | | | | | | **2** | **1** |
| 03 | ಉದಾತ್ತ ಚಿಂತನೆಗಳು | | | | | 2(1) | | | | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದ ಒಗಟುಗಳು | | | | | | | | 2(1) | | | | | **2** | **1** |
| | **ಪ. ಪೋ.ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

VIJAYAPUR DISTRICT KANNADA SUBJECT FORUM

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಪ್ರಶ್ನಾನುಸಾರ ವಿಶ್ಲೇಷಣೆ - 1

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 17 | ಗ್ರಹಿಕೆ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 18 | ಗ್ರಹಿಕೆ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |

VIJAYAPUR DISTRICT KANNADA SUBJECT FORUM

| | | | | | | |
|---|---|---|---|---|---|---|
| 19 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 5 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 5 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸುಲಭ | 4 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 4 ನಿಮಿಷ |



| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಕಠಿಣ | 4 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಸಾಧಾರಣ | 5 ನಿಮಿಷ |
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಸಾಧಾರಣ | 5 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 6 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪರಿತ ಗದ್ಯ | 4 | ಸಾಧಾರಣ | 5 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 41 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 1.5 ನಿಮಿಷ |
| 42 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 43 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 1.5 ನಿಮಿಷ |
| 44 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಸಾಧಾರಣ | 5 ನಿಮಿಷ |

VIJAYAPUR DISTRICT KANNADA SUBJECT FORUM

| | | | | | | |
|---|---|---|---|---|---|---|
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಕಠಿಣ | 5 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸಾಧಾರಣ | 4 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಕಠಿಣ | 10 ನಿಮಿಷ |



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 1.

## ವಿಷಯ : ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ :** 100 **ಅವಧಿ :** 3 ಗಂಟೆಗಳು

**ಸೂಚನೆಗಳು :** ಪ್ರಶ್ನೆ ಪತ್ರಿಕೆಯು ಎ, ಬಿ, ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲೇ ಉತ್ತರ ಬರೆಯುವುದು ಕಡ್ಡಾಯ.

## ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ** ಉತ್ತರ ಬರೆಯಿರಿ **: 9 X 1 = 9**

1. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

   ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು.

2. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?

   ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಅವನು ರಾಜದ್ರೋಹಿಯಾಗುವನು.

3. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?

   VIJAYAPUR DISTRICT KANNADA SUBJECT FORUM

   ಮನೆ ಮಂಚಮ್ಮನ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ.

4. ದುಷ್ಟಬುದ್ಧಿಯು ಧರ್ಮ ಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

   ದುಷ್ಟಬುದ್ಧಿಯು ಧರ್ಮ ಬುದ್ಧಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಹೊರಿಸಿದನು.

5. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

   ಶಾನುಭೋಗರ ಬ್ರಹ್ಮಾಸ್ತ್ರ ಖೀರ್ದಿ ಪುಸ್ತಕ.

6. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?

ಶಿವನಿಗೆ ಸತಿ ಪತಿಗಳು ಒಂದಾದ ಭಕ್ತಿ ಹಿತವೆನಿಸುತ್ತದೆ.

7. ಕವಿ ಜಿ.ಎಸ್. ಶಿವರುದ್ರಪ್ಪನವರು ಯಾವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳುತ್ತಾರೆ?

ಕವಿ ಜಿ.ಎಸ್. ಶಿವರುದ್ರಪ್ಪನವರು ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳುತ್ತಾರೆ

8. ಅಜ್ಞಾನ ತೊಲಗಿಸಲು ಕವಿಯತ್ರಿ ಏನಾಗಬಯಸಿದ್ದಾರೆ?

ಅಜ್ಞಾನ ತೊಲಗಿಸಲು ಕವಿಯತ್ರಿ ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಬೇಕೆಂದು ಬಯಸಿದ್ದಾರೆ.



9. ಪಾರಿವಾಳಗಳ ಆನಂದಕ್ಕೆ ಕಾರಣವೇನು?

ಪಾರಿವಾಳಗಳು ತಮ್ಮ ಮುದ್ದು ಮರಿಗಳ ಸದ್ದನ್ನು ಕೇಳಿ ಆನಂದಪಟ್ಟವು.

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಧರ್ಮಸಮದೃಷ್ಟಿ ಪಾಠದಲ್ಲಿ ರಾಮಾನುಜಾಚಾರ್ಯರ ಗುಣ ವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?

ಧರ್ಮಸಮದೃಷ್ಟಿ ಪಾಠದಲ್ಲಿ ರಾಮಾನುಜಾಚಾರ್ಯರನ್ನು ಪಾಷಂಡ ಸಾಗರ ಮಹಾಬಡವಾ ಮುಖಾಗ್ನಿಯಂತಿರುವವರು. ಶ್ರೀರಂಗರಾಜ ಪಾದ ಕಮಲಗಳಲ್ಲಿ ಮೂಲದಾಸರಾದವರು. ಶ್ರೀ ವಿಷ್ಣುಲೋಕ ಮುನಿಮಂಟಪ ಮಾರ್ಗದಾಯಿಗಳು, ಯತಿರಾಜರಾಜರಂತಿರುವವರು ಎಂದು ಕೊಂಡಾಡಲಾಗಿದೆ.

11. 'ವಚನ ಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯವೇನು?

"ಕರ್ನಾಟಕದ ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಆಂದೋಲನ ಜಗತ್ತಿನಲ್ಲಿ ಎಲ್ಲೂ ನಡೆದಿಲ್ಲ. ಈ ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೆ ಇದು ಬೆಳಕಾಗಬಹುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ" ಎಂದು ವಚನಧರ್ಮದ ಬಗೆಗೆ ದೇವನೂರರ ಅಭಿಪ್ರಾಯವಾಗಿದೆ.

VIJAYAPUR DISTRICT KANNADA SUBJECT FORUM

12. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ ಹಲವು ಕಾಲ ದುಡಿಯದೇ (ಕಷ್ಟಪಡದೆ) ಊಟಮಾಡಿ ಸುಖದಿಂದ ಇರಬಹುದು. ಕಾರಣ ನೀನು ಮರದ ಪೋಟರೆಯಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

ಭರತಖಂಡದ ಹುಲಿಗಳು ಯಾರನ್ನೆಯಾಗಲಿ ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಏಕೆಂದರೆ ಬೆನ್ನು

ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಶತ್ರುಗಳಾದರೂ ಸರಿ ಮುಂದಿನಿಂದ ಮಾತ್ರ ದಾಳಿ ಮಡುತ್ತವೆ. ತಮ್ಮ ಮುತ್ತಜ್ಜನ ತ್ಯಾಗವನ್ನು ನೆನಪಿಸಿಕೊಂಡ ಹುಲಿಯು ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

14. ಮಾತಿನ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?

ಮಾತಿನ ಮಹತ್ವವನ್ನು ಕುರಿತು ಬಸವಣ್ಣನವರು "ನುಡಿಯು ಮುತ್ತಿನ ಹಾರದಂತೆ ಜೋಡಿಸಲ್ಪಟ್ಟಿರಬೇಕು. ಮಾತು ಮಾಣಿಕ್ಯದ ದೀಪ್ತಿಯಂತೆ ಹಿತವಾಗಿದ್ದು, ಎಲ್ಲರಿಗೂ ಸ್ಪಷ್ಟವಾಗಿ ಅರ್ಥವಾಗುವಂತಿರಬೇಕು. ಮಾತು ಸ್ಪಟಿಕದ ಸಲಾಕೆಯಂತೆ ಪಾರದರ್ಶಕವಾಗಿದ್ದು, ಸತ್ವದಿಂದ ಕೂಡಿರಬೇಕು. ಹಾಗೂ ದೇವರು ಮೆಚ್ಚುವಂತಿರಬೇಕು ಎಂದು ವಿಶ್ಲೇಷಿಸಿದ್ದಾರೆ.



15. ಗಡಿಯ ಆಚೆ - ಈಚೆ ಜೀವಿಗಳು ಏಕೆ ಶವವಾದವು?

ಮಾನವನು ಭೂಮಿಯ ಮಾಲಿಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಗಡಿಯನ್ನು ನಿರ್ಮಿಸಿಕೊಂಡನು. ಈ ಗಡಿ ನನ್ನದೆಂದು ಅಹಂಕಾರಪಟ್ಟು ಹೋರಾಟ ಮಾಡಿದ್ದರಿಂದ ಗಡಿಯ ಆಚೆ - ಈಚೆ ಜೀವಿಗಳು ಶವವಾದವು.

16. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?

ವಿಜ್ಞಾನಿಯೊಬ್ಬನ ವಸ್ತು ಸ್ಥಿರತೆಯ ವಿಶ್ವ ನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದರೆ ಅದು ಮೂರ್ಖತನ. ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಹುದಾದರೆ ಅದು ಮೂರ್ಖತನದ ಪರಮಾವಧಿ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮೆಯುಂಟು; ಆದರೆ ವಿದ್ಯಾವಂತ ಈ ರೀತಿ ಅಭಿಪ್ರಾಯವನ್ನು ತಿಳಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಎಲ್ಲ ಶೋಧನೆಗಳು ಅರ್ಥರಹಿತವಾಗುತ್ತವೆ.

17. ಪಂಪ ತನ್ನ ಹೆಸರನ್ನು ಕೆತ್ತಿಸದಿರುವುದಕ್ಕೆ ಲೇಖಕರು ಏನೆಂದು ತರ್ಕಿಸಿದ್ದಾರೆ?

ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ತನ್ನ ಕೃತಿಗಳ ಮಹತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು. ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು. ಈ ಕಾರಣಗಳಿಂದ ಪಂಪ ತನ್ನ ಹೆಸರನ್ನು ಕೆತ್ತಿಸದಿರುವುದಕ್ಕೆ ಲೇಖಕರು ಈ ರೀತಿ ತರ್ಕಿಸಿದ್ದಾರೆ.

VIJAYAPUR DISTRICT KANNADA SUBJECT FORUM

18. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?

ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗವೆಂದರೆ - ಜನರಿಗೆ ಸಂಸ್ಕೃತಿಯನ್ನು ಕೊಡಬೇಕು. ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗಲು ಸಾಧ್ಯ. ಏಕೆಂದರೆ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲುದು ಎಂಬುದು ವಿವೇಕಾನಂದರ ಅಭಿಪ್ರಾಯವಾಗಿತ್ತು.

19. ಒಂದನೆಯ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಹೇಗೆ ಸಮರ್ಥಿಸುವಿರಿ.

ಅಂಗಿಯ ಎರಡು ತೋಳುಗಳ ಭಾಗವೆ ಕೈ ಅಂಗಿಗೆ ತಲೆಯಿಲ್ಲ. ಅಂಗಿಯ ಬೇರೆ ಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ. ಮೆಲ್ಲನೆ ಬಂದು ಶರೀರಕ್ಕೆ ತೊಡಿಸುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪ್ರಚಂಡವಾಗಿದೆ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. “ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು"

ಈ ವಾಕ್ಯವನ್ನು "ವಿ. ಕೃ. ಗೋಕಾಕ್" ಅವರು ರಚಿಸಿರುವ "ಜೀವನ ಪಾಠಗಳು" ಎಂಬ ಕೃತಿಯಿಂದಾಯ್ದ "**ಜೀವನ ದೃಷ್ಟಿ**" ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಮಾಜದಲ್ಲಿ ಕಲೋಪಾಸಕನ ಮಹತ್ವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಲೇಖಕರು



ಒಬ್ಬ ಹಿರಿಯ ಸಾಹಿತಿಯ ಈ ಮಾತನ್ನು ವಿವರಿಸುತ್ತಾರೆ.

ಕಲೋಪಾಸಕರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಮಾಜದ ಆದ್ಯ ಕರ್ತವ್ಯ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

21. “ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ"

ಈ ವಾಕ್ಯವನ್ನು "ಶ್ರೀ ಡಿ. ಎಸ್. ಜಯಪ್ಪಗೌಡ" ಅವರು ರಚಿಸಿರುವ "ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು" ಎಂಬ ಸಂಶೋಧನಾ ಗ್ರಂಥದಿಂದಾಯ್ದ **"ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ"** ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ವಿಶ್ವೇಶ್ವರಯ್ಯ ಅವರು ಎಂಜಿನಿಯರುಗಳಿಗೆ "ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು.” ಎಂದು ಹೇಳಿ ಮಾರ್ಗದರ್ಶನ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಪ್ರತಿನಿತ್ಯ ಹೊಸ ಹೊಸ ಮಾಹಿತಿ ಸಂಗ್ರಹ ಮಾಡುವುದರಿಂದ ವ್ಯಕ್ತಿಯ ಕಾರ್ಯಕ್ಷಮತೆ ಹೆಚ್ಚಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

22. “ಜೀವ ಸತ್ತು ಹೋಗುವುದು ಗೊತ್ತ"

ಈ ವಾಕ್ಯವನ್ನು "**ಹಲಗಲಿಯ ಬೇಡರು**" ಎಂಬ ಜನಪದ ಸಾಹಿತ್ಯದಿಂದ ಆಯ್ದುಕೊಳ್ಳಲಾಗಿದೆ.

ಆಕರ ಕೃತಿ : "ಡಾ. ಬಿ. ಎಸ್. ಗದ್ದಗಿಮಠ" ಅವರು ಸಂಪಾದಿಸಿರುವ "ಕನ್ನಡ ಜಾನಪದ ಗೀತೆಗಳು."

VIJAYAPUR DISTRICT KANNADA SUBJECT FORUM

ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ ಸರಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕವರಿಗೆಲ್ಲ ಕರುಣೆಯಿಲ್ಲದೆ ಗುಂಡು ಹೊಡೆದು ಸಾಯಿಸಿದರೆಂದು ಲಾವಣಿಕಾರ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಹಲಗಲಿಯ ಬೇಡರ ಮೇಲೆ ಕರುಣೆಯಿಲ್ಲದೇ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

23. “ಹೊಸ ಭರವಸೆಗಳ ಕಟ್ಟೋಣ"

ಈ ವಾಕ್ಯವನ್ನು ಕವಿ ಶ್ರೀ "ಜಿ. ಎಸ್. ಶಿವರುದ್ರಪ್ಪ" ಅವರು ರಚಿಸಿರುವ "ಎದೆತುಂಬಿ ಹಾಡಿದೆನು" ಎಂಬ ಕವನಸಂಕಲನದಿಂದ ಆಯ್ದ "**ಸಂಕಲ್ಪಗೀತೆ**" ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಕವಿ ಜಿ. ಎಸ್. ಶಿವರುದ್ರಪ್ಪನವರು "ಜೀವನದಲ್ಲಿ ಧನಾತ್ಮಕ ಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ರೀತಿ ಹೇಳುತ್ತಾರೆ.

ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ



ಅಧಃಪತನವನ್ನು ತಡೆಯಬಹುದೆಂದು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ: 2 X 3 = 6**

24. ಪು. ತಿ. ನರಸಿಂಹಾಚಾರ್

ಪು. ತಿ. ನರಸಿಂಹಾಚಾರ್ ಅವರು ಕ್ರಿ.ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಅಹಲ್ಯ, ಶಬರಿ, ಹಂಸದಮಯಂತಿ, ಶ್ರೀ ಹರಿ ಚರಿತೆ ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ಪಂಪ, ಪ್ರಶಸ್ತಿಗಳು ಹಾಗೂ ಗೌರವ ಡಿ. ಲಿಟ್ ಪುರಸ್ಕಾರಗಳು ದೊರೆತಿವೆ.

25. ಲಕ್ಷ್ಮೀಶ

ಲಕ್ಷ್ಮೀಶ ಕವಿಯ ಕಾಲ ಸುಮಾರು ಕ್ರಿ. ಶ. 1550. ಈತನ ಸ್ಥಳ ಚಿಕ್ಕಮಂಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರು. ಇವರಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳಿದ್ದವು. ಇವರು "ಜೈಮಿನಿ ಭಾರತ ಎಂಬ " ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನು ಉಪಮಾಲೋಲ, ಕರ್ಣಾಟ ಕವಿಚೂತವನ ಚೈತ್ರ ಎಂಬ ಬಿರುದುಗಳನ್ನು ಹೊಂದಿದ್ದನು.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :** **1 X 4 = 4**

26. ನೀನುಳ್ಳೊಡೆಲ್ಲರೊಳರೆಮ

ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ |

ಭಾನುವ ಸಾಲದೆ ಪಗಲ್ಗೆ

ತಾನುಂ ದೀವಿಗೆಗಳುರಿದೊಡೇಂ ಕುಂದಪುದೇ ||

VIJAYAPUR DISTRICT KANNADA SUBJECT FORUM

**ಅಥವಾ**

ಕುರುಕುಳ ನಂದನಂ ಪವನನಂದನನೆಂಬ ಮದಾಂಧಗಂಧಸಿಂ

ಧುರಮೆ ಕಱುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ |

ರ್ಮರನುಱಿವಂತೆ ನೀನುಱಿದೆಯಿನ್ನಿಱಿವನ್ನರುಮಿಲ್ಲ ಮುತ್ತರುಂ

ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 X 4 = 4**

27. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ

ಮಂಡಲ - ಗಿಂಡಲಗಳ ಗಡ ಮುಕ್ಕಿ



ತೇಲಿಸಿ ಮುಳುಗಿಸಿ ಖಂಡ - ಖಂಡಗಳ

ಸಾರ್ವಭೌಮರಾ ನೆತ್ತಿಯ ಕುಕ್ಕಿ

ಹಕ್ಕಿ ಹಾರುತಿದೆ ನೋಡಿದಿರಾ?

ಕವಿ ದ. ರಾ. ಬೇಂದ್ರೆಯವರು ಹಕ್ಕಿ ಹಾರುತಿದೆ ಪದ್ಯದ ಈ ಚರಣಗಳಲ್ಲಿ ಕಾಲಚಕ್ರದಲ್ಲಿ ನಡೆದಿರುವ ಭೂಮಂಲದ ರಾಜಕೀಯ ಹಾಗೂ ಪ್ರಾಕೃತಿಕ ಪ್ರಗತಿ ಹಾಗೂ ವಿನಾಶದ ಬದಲಾವಣೆಗಳನ್ನು ಕುರಿತು ವರ್ಣಿಸುತ್ತಾರೆ.

ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣ ಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ ಅವುಗಳ ಫಲಿತವನ್ನು ಕೊಯ್ಲು ಮಾಡಿದೆ. ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು ಕೋಟೆ ಕೊತ್ತಲಗಳನ್ನು ನಾಶಗೊಳಿಸಿದೆ. ಕಾಲ ಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿಸಿ ಪ್ರಾಕೃತಿಕ ಬದಲಾವಣೆಗೆ ಕಾರಣವಾಗಿದೆ. ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ

ಎಂದು ವರ್ಣಿಸುತ್ತಾರೆ.

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು?

ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಭಾರತ ಸಂಸ್ಕೃತಿಯನ್ನು ಬಿಂಬಿಸುವ ಕನ್ನಡ ನಾಡಿನ ವೈಭವವನ್ನು ಮೆರೆಸುವಂತಹ ವೇಷಭೂಷಣಗಳನ್ನೇ ತೊಟ್ಟಿದ್ದರು. ಅಗಲವಾದ ಎಂಟೂವರೆ ಮೊಳ ಉದ್ದದ ಖಾದಿ ಕಪ್ಪು ಪಂಚೆಯನ್ನು ಉಟ್ಟಿದ್ದರು. ಅದು ಖಾದಿಯಲ್ಲಿನ ದಪ್ಪ ನೂಲಿನ ಬಟ್ಟೆಯಾಗಿತ್ತು. ಅದಕ್ಕೆ ಅಗಲವಾದ ಕೆಂಪು ಕಂಬಿ, ಕಂಬಿಯ ತುದಿಯಲ್ಲಿ ನಾಲ್ಕು ಜರಿ ಗೆರೆಗಳಿದ್ದವು. ಭಾರತದಲ್ಲಿದ್ದಾಗ ಅತೀ ಭರ್ಜರಿಯಾಗಿ ಕಾಣುತ್ತದೆಂದು ಅದನ್ನು ಹೆಚ್ಚಾಗಿ ಉಡುತ್ತಿರಲಿಲ್ಲ. ಹೊರದೇಶಕ್ಕೆ ಹೋಗುವಾಗ ದಪ್ಪವಾಗಿರುವುದರಿಂದ ಬೆಚ್ಚಗಿರುತ್ತದೆಂದು ತೆಗೆದುಕೊಂಡು ಹೋಗಿದ್ದರು. ಚಳಿಯಿದ್ದ ಕಾರಣ ಅದನ್ನು ಉಟ್ಟುಕೊಂಡಿದ್ದರಲ್ಲದೆ ಒಂದು ಕೆಂಪು ಉಣ್ಣೆಯ ಶಾಲು ಹೊತ್ತುಕೊಂಡಿದ್ದರು. ತಲೆಗೆ ಮಫ್ಲರ್ ಕಟ್ಟಿಕೊಂಡಿದ್ದರು. ಕಾವಿ ಬಣ್ಣದ ನೀಳವಾದ ಜುಬ್ಬ ತೊಟ್ಟಿದ್ದರು. ಹಣೆಯಲ್ಲಿ ಥಾಳಾದ ಕೆಂಪು ನಾಮ, ತಲೆ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿ ಗಡ್ಡ, ಬಿಳಿ ಮೀಸೆ, ಕಾಲಿಗೆ ದಪ್ಪವಾದ ಎಕ್ಕಡ, ಅವರ ಮೈಯಲ್ಲಿರುವ ಉಡುಪುಗಳಲ್ಲಿ ಏಳೆಂಟು ಬಣ್ಣಗಳು ಕಾಣುತ್ತಿದ್ದವು. ಹೀಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳಿದ್ದವು.

**ಅಥವಾ**

ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿಧ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು?



ಗೊರೂರು ರಾಮಸ್ವಾಮಿ ಅಯ್ಯಂಗಾರರು ತಾವು ಸ್ಕೂಲಿಗೆ ಹೋದ ವಿಷಯವನ್ನೇ ಮರೆತು, ಅಲ್ಲಿನ ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳೊಂದಿಗೆ ಮಾತಿನಲ್ಲಿ ತೊಡಗುತ್ತಾರೆ. ಗಾಂಧೀಜಿಯವರನ್ನು ನೆನಪಿಸಿಕೊಳ್ಳುವ ಮೂಲಕ ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಪರಿಚಯಿಸುತ್ತ "ನಾನು ಗಾಂಧಿ ಭಾರತದಲ್ಲಿ ಜನಿಸಿದವನು. ಭಾರತದಲ್ಲಿ ಹವೆ ಬಹಳ ಹಿತವಾಗಿರುತ್ತದೆ. ಅಲ್ಲಿ ಅತ್ಯಂತ ಕಡಿಮೆ ಬಟ್ಟೆಗಳಿಂದ ಜೀವಿಸಬಹುದು. ಈ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧೀಜಿಯವರು. ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ.. ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಬಳಕೆಯಾಗಿಲ್ಲ." ಎಂದರು. ಆಗ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಬಟ್ಟೆಯನ್ನು ಮುಟ್ಟಿ ನೋಡಿ ಅದರಲ್ಲಿಯ ಉಪಾಧ್ಯಾಯರೊಬ್ಬರು ಲೇಖಕರ ಮಾತಿನಲ್ಲಿ ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ಆಗ ಗೊರೂರರು ಚರಕದಿಂದ ಹತ್ತಿಯನ್ನು

ನೂಲುವ ಹಾಗೂ ಮಗ್ಗದಿಂದ ಬಟ್ಟೆಯನ್ನು ನೆಯುವ ಇತ್ಯಾದಿ ವಿಷಯಗಳನ್ನು ತಿಳಿಸುತ್ತ ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಅಮೆರಿಕದ ಉಪಾಧ್ಯಾಯರು ಮತ್ತು ವಿಧ್ಯಾರ್ಥಿಗಳಿಗೆ ಪರಿಚಯಿಸಿದರು.

29. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

ಪಾಂಡವರನ್ನು ರಕ್ಷಿಸಬೇಕೆಂಬ ಮಹದಾಶೆಯೊಂದಿಗೆ ಕೃಷ್ಣ ಕೌರವರ ಸೇನೆಯಲ್ಲಿದ್ದ ಕರ್ಣನ್ನು ಒಲಿಸಿಕೊಳ್ಳಲು ಒಂದು ಸಂದರ್ಭವನ್ನು ಸೃಷ್ಟಿಸುತ್ತಾನೆ. ಕರ್ಣನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು "ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನೆ ನಿಜವಾಗಿ ಈ ಭೂಮಿಯ ಅಧಿಪತಿ. ಅದರ ಅರಿವು ನಿನಗಿಲ್ಲ. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ನೀನೆ ಮೊದಲಿಗ. ನಂತರ ಧರ್ಮರಾಯ. ಮೂರನೆಯವನು ಭೀಮ. ನಾಲ್ಕನೆಯ ಮಂತ್ರದಿಂದ ಜನಿಸಿದವ ಅರ್ಜುನ. ಐದನೆಯ ಮಂತ್ರದಿಂದ ಮಾದ್ರಿಯ ಹೊಟ್ಟೆಯಲ್ಲಿ ಜನಿಸಿದವರೇ ನಕುಲ ಸಹದೇವರು" ಎಂದು ಆತನ ಹುಟ್ಟಿನ ರಹಸ್ಯವನ್ನು ತಿಳಿಸುತ್ತ "ಕರ್ಣ ಐದು ಜನ ಪಾಂಡವರಿಗಿಂತ ನೀನು ಹಿರಿಯವನು. ನಿನಗೆ ಈ ವಿಚಾರವನ್ನು ತಿಳಿಸುವದಕ್ಕಾಗಿಯೇ ನಿನ್ನನ್ನು ಕರೆದುಕೊಂಡು ಬಂದಿರುವೆನು. ನೀನು ಪಾಂಡವರ ಕಡೆಗೆ ಬಂದರೆ ನಿನ್ನನ್ನು ಹಸ್ತಿನಾವತಿಗೆ ರಾಜನಾಗಿ ಮಾಡುವೆನು. ಪಾಂಡವ ಕೌರವರು ನಿನ್ನನ್ನು ಒಪ್ಪಿಕೊಳ್ಳುವರು. ನಿನಗೆ ಎರಡೂ ವಂಶದವರು ಮರು ಮಾತನಾಡದೆ ಸೇವೆಯನ್ನು ಮಾಡುವರು. ನಿನ್ನ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು ಎದುರಲ್ಲಿ ಮಾದ್ರ ಮಾಗದ ಯಾದವಾದಿಗಳು, ಅವರ ಮಧ್ಯದಲ್ಲಿ ನೀನು ರಾಜನಾಗಿ ರಾರಾಜಿಸುವೆ" ಎಂದು ಕರ್ಣನಿಗೆ ಶ್ರೀಕೃಷ್ಣನು ಆಮಿಷಗಳನ್ನು ಒಡ್ಡಿದನು.

VIJAYAPUR DISTRICT KANNADA SUBJECT FORUM

**ಅಥವಾ**

ಪಾಂಡವರು ಸೋದರರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ತನ್ನ ಒಡೆಯನ ಮೇಲೆ ಅಪಾರ ನಂಬಿಕೆಯಿಟ್ಟು ಪಾಂಡವರನ್ನು ಎದುರಿಸುವ ಭರದಲ್ಲಿದ್ದ



ಕರ್ಣನಿಗೆ ಕೃಷ್ಣನು ಜನ್ಮ ರಹಸ್ಯವನ್ನು ತಿಳಿಸಿ, ಆಮಿಷಗಳನ್ನು ಒಡ್ಡಿದಾಗ ಕರ್ಣನ ಕೊರಳಸೆರೆ ಹಿಗ್ಗಿದವು. ಕಂಬನಿಯು ರಭಸದಿಂದ ಹರಿಯತೊಡಗಿದವು. ಅತ್ಯಂತ ದುಃಖತಪ್ತನಾದ ಕರ್ಣನು ಮನದಲ್ಲಿ ನೊಂದುಕೊಂಡು ದುರ್ಯೋಧನನಿಗೆ ಕೇಡಾಯಿತು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ? ಎಂದು ಮನದಲ್ಲಿ ನೊಂದುಕೊಂಡನು. ಕೃಷ್ಣನನ್ನು ಕುರಿತು "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ

ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಭರದಲ್ಲಿದ್ದೆ. ಆದರೆ ನೀನು ನನ್ನ ಜನ್ಮರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ. ಆ ವೀರ ದುರ್ಯೋಧನನೇ ನನಗೆ ಒಡೆಯ. ಆತನ ಶತ್ರುಗಳು ನನಗೂ ಶತ್ರುಗಳು. ನಾಳಿನ ಭಾರತವು ಮಾರಿಗೌತಣವಾಗುವುದು. ಕೌರವನ ಉಪಕಾರ (ಋಣ) ತೀರಿಸಲು ಯುದ್ಧರಂಗದಲ್ಲಿ ಹೋರಾಡಿ ಅವನಿಗಾಗಿ ಶರೀರವನು ನೂಕುವೆನು ಆದರೆ ನಿನ್ನ ವೀರರೈವರನು ನೋಯಿಸೆನು ರಾಜೀವಸಖನ ಮೇಲಾಣೆ" ಎಂದನು. ಹೀಗೆ ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿ ಬದಲಾಯಿತು.

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**
**1X4=4 (2+2)**

"ನಡತೆ ಅಥವಾ ಚಾರಿತ್ರ್ಯ ಎಂದರೆ ಸಂಪೂರ್ಣವಾಗಿ ರೂಪುಗೊಂಡ ಇಚ್ಚಾ ಶಕ್ತಿ" ಎಂಬುದು ಜಾನ್ ಸ್ಟೂಯರ್ಟ್ ಮಿಲ್ ಮಹಾಶಯ ನೀಡಿದ ನಿರೂಪಣೆ. ಇಚ್ಚಾ ಶಕ್ತಿ ಎಂದರೆ ಕಾರ್ಯಪ್ರೇರಕವಾದ ಅನಿಸಿಕೆಗಳ ಒಟ್ಟು ಮೊತ್ತ. ಅವು ನಿಶ್ಚಿತ, ನಿಯಮಿತ, ರಚನಾತ್ಮಕ ರೀತಿಯಲ್ಲಿ ವ್ಯಕ್ತವಾದರೆ ಅಂಥ ವ್ಯಕ್ತಿಯ ಚಾರಿತ್ರ್ಯ ದೃಢವಾಗಿದೆ ಎಂದರ್ಥ. "ಯಾರನ್ನೂ ಅಪ್ರಯೋಜಕ ವ್ಯಕ್ತಿ ಎನ್ನಬೇಡಿ, ಏಕೆಂದರೆ ಆತನೊಂದು ಚಾರಿತ್ರ್ಯವನ್ನು ಪ್ರತಿನಿಧಿಸುತ್ತಾನೆ.; ಎಂದರೆ ತಾನು ಒಂದು ತೆರನಾದ ಅಭ್ಯಾಸಗಳ ಮೂಟೆ ಎಂಬುದನ್ನು ಸೂಚಿಸುತ್ತಾನೆ. ಹಳೆಯ ಅಭ್ಯಾಸಗಳನ್ನು ನೂತನ ಉಪಯುಕ್ತ ಅಭ್ಯಾಸಗಳಿಂದ ಗೆಲ್ಲಬಹುದು. ನಡತೆ ಎಂದರೆ ಪುನರಾವರ್ತಿತ ಕ್ರಿಯೆಗಳ ಮೂಲಕವೆ ನಡತೆಯಲ್ಲಿ ಸುಧಾರಣೆಗಳಾಗಬೇಕು" ಎಂದರು ಸ್ವಾಮಿ ವಿವೇಕಾನಂದರು.

**ಪ್ರಶ್ನೆಗಳು :**

1. ಚಾರಿತ್ರ್ಯದ ಬಗ್ಗೆ 'ಜಾನ್ ಸ್ಟೂಯರ್ಟ್ ಮಿಲ್ ನೀಡಿದ ಹೇಳಿಕೆಯನ್ನು ವಿವರಿಸಿರಿ.

ಚಾರಿತ್ರ್ಯದ ಬಗ್ಗೆ "ನಡತೆ ಅಥವಾ ಚಾರಿತ್ರ್ಯ ಎಂದರೆ ಸಂಪೂರ್ಣವಾಗಿ ರೂಪುಗೊಂಡ ಇಚ್ಚಾ ಶಕ್ತಿ". ಇಚ್ಚಾ ಶಕ್ತಿ ಎಂದರೆ ಕಾರ್ಯಪ್ರೇರಕವಾದ ಅನಿಸಿಕೆಗಳ ಒಟ್ಟು ಮೊತ್ತ. ಅವು ನಿಶ್ಚಿತ, ನಿಯಮಿತ, ರಚನಾತ್ಮಕ ರೀತಿಯಲ್ಲಿ ವ್ಯಕ್ತವಾದರೆ ಅಂಥ ವ್ಯಕ್ತಿಯ ಚಾರಿತ್ರ್ಯ ದೃಢವಾಗಿದೆ ಎಂದರ್ಥ. ಎಂಬುದು ಜಾನ್ ಸ್ಟೂಯರ್ಟ್ ಮಿಲ್ ನೀಡಿದ ಹೇಳಿಕೆ.

2. 'ನಡತೆ'ಯಲ್ಲಿನ ಸುಧಾರಣೆಗಳ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯವೇನು?



'ನಡತೆ'ಯಲ್ಲಿನ ಸುಧಾರಣೆಗಳ ಬಗ್ಗೆ "ಹಳೆಯ ಅಭ್ಯಾಸಗಳನ್ನು ನೂತನ ಉಪಯುಕ್ತ ಅಭ್ಯಾಸಗಳಿಂದ ಗೆಲ್ಲಬಹುದು. ಪುನರಾವರ್ತಿತ ಕ್ರಿಯೆಗಳ ಮೂಲಕವೆ ನಡತೆಯಲ್ಲಿ

ಸುಧಾರಣೆಗಳಾಗಬೇಕು" ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ.

## ಭಾಗ - 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ :** **10 X 1 = 10**

31. 'ಶರಶ್ಚಂದ್ರ' ಪದವು ಈ ಸಂಧಿಗೆ ಸೂಕ್ತ ಉದಾಹರಣೆಯಾಗಿದೆ :

ಎ) ಆದೇಶ ಸಂಧಿ ಬಿ) ಅನುನಾಸಿಕ ಸಂಧಿ ಸಿ) ಶ್ಚುತ್ವ ಸಂಧಿ ಡಿ) ಜಶ್ತ್ವ ಸಂಧಿ

VIJAYAPUR DISTRICT KANNADA SUBJECT FORUM

ಉತ್ತರ: ಸಿ) ಶ್ಚುತ್ವ ಸಂಧಿ

32. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಲೇಖನ ಚಿಹ್ನೆಯನ್ನು ಬಳಸುವರು :

ಎ) ಭಾವಸೂಚಕ ಬಿ) ಉದ್ಧರಣ ಸಿ) ವಾಕ್ಯವೇಷ್ಟನ ಡಿ) ವಿವರಣಾತ್ಮಕ

ಉತ್ತರ: ಬಿ) ಉದ್ಧರಣ

33. "ಭೀಮನು ದುಷ್ಟನಾದ ಬಕನನ್ನು ಕೊಂದನು" ಈ ವಾಕ್ಯದಲ್ಲಿರುವ ಕಾಲ ಪ್ರತ್ಯಯ :

ಎ) ಭಿಮ ಬಿ) ದುಷ್ಟ ಸಿ) ಅನ್ನು ಡಿ) ದ

ಉತ್ತರ: ಡಿ) ದ

34. 'ಇಲ್ಲದ್ಹಂಗ' ಪದದ ಗ್ರಾಂಥಿಕ ರೂಪವಿದು :

ಎ) ಇಲ್ಲದ ಹಂಗ ಬಿ) ಇಲ್ಲದಂತೆ ಸಿ) ಇಲ್ಲದಾಂಗ ಡಿ) ಇಲ್ಲದ ಹಾಗೆ

ಉತ್ತರ: ಡಿ) ಇಲ್ಲದ ಹಾಗೆ

35. 'ಗಾಂಡಿವಿಯೊಳ್' ಪದವು ಈ ವಿಭಕ್ತಿಯಲ್ಲಿದೆ :

ಎ) ಪ್ರಥಮಾ ಬಿ) ತೃತೀಯಾ ಸಿ) ಪಂಚಮಿ ಡಿ) ಸಪ್ತಮಿ

ಉತ್ತರ: ಡಿ) ಸಪ್ತಮಿ

36. 'ಅನ್ವರ್ಥನಾಮ' ಪದಕ್ಕೆ ಉದಾಹರಣೆಯಿದು :

ಎ) ಕಮಲಾಕ್ಷ ಬಿ) ವ್ಯಾಪಾರಿ ಸಿ) ಆಗ್ನೇಯ ಡಿ) ಪರ್ವತ

ಉತ್ತರ: ಬಿ) ವ್ಯಾಪಾರಿ

37. 'ತಂಬಾಕು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

ಎ) ಅರಬ್ಬಿ ಬಿ) ಪೋರ್ಚಗೀಸ್ ಸಿ) ಪರ್ಷಿಯನ್ ಡಿ) ಉರ್ದು

ಉತ್ತರ: ಬಿ) ಪೋರ್ಚಗೀಸ್

38. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥಹ ವಾಕ್ಯವು :



ಎ) ಸಾಮಾನ್ಯ ವಾಕ್ಯ ಬಿ) ನಿಷೇಧಾರ್ಥಕ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಮಿಶ್ರ ವಾಕ್ಯ

ಉತ್ತರ:ಡಿ) ಮಿಶ್ರ ವಾಕ್ಯ

39. 'ಬಡತನ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ :

ಎ) ತದ್ಧಿತಾಂತ ನಾಮ ಬಿ) ತದ್ಧಿತಾಂತ ಭಾವನಾಮ ಸಿ) ತದ್ಧಿತಾಂತ ಅವ್ಯಯ ಡಿ) ಕೃದಂತಾವ್ಯಯ

ಉತ್ತರ:ಬಿ) ತದ್ಧಿತಾಂತ ಭಾವನಾಮ

40. ಕೊಟ್ಟಿರುವ ಧಾತುಗಳಲ್ಲಿ ಅಕರ್ಮಕಧಾತು ಪದವಿದು :

ಎ) ಕೊಡು ಬಿ) ಬಿಡು ಸಿ) ಹೋಗು ಡಿ) ನೋಡು

ಉತ್ತರ:ಸಿ) ಹೋಗು

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 X 1 = 4**

41. ನಟ್ಟನಡುವೆ ; ದ್ವಿರುಕ್ತಿ :: ಮನೆಮಠ ; ……………………….

ಉತ್ತರ:ಜೋಡುನುಡಿ

42. ಕಬ್ಬ ; ಕಾವ್ಯ :: ಬೇಹಾರಿ ; ……………………….

ಉತ್ತರ:ವ್ಯಾಪಾರಿ.

43. ದೈವಭಕ್ತಿ ; ತತ್ಪುರುಷ ಸಮಾಸ :: ಅಬ್ಜೋದರ ; ……………………….

ಉತ್ತರ:ಬಹುವ್ರೀಹಿ ಸಮಾಸ.

44. ಓಹೋ ; ಭಾವಸೂಚಕಾವ್ಯಯ :: ಅಥವಾ ; ……………………….

ಉತ್ತರ: ಸಂಬಂಧಾರ್ಥಕಾವ್ಯಯ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ:**
**1 X 3 = 3**

UUUU UU - UU-
ಅತಿಕುಟಿ|ಲಮನಂ |ಧನಲು = 12

UU - - - U – U UU - UU -
ಬ್ಧತೆಯಿಂ|ದಂ ದು|ಷ್ಟಬುದ್ಧಿ |ನುಡಿದಂ| ಪುಸಿಯಂ = 20

**ಛಂದಸ್ಸಿನ ಹೆಸರು :** <u>ಕಂದಪದ್ಯ.</u>

**ಅಥವಾ**

26

- U -UU -U -UU
ಬೇಢ|ವಿಲ್ಲಲೆ| ಕರ್ಣ| ನಿಮ್ಮೊಳು = 14

- U UU - UUU UU-
ಯಾದ|ವರು ಕೌ|ರವರೊ|ಳಗೆ ಸಂ = 14

-U UU- UUU UUUU -U - - -
ವಾದಿ|ಸುವಡ|ನ್ವಯಕೆ| ಮೊದಲೆರ|ಡಿಲ್ಲ| ನಿನ್ನಾ|ಣೆ =21+2

**ಛಂದಸ್ಸಿನ ಹೆಸರು :** <u>ಭಾಮಿನಿ ಷಟ್ಪದಿ.</u>

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ : 1 X 3 = 3**

46. ಶ್ರೀ ರಂಗರಾಜರ ಚರಣಾಂಬುಜ ಮೂಲದಾಸಃ

**ಅಲಂಕಾರದ ಹೆಸರು** : ರೂಪಕ ಅಲಂಕಾರ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕ ಅಲಂಕಾರ.

**ಉಪಮೇಯ** : ಚರಣ

**ಉಪಮಾನ** : ಅಂಬುಜ

**ಸಮನ್ವಯ** : ಇಲ್ಲಿ ಉಪಮೇಯವಾದ ಚರಣವನ್ನು ಉಪಮಾನವಾದ ಅಂಬುಜಕ್ಕೆ ಅಭೇದವಾಗಿ ಹೋಲಿಸಲಾಗಿದ್ದರಿಂದ ಇದು ರೂಪಕ ಅಲಂಕಾರ.

**ಅಥವಾ**

VIJAYAPUR DISTRICT KANNADA SUBJECT FORUM

"ಬಳಗಿನ ಮಂದಿ ಗುಂಡು ಹೊಡೆದಂಗ ಮುಂಗಾರಿ ಸಿಡಿಲು ಸಿಡಿದ್ಹಾಂಗ"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ಗುಂಡು ಹೊಡೆಯುವುದು.

**ಉಪಮಾನ** : ಮುಂಗಾರಿ ಸಿಡಿಲು

**ಉಪಮಾವಾಚಕ ಪದ** : ಹಂಗ.

**ಸಮಾನ ಧರ್ಮ**: ಹೊಡೆಯುವುದು.

**ಸಮನ್ವಯ** : ಇಲ್ಲಿ ಉಪಮೇಯವಾದ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿ ಸಿಡಿಲು ಸಿಡಿಯುವುದಕ್ಕೆ ಹೋಲಿಸಲಾಗಿದ್ದರಿಂದ ಇದು ಉಪಮಾ ಅಲಂಕಾರ.



## ಭಾಗ - 'ಸಿ'

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವೂದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : 1X3 = 3**

- ಕಾಯಕವೇ ಕೈಲಾಸ.
- ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ.
- ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು.

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ _ __________________ ಎಂಬ ಗಾದೆ ಪ್ರಸಿದ್ಧವಾಗಿದೆ.

--------------------------------------------------

--------------------------------------------------

--------------------------------------------------

--------------------------------------------------

**48.** ನಿಮ್ಮನ್ನು ವಿಜಯಪುರದ ಸರ್ಕಾರಿ ಪ್ರೌಢ ಶಾಲೆಯ ಸುಜಯ / ಸುಸ್ಮಾ ಎಂದು ಭಾವಿಸಿ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ನಿಮ್ಮೂರಿನ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.. **1 X 5 = 5**

VIJAYAPUR DISTRICT KANNADA SUBJECT FORUM

**ಅಥವಾ**

ನಿಮ್ಮನ್ನು ಹುಬ್ಬಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ರಾಮು/ಭಾಗ್ಯಶ್ರೀ ಎಂದು ಭಾವಿಸಿ, ವಿಜಯಪುರದಲ್ಲಿ ವಾಸವಾಗಿರುವ ನಿಮ್ಮ ಸ್ನೇಹಿತನಿಗೆ ಕರ್ನಾಟಕ ರಾಜ್ಯೋತ್ಸವ ಆಚರಿಸಿದ ಬಗ್ಗೆ ಪತ್ರ ಬರೆಯಿರಿ.

**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

------------------

------------------

------------------

ಇವರಿಗೆ,

------------------

------------------

------------------



ಮಾನ್ಯರೆ,

ವಿಷಯ : --------------------------------

--------------------------------

-----------------------------------------------

-----------------------------------------------

-----------------------------------------------

-----------------------------------------------

-------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ---------- ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------

**2. ವಯಕ್ತಿಕ ಪತ್ರದ ಹಂತಗಳು :**

VIJAYAPUR DISTRICT KANNADA SUBJECT FORUM

ಇಂದ,

------------------

------------------

------------------

ದಿನಾಂಕ. ----------------

(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

---------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)

ಮುಖ್ಯ ವಿಷಯವೆನೆಂದರೆ ---------------------------

----------------------------------------------



----------------------------------------------

----------------------------------------------

---------------------------------------------

------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,
-------------------------
-------------------------
-------------------------

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.** **1 X 5 = 5**

- ಗಣಕ ಯಂತ್ರದ ಮಹತ್ವ..
- ಪರಿಸರ ರಕ್ಷಣೆಯಲ್ಲಿ ವಿದ್ಯಾರ್ಥಿಯ ಪಾತ್ರ.
- ವಿಜ್ಞಾನ ಕ್ಷೇತ್ರಕ್ಕೆ ಅಬ್ದುಲ ಕಲಾಂಜಿ ನೀಡಿದ ಕೊಡುಗೆ.

**ಪೀಠಿಕೆ :** ______________________________

VIJAYAPUR DISTRICT KANNADA SUBJECT FORUM

______________________________

**ವಿವರಣೆ :** ____________________________________

__________________________________________

__________________________________________

__________________________________________

__________________________________________

__________________________________________

**ಉಪಸಂಹಾರ :** ___________________________________

__________________________________________

__________________________________________

*****************



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

# ವಿಷಯ : ಪ್ರಥಮ ಭಾಷೆ ಕನ್ನಡ.

**2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 2.**

| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಗದ್ಯಭಾಗ** | | | | | | | | | | | | | | |
| 01 | ಶಬರಿ. | | | | | | | | | | 4(1) | | | **4** | **1** |
| 02 | ಅ. ಗೊರೂರು. | | 1(1) | | | | | | | 3(1) | | | | **4** | **2** |
| 03 | ಜೀವನ ದೃಷ್ಟಿ. | | 1(1) | | | 2(1) | | | | | | | | **3** | **2** |
| 04 | ಧರ್ಮ ಸಮದೃಷ್ಟಿ. | | 1(1) | | | 2(1) | | | | | | | | **3** | **2** |
| 05 | ಭಾ.ಶಿ.ಎಂ. ವಿ. | | 1(1) | | | 2(1) | | | | | | | | **3** | **2** |
| 06 | ಎದೆಗೆ ಬಿದ್ದ ಅಕ್ಷರ. | | | | | | | | | 3(1) | | | | **3** | **1** |
| 07 | ವೃಕ್ಷ ಸಾಕ್ಷಿ. | | 1(1) | | | 2(1) | | | | | | | | **3** | **2** |
| 08 | ವ್ಯಾಘ್ರಗೀತೆ. | | | | | | 3(1) | | | | | | | **3** | **1** |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗೇಳ್. | | 1(1) | | | | 3(1) | | | | | | | **4** | **2** |
| 02 | ಹ.ಹಾ. ನೋಡಿದಿರಾ. | | | 4(1) | | | | | | | | | | **4** | **1** |
| 03 | ಹಲಗಲಿ ಬೇಡರು. | | 1(1) | | | 2(1) | | | | | | | | **3** | **2** |
| 04 | ವಚನ ಸೌರಭ. | | | | | | | | | 3(1) | | | | **3** | **1** |
| 05 | ಸಂಕಲ್ಪಗೀತೆ. | | | | | | | | | | 4(1) | | | **4** | **1** |
| 06 | ಕೌ. ಕೊಂ. ನೀನು. | | | | | | | | | | | | 4(1) | **4** | **1** |
| 07 | ವೀರಲವ. | | | | | | | | | 3(1) | | | | **3** | **1** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |



| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | 1 | 2 | | 2 | 1 | 2 | 2 | 1 | 2 | 3 | 2 | | |
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | 2(1) | | | | | | | | **2** | **1** |
| 02 | ನಾಮಫಲಕ. | | | | | 2(1) | | | | | | | | **2** | **1** |
| 03 | ಉದಾತ್ತಚಿಂತನೆಗಳು | | | | | | | | 2(1) | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದಒಗಟುಗಳು | | | | | | | | 2(1) | | | | | **2** | **1** |
| | **ಪ. ಪೋ.ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಪ್ರಶ್ನಾನುಸಾರ ವಿಶ್ಲೇಷಣೆ - 2

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 3 ನಿಮಿಷ |

Vijayapur District Kannada Subject Forum

| | | | | | | |
|---|---|---|---|---|---|---|
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 4 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 17 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 18 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 19 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸುಲಭ | 4 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 4 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 5 ನಿಮಿಷ |



| **ಪ್ರಶ್ನೆ ಸಂಖ್ಯೆ** | **ಉದ್ದಿಷ್ಟ** | **ನಿರ್ದಿಷ್ಟ** | **ಪ್ರಶ್ನೆ ಸ್ವರೂಪ** | **ಅಂಕ** | **ಕಠಿಣತೆಯ ಮಟ್ಟ** | **ಬೇಕಾಗುವ ಸಮಯ** |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಸಾಧಾರಣ | 5 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಕಠಿಣ | 6 ನಿಮಿಷ |
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 5 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 5 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪಠಿತ ಗದ್ಯ | 4 | ಸಾಧಾರಣ | 6 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |

Vijayapur District Kannada Subject Forum

| | | | | | | |
|---|---|---|---|---|---|---|
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 41 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 42 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 43 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 44 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಸಾಧಾರಣ | 5 ನಿಮಿಷ |
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಕಠಿಣ | 5 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸಾಧಾರಣ | 4.5 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಸಾಧಾರಣ | 10 ನಿಮಿಷ |



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 2.

## ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 9 X 1 = 9**

1. ಖಾದಿ ಬಟ್ಟೆಯನ್ನು ಪ್ರಚಾರಕ್ಕೆ ತಂದವರು ಯಾರು?

   ಖಾದಿ ಬಟ್ಟೆಯನ್ನು ಪ್ರಚಾರಕ್ಕೆ ತಂದವರು ಗಾಂಧೀಜಿ.

2. ಅಂತರ್‌ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ?

   ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅಂತರ್‌ಜೀವಿಯ ಎಲ್ಲ ಶಕ್ತಿಯು ವೆಚ್ಚವಾಗುತ್ತಿರುತ್ತದೆ.

3. ಬುಕ್ಕರಾಯನ ಹಿರಿಮೆ ಏನು?

   ಬುಕ್ಕರಾಯನ ಹಿರಿಮೆ ಸಮನ್ವಯತೆ ಹಾಗೂ ಧರ್ಮಸಮದೃಷ್ಟಿ.

4. ಸರ್ ಎಂ. ವಿಶ್ವೇಶ್ವರಯ್ಯನವರ ತಂದೆ ತಾಯಿಯ ಹೆಸರೇನು?

   ಸರ್ ಎಂ. ವಿಶ್ವೇಶ್ವರಯ್ಯನವರ ತಂದೆಯ ಹೆಸರು ಶ್ರೀನಿವಾಸ ಶಾಸ್ತ್ರಿ ತಾಯಿಯ ಹೆಸರು

VIJAYAPUR DISTRICT KANNADA SUBJECT FORUM

ವೆಂಕಟಲಕ್ಷ್ಮಮ್ಮ.

5. ಮಧುರಾ ನಗರದ ವಣಿಕ ಪುತ್ರರು ಯಾರು?

ಮಧುರಾ ನಗರದ ವಣಿಕ ಪುತ್ರರು ಧರ್ಮಬುದ್ಧಿ. ಹಾಗೂ ದುಷ್ಟಬುದ್ಧಿ.

6. ಗಾಂಡೀವಿ ಎಂದು ಅರ್ಜುನನನ್ನು ಏಕೆ ಕರೆಯುತ್ತಾರೆ?

ಅರ್ಜುನನು ಗಾಂಡೀವ ಎಂಬ ಬಿಲ್ಲನ್ನು ಹೊಂದಿದ್ದರಿಂದ ಗಾಂಡೀವಿ ಎಂದು ಕರೆಯುತ್ತಾರೆ.

7. ಲಾವಣಿಕಾರನು ಅಂಕಿತಗೊಳಿಸಿದ ದೈವ ಯಾರು?

ಲಾವಣಿಕಾರನು ಅಂಕಿತಗೊಳಿಸಿದ ದೈವ ಕುರ್ತಕೋಟಿ ಕಲ್ಮೇಶ.

8. ಕವಿಯತ್ರಿ ಇಂದುಮತಿಯವರು ಯಾರಿಗೆ ಊರುಗೋಲಾಗಬೇಕೆಂದು ಆಶಿಸುತ್ತಾರೆ?

ಕವಿಯತ್ರಿ ಇಂದುಮತಿಯವರು ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರಿಗೆ ಊರುಗೋಲಾಗಬೇಕೆಂದು ಆಶಿಸುತ್ತಾರೆ

9. ಪಾರಿವಾಳಗಳು ಬೇಡನ ಬಲೆಗೆ ಹೇಗೆ ಬಿದ್ದವು?

ಪಾರಿವಾಳಗಳು ಕುರುಡು ವಾತ್ಸಲ್ಯದಲ್ಲಿ ವಿವೇಕ ಕಳೆದುಕೊಂಡು ಬೇಡನ ಬಲೆಗೆ ಬಿದ್ದವು.

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಸಾಧಕರಿಗೆ ಅಂತರ್‌ಜೀವಿಗಳಿಗೆ ಸಮಾಜದ ಕರ್ತವ್ಯ ಯಾವುದು?



ಸಾಧಕರಿಗೆ ಅಂತರ್‌ಜೀವಿಗಳಿಗೆ ಯಾವ ತೊಂದರೆಯಾಗದಂತೆ ಸಮಾಜ ನೋಡಿಕೊಳ್ಳಬೇಕು. ಇವರಿಗಾಗಿಯೇ ಧರ್ಮಶಾಲೆಗಳು, ವಿಹಾರಗಳು, ಅನ್ನಛತ್ರಗಳು, ದೇವಸ್ಥಾನ ಹಾಗೂ ಮಠಗಳಿವೆ. ಅಷ್ಟೇ ಅಲ್ಲ ಇಂಥ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡವರಿದ್ದಾರೆ.

11. ಶಾಸನದ ಪ್ರಕಾರ ವೈಷ್ಣವರು ಪಾಲಿಸಬೇಕಾದ ಅಂಶಗಳು ಯಾವವು?

ಶಾಸನದ ಪ್ರಕಾರ 'ಜೈನ ಧರ್ಮಕ್ಕೆ ಈ ಹಿಂದೆ ಸಲ್ಲುತ್ತಿದ್ದಂತೆ ಪಂಚಮಹಾವಾದ್ಯಗಳು ಮತ್ತು ಕಳಸದ ಗೌರವ ಸಲ್ಲುವುದು. ಜೈನ ಧರ್ಮಕ್ಕೆ ಯಾವುದೇ ಹಾನಿಯಾಗಲಿ, ವೃದ್ಧಿಯಾಗಲಿ ಅದು ವೈಷ್ಣವ ಧರ್ಮಕ್ಕೆ ಆದ ಹಾನಿ, ವೃದ್ಧಿಯೆಂದು ತಿಳಿಯಬೇಕು. ಈ ನಿಯಮದಂತೆ ರಾಜ್ಯದಲ್ಲಿರುವ ಎಲ್ಲಾ ಬಸದಿಗಳಲ್ಲಿ ವೈಷ್ಣವರೇ ಶಾಸನಗಳನ್ನು ಹಾಕಿಸಿ ಇದನ್ನು ಪಾಲಿಸಬೇಕು. ಇದು ಸೂರ್ಯ ಚಂದ್ರರಿರುವವರೆಗೂ ಜೈನ ಧರ್ಮವನ್ನು ರಕ್ಷಿಸಿಕೊಂಡು ಬರಬೇಕೆಂಬ ಅಂಶಗಳನ್ನು ವೈಷ್ಣವರು ಪಾಲಿಸಬೇಕು.

12. ವಿಶ್ವೇಶ್ವರಯ್ಯನವರು ರಾಜ್ಯದ ಆರ್ಥಿಕ ಭದ್ರ ಬುನಾದಿಗೆ ಸ್ಥಾಪಿಸಿದ ಹಣಕಾಸು ಸಂಸ್ಥೆಗಳಾವವು?

ವಿಶ್ವೇಶ್ವರಯ್ಯನವರು1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಅನಂತರ

VIJAYAPUR DISTRICT KANNADA SUBJECT FORUM

ಉಳಿತಾಯ ಬ್ಯಾಂಕುಗಳು ಅಸ್ಥಿತ್ವಕ್ಕೆ ಬಂದವು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್, ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳ ರಚನೆ, ಸಾರ್ವಜನಿಕ ಜೀವವಿಮಾ ಯೋಜನೆ, ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕುಗಳ ಸ್ಥಾಪನೆ, ಆದಾಯ ಹೆಚ್ಚಿಸಲು ಹೊಸ ಆಯವ್ಯಯದ ದೃಷ್ಟಿಕೋನಗಳಿಂದ ರಾಜ್ಯದ ಆರ್ಥಿಕ ಭದ್ರ ಬುನಾದಿಗೆ ಶ್ರಮಿಸಿದರು.

13. ಪ್ರೇಮಮತಿಯು ಅನುಭವಿಸಿದ ವೇದನೆಯನ್ನು ತಿಳಿಸಿ.

ಪ್ರೇಮಮತಿಯು ಪೊಟರೆಯಲ್ಲಿದ್ದಾಗ ಧರ್ಮಬುದ್ಧಿಯು ಅದಕ್ಕೆ ಬೆಂಕಿ ಹಾಕಿದನು. ಹೊಗೆ ಸುತ್ತಿ ಬೆಂಕಿ ಧಗಧಗಿಸಲು ಪ್ರೇಮಮತಿ ದೈರ್ಯಗೆಟ್ಟು ಬೊಬ್ಬೆ ಹಾಕಿ ಪೊಟರೆಯೊಳಗಿಂದ ಹೊರಳಿ ಉರುಳಿ ಕಂಠಗತಪ್ರಾಣನಾದನು.

14. ಹಲಗಲಿ ದಂಗೆಗೆ ಕಾರಣವೇನು?

1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತೀಯರ ಮೇಲೆ ನಿಶ್ಯಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರಕಾರದ ಅನುಮತಿಯಿಲ್ಲದೆ ಭಾರತೀಯರು ಆಯುಧಗಳನ್ನು ಹೊಂದುವಂತಿಲ್ಲ ಹಾಗೂ ತಮ್ಮಲ್ಲಿರುವ ಆಯುಧಗಳನ್ನು ಸರಕಾರಕ್ಕೆ ಒಪ್ಪಿಸಬೇಕಾಗಿತ್ತು. ಇದನ್ನು ಹಲಗಲಿಯ ಬೇಡರು ವಿರೋಧಿಸಿದರು. ಇದು ಹಲಗಲಿ ದಂಗೆಗೆ ಕಾರಣವಾಯಿತು.

15. ಗಡಿಯ ಆಚೆ - ಈಚೆ ಜೀವಿಗಳು ಏಕೆ ಶವವಾದವು?

ಮಾನವನು ಭೂಮಿಯ ಮಾಲಿಕನಾದನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ



ಎಳೆದು ಗಡಿಯನ್ನು ನಿರ್ಮಿಸಿಕೊಂಡನು. ಈ ಗಡಿ ನನ್ನದು ಎಂದು ಗರ್ವಪಟ್ಟು ಯುದ್ಧ ಮಾಡಿದ್ದರಿಂದ ಗಡಿಯ ಆಚೆ - ಈಚೆ ಜೀವಿಗಳು ಶವವಾದವು.

16. ಲೇಖಕರ ಪ್ರಕಾರ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲುದು?

ಲೇಖಕರ ಪ್ರಕಾರ ವೈಜ್ಞಾನಿಕ ಮನೋಧರ್ಮ - ವಿಚಾರಗಳು ಪಠ್ಯದಲ್ಲಿ ಸೇರ್ಪಡೆಯಾಗಿ ವ್ಯಾಪಕವಾದ ಪ್ರಚಾರಕ್ಕೆ ಒಳಪಡಬೇಕು. ನಮ್ಮ ಸಮಾಜ ಎದುರುಸಿತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವನ್ನು ಸಹ ವೈಜ್ಞಾನಿಕ ಮನೋಭಾವಗಳಿಂದಲೇ ನೋಡಬೇಕು. ಆಗ ಮಾತ್ರ ವಿಶ್ವಧರ್ಮ ರೂಪಿತವಾಗಬಲ್ಲುದು.

17. ಭರತ ಚಕ್ರವರ್ತಿಯ ಗರ್ವರಸವು ಸೋರಲು ಕಾರಣವೇನು?

ಭರತ ಚಕ್ರವರ್ತಿಯು ಆರೂ ಖಂಡಗಳನ್ನು ಗೆದ್ದು ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ

VIJAYAPUR DISTRICT KANNADA SUBJECT FORUM

ಬರೆಸಲು ಹೋಗುತ್ತಾನೆ. ಅಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮ ಪ್ರಶಂಸೆಗಳು ತುಂಬಿ ಹೋಗಿದ್ದು, ಭರತೇಶನಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳ ದೊರೆಯದೇ ಅದನ್ನು ನೋಡಿ ಆತನ ಗರ್ವರಸವು ಸೋರಿ ಹೋಯಿತು.

18. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ ಇದರಿಂದ ಶಾಸನಗಳನ್ನು ರಚಿಸುವುದರಲ್ಲಿ, ಸರ್ಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ. ಅಲ್ಲದೆ ಜನರಿಗೆ ಜೀವನ, ಸ್ವಾತಂತ್ರ್ಯ ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

19. ಐದನೆಯ ಒಗಟಿನ ಉತ್ತರ 'ತಾವರೆ ಬೇರು' ಎಂಬುದನ್ನು ಹೇಗೆ ಸಮರ್ಥಿಸುವಿರಿ.

ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು ಗಿಡವಾಗುವುದೆಂದರೆ ಅದು ತಾವರಯೇ ಹೌದು. ತಾವರೆ ಹುಟ್ಟುವುದು ಕೆಸರಿನಲ್ಲೇ ಆಗಿದೆ. ಆದ್ದರಿಂದ ಆ ಒಗಟಿಗೆ ಅರ್ಥ ತಾವರೆ ಬೇರು.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. “ನನಗೆ ಇಂಗ್ಲಿಷ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿ ಬಿಡುತ್ತಿದ್ದೆ"

ಈ ವಾಕ್ಯವನ್ನು "ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ" ಅವರು ರಚಿಸಿರುವ "ಅಮೆರಿಕಾದಲ್ಲಿ ಗೊರೂರು" ಎಂಬ ಕೃತಿಯಿಂದಾಯ್ದ "ಅಮೆರಿಕಾದಲ್ಲಿ ಗೊರೂರು" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಅಮೆರಕದ ಮಗಳ ಮನೆಯಲ್ಲಿ ಅಡುಗೆ ಕೋಣೆಯಲ್ಲಿನ ಎಲ್ಲಾ ಸ್ವಿಚ್‌ಗಳು ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ಇದರಿಂದ ಭಯಗೊಂಡು ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂಬ ಆತಂಕ ಉಂಟಾದ ಸಂದರ್ಭದಲ್ಲಿ ಗೊರೂರರ ಹೆಂಡತಿ ಈ ಮಾತನ್ನು ಹೇಳುತ್ತಾಳೆ.



ಗೊರೂರರ ಹೆಂಡತಿಯು ತಮ್ಮ ಯಜಮಾನರಿಗೆ ಮನೆಯ ವಿದ್ಯುತ್ ಯಂತ್ರಗಳನ್ನು ಬಳಸುವುದರ ಜ್ಞಾನ ಇಲ್ಲದಿರುವ ಬಗ್ಗೆ ಕೋಪವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

21. “ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?”

ಈ ವಾಕ್ಯವನ್ನು "ಶ್ರೀ ದೇವನೂರು ಮಹಾದೇವ" ಅವರು ರಚಿಸಿರುವ "ಎದೆಗೆ ಬಿದ್ದ ಅಕ್ಷರ" ಎಂಬ ಕೃತಿಯಿಂದಾಯ್ದ "ಎದೆಗೆ ಬಿದ್ದ ಅಕ್ಷರ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಗ್ರಾಮದ ಜನರೆಲ್ಲ ಸೇರಿ ಮನೆ ಮಂಚಮ್ಮನಿಗೆ ಗುಡಿ ಕಟ್ಟಲು ಪ್ರಾರಂಭಿಸಿದ ಸಂದರ್ಭದಲ್ಲಿ ಗ್ರಾಮ ದೇವತೆ ಮಂಚಮ್ಮ ಒಬ್ಬನ ಮೈ ಮೇಲೆ ಆವಾಹಿಸಿಕೊಂಡು ಜನರಿಗೆ ಪ್ರಶ್ನಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

VIJAYAPUR DISTRICT KANNADA SUBJECT FORUM

ಗ್ರಾಮದ ಬಡ ಜನರಿಗೆ ಸ್ವಂತ ಮನೆ ಇಲ್ಲದಿದ್ದರೂ ದೇವರಿಗೆ ಮನೆ ಕಟ್ಟಲು ಹೊರಟ ಜನರ ಮುಗ್ಧತೆಯನ್ನು ಪ್ರಶ್ನಿಸುವುದರ ಮೂಲಕ ಮಂಚಮ್ಮ ಕಾರುಣ್ಯ ಮತ್ತು ಸಮಾನತೆಯ ದೇವತೆಯಂತೆ ಕಾಣುವುದು ಈ ಮಾತಿನ ಅರ್ಥವಾಗಿದೆ.

22. “ಪಗೆಯುಂ ನಣ್ಪುಂ ಕೈಕೊಂಡ ಕಜ್ಜದಿನಲ್ತೆ"

ಈ ವಾಕ್ಯವನ್ನು "ಆದಿ ಕವಿ ಪಂಪ" ಅವರು ರಚಿಸಿರುವ "ಪಂಪಭಾರತ" ಎಂಬ ಕೃತಿಯಿಂದ ಆಯ್ದ "ಎಮ್ಮ ನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಧೃತರಾಷ್ಟ್ರನು "ಪಾಂಡವರೊಡನೆ ಸಂಧಿ ಮಾಡಿಕೊಳ್ಳುವುದು ಉಚಿತವಾಗಿದೆ. ಯುದ್ಧ ಮಾಡುವುದು ಬೇಡ" ಎಂದು ದುರ್ಯೋಧನನಿಗೆ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಧೃತರಾಷ್ಟ್ರನು ದುರ್ಯೋಧನನಿಗೆ "ರಾಜರುಗಳಿಗೆ ಹಗೆತನವು, ಬಾಂಧವ್ಯವು ಅವರು ಮಾಡಿದ ಕಾರ್ಯದಿಂದ ಉಂಟಾಗುತ್ತವೆ ಎಂದು ಪ್ರಸಿದ್ಧವಾದ ದಂಡನೀತಿ ಶಾಸ್ತ್ರದಲ್ಲಿ ಹೇಳಿದ್ದನ್ನು ಪ್ರಸ್ತಾಪಿಸುತ್ತ ಸ್ವಾರಸ್ಯಪೂರ್ಣಾಗಿ ಹೇಳುತ್ತಾನೆ.

23. “ಜಾನಕಿಯ ಮಗನಿದಕೆ ಬೆದರುವನೆ"

ಈ ವಾಕ್ಯವನ್ನು "ಕವಿ ಲಕ್ಷ್ಮೀಶ" ನು ರಚಿಸಿರುವ "ಜೈಮಿನಿ ಭಾರತ" ಎಂಬ ಮಹಾ ಕಾವ್ಯದಿಂದ ಆಯ್ದ "ವೀರಲವ" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ರಾಮನ ಯಜ್ಞಾಶ್ವವನ್ನು ವೀರಲವನು ತನ್ನ ಉತ್ತರೀಯದಿಂದ ಬಾಳೆಗಿಡಕ್ಕೆ ಕಟ್ಟಿ ಹಾಕಿರುವುದನ್ನು ಕಂಡು ಮುನಿಕುಮಾರರು ಹೆದರಿ ಕುದುರೆಯನ್ನು ಬಿಡು ಎಂದು ಹೇಳುವ ಸಂದರ್ಭದಲ್ಲಿ ಲವನು ಈ ಮಾತನ್ನು ಹೇಳುವನು.

ಕ್ಷತ್ರಿಯ ವಂಶದವನಾದ ರಾಮ ಸೀತೆಯರ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣಾಗಿ ವ್ಯಕ್ತವಾಗಿದೆ.



**ಈ ಕೆಳಗಿನ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :**
**2 X 3 = 6**

24. ಎ. ಎನ್. ಮೂರ್ತಿರಾವ್

ಎ. ಎನ್. ಮೂರ್ತಿರಾವ್ ಅವರು ಕ್ರಿ.ಶ. 1900 ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿ ಹೆಬ್ಬಾಳು ಗ್ರಾಮದಲ್ಲಿ ಜನಿಸಿದರು. ಇವರು ಸಮಗ್ರ ಲಲಿತ ಪ್ರಬಂಧಗಳು, ದೇವರು, ಹಗಲುಗನಸು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಪಂಪ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳನ್ನು ನೀಡಿ ಗೌರವಿಸಲಾಗಿದೆ.

25. ಜೇಡರ ದಾಸಿಮಯ್ಯ

ಜೇಡರ ದಾಸಿಮಯ್ಯ ಅವರ ಕಾಲ ಸುಮಾರು ಕ್ರಿ. ಶ. 1040. ಯಾದಗಿರಿ ಜಿಲ್ಲೆಯ ಮುದೇನೂರಿನವರು. ಆದ್ಯ ವಚನಕಾರ ಎಂದು ಪ್ರಸಿದ್ಧರಾಗಿದ್ದಾರೆ. ಇವರ 150 ವಚನಗಳು ದೊರೆತಿವೆ. ಇವರ ಅಂಕಿತನಾಮ 'ರಾಮನಾಥ'. ಇವರ ವಚನಗಳು ಸಾಮಾಜಿಕ ಮೌಲ್ಯಗಳಿಂದ ಕೂಡಿವೆ.

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :** **1 X 4 = 4**

26. ನೀಲಮೇಘಮಂಡಲ - ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ - ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 X 4 = 4**

27. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ

ಭಯ ಸಂಶಯದೊಳು ಕಂದಿದ ಕಣ್ಣೊಳು

ನಾಳಿನ ಕನಸನು ಬಿತ್ತೋಣ

ಜಿ.ಎಸ್. ಶಿವರುದ್ರಪ್ಪನವರು ಈ ಪದ್ಯದಲ್ಲಿ 'ಎಲ್ಲಾ ಮತಗಳ ಧ್ಯೇಯ ಒಂದೆ ಆಗಿದ್ದು, ಸುಂದರ ಬದುಕಿಗೆ ಮಾರ್ಗವಾಗಿವೆ. ಸಂಶಯ ಅನುಮಾನಗಳೆಂಬ ಕತ್ತಲೆಯನ್ನು ಹೋಗಲಾಡಿಸಲು ಸಂಕಲ್ಪವೆಂಬ ಹಣತೆ ಬೆಳಕು ನೀಡಲಿ' ಎಂದು ಆಶಿಸಿದ್ದಾರೆ.

ಜಾತಿ ಮತಗಳು ಬೇರೆ ಬೇರೆ ರೀತಿ ನೀತಿಯನ್ನು ಅನುಸರಿಸುತ್ತಿದ್ದರೂ ಅವುಗಳ ಗುರಿ ಉದ್ದೇಶಗಳು ಒಂದೆಯಾಗಿವೆ. ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ನಾವು, ಭಾಷೆ, ಜಾತಿ, ಮತ, ಆಚಾರ, ವಿಚಾರಗಳಲ್ಲಿ ಭಿನ್ನತೆಯಿದ್ದರೂ ಒಂದೇ ಎಂಬ ಭಾವನೆಯಿಂದ ಬದುಕುತ್ತಿದ್ದೇವೆ. ಎಲ್ಲಾ ಮತಧರ್ಮಗಳು ಸುಂದರ ಬದುಕಿಗೆ ಸನ್ಮಾರ್ಗಗಳನ್ನು ತೋರಿಸುತ್ತವೆ ಎನ್ನುವ ಹೊಸ ಎಚ್ಚರಿಕೆಯಿಂದ, ಭೇದ, ಭಾವಗಳನ್ನು ಹೊಡೆದು ಹಾಕಿ, ಭಯ, ಸಂಶಯ, ಅನುಮಾನದಿಂದಿ ಕೂಡಿದ ಕಣ್ಣುಗಳಲ್ಲಿ ಶಾಂತಿ, ಸಮಾನತೆ ಸುಂದರ ಬದುಕುಗಳನ್ನು ಬಿತ್ತೋಣ ಎಂಬುದು ಈ ಪದ್ಯದ ಆಶಯವಾಗಿದೆ.

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಹಗಲಿರುಳು ರಾಮನ ಬರುವಿಕೆಗಾಗಿಯೇ ಹಂಬಲಿಸುತ್ತ ಕಾಯುತ್ತಿರುವಾಗ ದನುವಿನ ಸಲಹೆಯಂತೆ ರಾಮಲಕ್ಷ್ಮಣರು ಆಶ್ರಮಕ್ಕೆ ಬಂದಿರುವುದನ್ನು ಕಂಡು ಹಿರಿಹಿರಿ ಹಿಗ್ಗಿ ಸಂತೋಷಪಡುತ್ತಾಳೆ. ಆ ಸಂಭ್ರಮದಲ್ಲಿ ತನ್ನನ್ನೆ ತಾನು ಮರೆತು ಅತೀವ ಆನಂದದಿಂದ ಅವರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ನಿಮ್ಮನ್ನು ಕಂಡ ನಾನು ಪರಮಸುಖಿ, ಸುಮ್ಮನೆ ಸುಖಿನಾನು ಎಂದು ಹಾಡುತ್ತ ನರ್ತಿಸುತ್ತಾಳೆ. ಸಡಗರದಲ್ಲಿ ಕಣ್ಣೀರು ತುಂಬಿಕೊಂಡು ನನ್ನ ಇರುವಿಕೆಯನ್ನು ಗುರುತಿಸಿ, ಬಂದು ಸಂತಸ ನೀಡಿದಿರಿ. ನಿಮಗೆ ಹಸಿವು ತೃಷೆ ಹಿಂಗಿತೇ? ಬಡವಿಯಾದ ನನ್ನ ಮೇಲೆ ಮರುಕ ತೋರಿದಿರಾ? ಎಂದಾಗ ರಾಮನು ನಿನ್ನ ಕಣ್ಣಲ್ಲಿ ನೀರೇಕೆ ತಾಯಿ? ನೀನು ಯಾವ ಕೊರತೆಯನ್ನೂ ಮಾಡಿಲ್ಲ, ಅರಮನೆಯ ಸುಖಕ್ಕಿಂತ ಮಿಗಿಲಾಗಿದೆ ನಿನ್ನ ಆತಿಥ್ಯ. ಇಂದು ಕಾಡನ್ನು ಮರೆತು ಮನೆಯೆಂದು ತಿಳಿದೆವು. ನೀನೆ ನಮ್ಮ ತಾಯಿ ಎಂದುಕೊಂಡೆವು. ಎಂದಾಗ ಶಬರಿಯು ನಿನ್ನ ರೂಪಿನಂತೆ ಮಾತು ಕೂಡ ಉದಾರವಾಗಿದೆ. ಸಿದ್ಧರ ಫಲವು ಇಂದು ಫಲಿಸಿತು. ಗುರು ಪೂಜೆಯನ್ನು ಮಾಡಿದ ಪುಣ್ಯ ದೊರೆಯಿತು. ನಾನು ಧನ್ಯನಾದೆ. ಇಂದು ನನ್ನ ಮನಸ್ಸಿನ ಭಾರ ಇಳಿಯಿತು. ನನ್ನ ಜೀವನ ಸಾರ್ಥಕವಾಯಿತು. ಇನ್ನು ನನಗೆ ಮುಕ್ತಿಯನ್ನು ದೊರಕಿಸಿಕೊಡು ಎಂದು ಸಂತೋಷಪಡುತ್ತ ತನ್ನ ಮನಸ್ಸಿನ ಚಿಂತೆಯನ್ನು ಹಿಂಗಿಸಿಕೊಂಡಳು.

**ಅಥವಾ**

ಶಬರಿಯ ಮುಗ್ಧತೆ ಹಾಗೂ ರಾಮನ ಸರಳ ಸಜ್ಜನಿಕೆಯನ್ನು ನಿಮ್ಮ ಮಾತುಗಲ್ಲಿ ಬರೆಯಿರಿ.



ಶ್ರೀರಾಮ ದಶರಥನ ಪುತ್ರ, ಸಾಧು ಸಜ್ಜನರ ಮಿತ್ರ, ಧೀರ, ಶೂರ, ವೀರ ಗಂಭೀರ, ಸದ್ಗುಣಗಳ ಸಾಕಾರಮೂರ್ತಿ. ಅವುಗಳ ಸಾರವೇ ಮೈವೆತ್ತಂತೆ ರೂಪ. ಸೌಮ್ಯ ಸ್ವಭಾವದ ಮುಗ್ಧ ಮಗುವಿನಂತಿರುವ ರಾಮ ಅರಸುತನವನ್ನು ತೊರೆದಿರುವವನು. ತಪಸ್ವಿಯಂತಿರುವನು. ಸುಪ್ರಭಾತದ ಸೂರ್ಯನಂತಿರುವ ರಾಮ ಗುರುಗಳು, ಸಾಧಕರು, ತಪಸ್ವಿಗಳು ಮೆಚ್ಚುವಂಥ ಸನ್ಮಂಗಳಮೂರ್ತಿ. ಆ ಪ್ರೇಮಮೂರ್ತಿಯನ್ನು ಕಾಣಬೇಕೆಂಬ ಬಹು ಹಂಬಲ ಶಬರಿಗೆ. ಆ ದಿನ ಕೂಡ ಬಂದಿತು. ರಾಮ ಲಕ್ಷ್ಮಣರು ಆಶ್ರಮದ ಮುಂದೆ ಬಂದು ನಿಂತಾಗ ಶಬರಿ ಮುಗ್ಧ ಮಗುವಿನಂತೆ ಕುಣಿದಾಡಿದಳು. ಕೊರಳಿಗೆ ಹೂಮಾಲೆಯನ್ನು ಹಾಕಿ, ಪಾದಮುಟ್ಟಿ ನಮಸ್ಕರಿಸಿದಳು. ಆತನ ಕೈಯನ್ನು ತನ್ನ ಕಣ್ಣಿಗೊತ್ತಿಕೊಂಡು ಆನಂದಪಟ್ಟಳು. ತಾನು ತಂದ ಹಣ್ಣುಗಳನ್ನು ತಿನ್ನಿಸಿದಳು. ಇದರಿಂದ ಪ್ರಸನ್ನರಾದ ರಾಮಲಕ್ಷಣರನ್ನು ಕಂಡು ಧನ್ಯತಾಭಾವದಿಂದ ಆನಂದಿತಳಾದಳು. ಇದು ಶಬರಿಯ ಮುಗ್ಧತೆ ಹಾಗೂ ಶ್ರೀರಾಮನ ಸರಳ ಸಜ್ಜನಿಕೆಯನ್ನು ತಿಳಿಸುತ್ತದೆ.

29. ಕರ್ಣನೊಡನೆ ಶ್ರೀಕೃಷ್ಣನು ಮೈದುನತನದ ಸರಸವೆಸಗಿದ ಸಂದರ್ಭ ವಿವರಿಸಿ.

VIJAYAPUR DISTRICT KANNADA SUBJECT FORUM

ಕಪಟನಾಟಕದ ಸೂತ್ರಧಾರನಾದ ಶ್ರೀಕೃಷ್ಣ ಸಂಧಿಯ ನೆಪದಲ್ಲಿ ದುರ್ಯೋಧನನ ಬಲ ಕುಗ್ಗಿಸುವ ಸಲುವಾಗಿ ಮೊದಲು ವಿಧುರನಲ್ಲಿಗೆ ಬರುತ್ತಾನೆ. ಇದರಿಂದ ಕುಪಿತನಾದ ದುರ್ಯೋಧನ ವಿಧುರನನ್ನು ಹೀಗಳೆಯುವನಲ್ಲದೆ, ಸಂಧಿಯು ತಿರಸ್ಕೃತವಾಗುತ್ತದೆ. ಯುದ್ಧ ಅನಿವಾರ್ಯವಾದಾಗ ಕೌರವರ ಪಕ್ಷದಲ್ಲಿ ಪಾಂಡವರನ್ನು ಕೊಲ್ಲಬಲ್ಲ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿ, ಶ್ರೀ ಕೃಷ್ಣನು ಎಲ್ಲರನ್ನೂ ಬೀಳ್ಕೊಂಡು ರಥದಲ್ಲಿ ಜೊತೆಗೆ ಬರುವಂತೆ ಕರ್ಣನನ್ನು ಕರೆದನು. ಕರ್ಣನು ರಥದಲ್ಲಿ ಕುಳಿತ ಮೇಲೆ ಶ್ರೀಕೃಷ್ಣನ ವರ್ತನೆ ಸಂಪೂರ್ಣವಾಗಿ ಬದಲಾಗಿತ್ತು. ಮೈದುನನನ್ನು ಕಾಣುವಷ್ಟೇ ಪ್ರೀತಿಯಿಂದ ಬರಸೆಳೆದು, ತನ್ನ ಪಕ್ಕದಲ್ಲಿಯೇ ತೊಡೆಗೆ ತೊಡೆ ಹಚ್ಚಿ ಕೂಡಿಸಿಕೊಂಡನು. ಅವರಿಬ್ಬರ ನಡುವೆ ಮಾತುಕತೆ ಪ್ರಾರಂಭವಾಯಿತು. ಕರ್ಣನಿಗೆ ತಾನು ಹೀನ ಜಾತಿಯವನೆಂಬ ಸಂಕೋಚವೂ ಅಳುಕು ಇತ್ತು. ಕೃಷ್ಣನ ಪಕ್ಕದಲ್ಲಿ ಕುಳಿತಿದ್ದ ಕರ್ಣನು ಹೆದರಿಕೆಯಿಂದ ದೇವಾ! ನಿಮ್ಮಡಿಗಳಲ್ಲಿ ಎನಗೆ ಸಮಸೇವನೆಯೇ ಛೇ! ಛೇ! ಬೇಡ. ದೇವಾ! ಮುರಾರಿ ನನಗೆಕೋ ಹೆದರಿಕೆಯಾಗುತ್ತದೆ ಎಂದಾಗ, ಹಾಗೆನಿಲ್ಲ ಕರ್ಣ! ನಿಮಗೂ ಯಾದವರಿಗೂ ಕೌರವರಿಗೂ ವಂಶಗೌರವದಲ್ಲಿ ಭೇದವಿಲ್ಲ. "ನಿನ್ನಾಣೆ! ನೀನು ವಾಸ್ತವವಾಗಿ ಭೂಮಿಯ ಒಡೆಯ. ಆದರೆ ಅದಿನ್ನೂ ನಿನಗೆ ತಿಳಿದಿಲ್ಲ." ಈ ಮಾತುಗಳನ್ನು ಹೇಳಿ ಕೃಷ್ಣನು ಕರ್ಣನಲ್ಲಿ ದ್ವಂದ್ವ ನಿಲುವನ್ನು ಬಿತ್ತದನು. ಇದು

ಈರ್ವರಲ್ಲಿ ಸರಸವೆಸಗಿದ ಸಂದರ್ಭ.

**ಅಥವಾ**

"ಪತಿಯವಸರಕ್ಕೆ ಶರೀರವನು ನೂಕುವೆನು" ಎಂಬ ಕರ್ಣನ ನಿರ್ಧಾರ ಸರಿಯೇ ? ಏಕೆ?

42

ಹೌದು. ಕರ್ಣನ ಮಾತುಗಳಲ್ಲೇ ಹೇಳುವುದಾದರೆ "ಶ್ರೀಕೃಷ್ಣ! ವೀರ ಕೌರವರಾಯನೇ ನನ್ನ ಪ್ರಭು. ಅವನಿಗೆ ಯಾರು ಶತ್ರುಗಳೊ ಅವರೆಲ್ಲ ನನಗೂ ಶತ್ರುಗಳೆ. ದುರ್ಯೋಧನನ ಚಿಂತನೆಗಳೇ ನನ್ನ ಚಿಂತನಗಳು. ಅವನಿಗೆ ಏನಾಗುತ್ತದೋ ನನಗೂ ಅದೇ ಆಗಲಿ. ವೈರಿಗಳ ಶಿರಗಳನ್ನು ಕತ್ತರಿಸಿ ಒಪ್ಪಿಸಬೇಕೆಂಬ ಭರದಲ್ಲಿದ್ದೆ. ಆದರೆ ನೀನು ಮೋಸ ಮಾಡಿದೆ. ಕೃಷ್ಣ ಹೇಳು, ನಾಳಿನ ಯುದ್ಧದಲ್ಲಿ ಪಾಂಡವರಿಗೆ ನನ್ನ ನಿಜಭುಜದ ಪರಾಕ್ರಮವನ್ನು ತೋರಿಸುತ್ತೇನೆ. ನಾಳಿನ ಭಾರತವು ಮಾರಿಗೆ ಔತಣವಾಗಲಿದೆ. ಒಡೆಯನಿಗಾಗಿ ಹೋರಾಡಿ ಸಾಯುತ್ತೇನೆ. ನೀನು ನನ್ನ ಜನ್ಮ ರಹಸ್ಯದ ವೃತ್ತಾಂತವನ್ನೆಲ್ಲ ಹೇಳಿದ್ದಿಯಾ? ಆದುದರಿಂದ ಸೂರ್ಯದೇವನ ಆಣೆ ಮಾಡಿ ಹೇಳುತ್ತೇನೆ ನಿನ್ನ ಪಾಂಡವರೈವರನ್ನು ನೋಯಿಸುವುದಿಲ್ಲ. ಒಡೆಯನಿಗಾಗಿ ಹೊರಾಡುತ್ತೇನೆ. ಈ ಶರೀರವನ್ನು ನೂಕುತ್ತೇನೆ." ಎಂದನು ಆದುದರಿಂದ ಕರ್ಣನ ನಿರ್ಧಾರ ಸರಿ ಇದೆ.

ಇಲ್ಲಿ ಕರ್ಣನ ಕರ್ತವ್ಯನಿಷ್ಠೆ, ಅನ್ನದಾತನ ಬಗ್ಗೆ ಇರುವ ನಿಯತ್ತು, ಅಚಲ ನಿರ್ಧಾರ, ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದರೂ ನೋವು ಸಂಕಟಗಳಿಂದ ಬಳಲಿದರೂ ಕರ್ಣನ ದೃಢಭಾವ ಅವನ ಮೇರು ವ್ಯಕ್ತಿತ್ವದ ಹಿರಿಮೆಗೆ ಹಿಡಿದ ಕೈಗನ್ನಡಿಯಂತಿದೆ.

VIJAYAPUR DISTRICT KANNADA SUBJECT FORUM

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 X 4 = 4 (2+2)**

ಭಯದ ಮೂಲವಿರುವುದು ಆಕಾಶದ ಯಾವುದೋ ಮೂಲೆಯಲ್ಲಲ್ಲ. ಆಕಾಶದಿಂದ ಬಾಂಬುಗಳು ಉದುರಿದರೂ ಕಾರ್ಖಾನೆಗಲ್ಲಿ ಅವು ತಯಾರಾಗಿದ್ದರೂ, ಮನುಷ್ಯನ ಮನಸ್ಸಿನಲ್ಲಿರುವ ಭಯವೇ ಅದರ ಕಾರಣ. ಭಯದಿಂದ ಸಂಶಯ, ಸಂಶಯದಿಂದ ಕೋಪ, ಕೋಪದಿಂದ ಹಿಂಸೆ, ಹಿಂಸೆಯಿಂದ ಸರ್ವನಾಶಕ ದುರಂತಗಳೇ ಉಂಟಾಗುವವು. ವಿಚಾರ ಶಕ್ತಿಯನ್ನು ಕಾರ್ಯನಿಷ್ಠೆಯನ್ನು ಹಾಳುಗೆಡಹುವವು. ಆದುದರಿಂದ ಅದನ್ನು ಅಲ್ಲಿಂದಲೇ ಉಚ್ಚಾಟನೆ ಮಾಡಬೇಕು. ಒಬ್ಬ ನಿರ್ಭೀತಿಯ ಮಹಾವೀರ ತನ್ನ ಬದುಕಿನಲ್ಲಿ ಧೈರ್ಯ, ಪರಾಕ್ರಮ ಉನ್ನತ ಆದರ್ಶಗಳ ಮೂಲಕ ಜನಾಂಗದ ಭೀತಿಯನ್ನೇ ದೂರ ಮಾಡಬಲ್ಲ ಸ್ವಾಮಿ ವಿವೇಕಾನಂದ, ಗಾಂಧೀಜಿಯವರ ಜೀವನದಲ್ಲೂ ನಾವು ಕಾಣುವುದು ಇದನ್ನೇ ಅಲ್ಲವೇ?.

**ಪ್ರಶ್ನೆಗಳು :**

1. ಭಯದಿಂದ ಆಗುವ ಪರಿಣಾಮವೇನು?

ಭಯದಿಂದ ಸಂಶಯ, ಸಂಶಯದಿಂದ ಕೋಪ, ಕೋಪದಿಂದ ಹಿಂಸೆ, ಹಿಂಸೆಯಿಂದ ಸರ್ವನಾಶಕ ದುರಂತಗಳೇ ಉಂಟಾಗುವವು. ವಿಚಾರ ಶಕ್ತಿಯನ್ನು ಕಾರ್ಯನಿಷ್ಠೆಯನ್ನು ಹಾಳುಗೆಡಹುವವು.ಇವು ಭಯದಿಂದ ಆಗುವ ಪರಿಣಾಮಗಳು.



2. ಭಯವನ್ನು ದೂರ ಮಾಡಿದವರು ಯಾರು ಯಾರು? ಹೇಗೆ?

ಒಬ್ಬ ನಿರ್ಭೀತಿಯ ಮಹಾವೀರ ತನ್ನ ಬದುಕಿನಲ್ಲಿ ಧೈರ್ಯ, ಪರಾಕ್ರಮ ಉನ್ನತ ಆದರ್ಶಗಳ ಮೂಲಕ ಜನಾಂಗದ ಭೀತಿಯನ್ನೇ ದೂರ ಮಾಡಬಲ್ಲ ಸ್ವಾಮಿ ವಿವೇಕಾನಂದ, ಗಾಂಧೀಜಿಯವರ ಜೀವನದಲ್ಲೂ ನಾವು ಇದನ್ನೇ ಕಾಣುತ್ತೇವೆ.

## ಭಾಗ - 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ :** **10 X 1 = 10**

31. 'ಜಸ್ತ್ವ' ಸಂಧಿಗೆ ಉದಾಹರಣೆಯಾದ ಪದ :

ಎ) ಅಬ್ದಿ ಬಿ) ಬೆಂಗಾವಲು ಸಿ) ಸನ್ಮಾನ ಡಿ) ಗಿರೀಶ

ಉತ್ತರ:ಎ) ಅಬ್ದಿ

32. ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು :

ಎ) ? ಬಿ) ! ಸಿ) ' ' ಡಿ) ( )

ಉತ್ತರ:ಬಿ) !

VIJAYAPUR DISTRICT KANNADA SUBJECT FORUM

33. 'ತಿ ಂದನು' ಈ ಪದದಲ್ಲಿರುವ ಕಾಲಸೂಚಕ ಪ್ರತ್ಯಯ

ಎ) ಉತ್ತ ಬಿ) ವ ಸಿ) ದ ಡಿ) ಅನ್ನು

ಉತ್ತರ:ಸಿ) ದ

34. 'ಬ ಿಂದಮನ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ದ್ವಂದ್ವ ಬಿ) ಕ್ರಿಯಾ ಸಿ) ತತ್ಪುರುಷ ಡಿ) ಗಮಕ

ಉತ್ತರ: ಡಿ) ಗಮಕ

35. 'ಹ' ಿೂನ್ನಿಂಗೆ ಪದವು ಈ ವಿಭಕ್ತಿಯಲ್ಲಿದೆ

ಎ) ಚತುರ್ಥಿ ಬಿ) ಪ್ರಥಮಾ ಸಿ) ತೃತೀಯಾ ಡಿ) ಪಂಚಮಿ

ಉತ್ತರ:ಎ) ಚತುರ್ಥಿ

36. 'ಆತ್ಮಾರ್ಥಕ' ಸರ್ವನಾಮಕ್ಕೆ ಉದಾಹರಣೆಯಿದು :

ಎ) ಯಾರು ಬಿ) ತಮ್ಮ ಸಿ) ನಾನು ಡಿ) ಇವಳು

ಉತ್ತರ: ಬಿ) ತಮ್ಮ

37. 'ಕಾಗದ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

ಎ) ಪೋರ್ಚಗೀಸ್ ಬಿ) ಫಾರ್ಸಿ ಸಿ) ಉರ್ದು ಡಿ) ಹಿಂದುಸ್ಥಾನಿ



ಉತ್ತರ:ಡಿ) ಹಿಂದುಸ್ಥಾನಿ

38. ಕೃದಂತ ಭಾವನಾಮಕ್ಕೆ ಉದಾಹರಣೆಯಾದ ಪದವಿದು :

ಎ) ಬಾಳುವ ಬಿ) ಮಾಡಲು ಸಿ) ನಗದ ಡಿ) ನೆನಪು

ಉತ್ತರ:ಡಿ) ನೆನಪು

39. ಗುಂಪಿಗೆ ಸೇರದ್ದನ್ನು ಗುರ್ತಿಸಿ :

ಎ) ರಗಳೆ ಬಿ) ಷಟ್ಪದಿ ಸಿ) ವೃತ್ತಗಳು ಡಿ) ಕಂದಪದ್ಯ

ಉತ್ತರ:ಸಿ) ವೃತ್ತಗಳು

40. "ಭೀಮನು ದುಷ್ಟನಾದ ಬಕನನ್ನು ಕೊಂದನು" ಈ ವಾಕ್ಯದಲ್ಲಿರುವ ಕರ್ಮಪದ ಗುರ್ತಿಸಿ :

ಎ) ಕೊಂದನು ಬಿ) ಬಕನನ್ನು ಸಿ) ಭೀಮನು ಡಿ) ದುಷ್ಟನಾದ

ಉತ್ತರ:ಬಿ) ಬಕನನ್ನು

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

VIJAYAPUR DISTRICT KANNADA SUBJECT FORUM

41. ಬೆಣ್ಣೆ ; ದೇಶ್ಯ ಪದ :: ಪೆನ್ನು ; ..........................

ಉತ್ತರ:ಅನ್ಯದೇಶ್ಯ ಪದ.

42. ಹಣ್ಣು ; ಸಜಾತಿ ಸಂಯುಕ್ತಾಕ್ಷರ :: ಬ್ರಹ್ಮಾಸ್ತ್ರ ; ..........................

ಉತ್ತರ: ವಿಜಾತಿ ಸಂಯುಕ್ತಾಕ್ಷರ.

43. ಹುಳಹುಪ್ಪಡಿ ; ಜೋಡುನುಡಿ :: ಒಬ್ಬೊಬ್ಬ ; ..........................

ಉತ್ತರ: ದ್ವಿರುಕ್ತಿ.

44. ಕೂಡಲೇ ; ಸಾಮಾನ್ಯರ್ಥಕಾವ್ಯಯ :: ಉಂಟು ; ……………………….

ಉತ್ತರ: ಕ್ರಿಯಾರ್ಥಕಾವ್ಯಯ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ:**

**1 X 3 = 3**

- -     U -U UUUU<br>
ನೀನು|ಳ್ಳೊಡೆಲ್ಲ|ರೊಳರೆಮ =12<br>
-UU   -  UU  U – U  - UU  UU -<br>
ಗೇನುಮ|ಟಲ್ ಮನ|ದೊಳಿಲ್ಲ|ದೆಂತೆನೆ| ಮಗನೇ =20

**ಛಂದಸ್ಸಿನ ಹೆಸರು :** ಕಂದ ಪದ್ಯ.

45

**ಅಥವಾ**

-U  -UU  -U   - -<br>
ವೀರ| ಕೌರವ|ರಾಯ|ನೇ ದಾ =14<br>
-U  -UU UUU   UU-<br>
ತಾರ|ನಾತನ| ಹಗೆಯ| ಹಗೆ ಕೈ =14<br>
-U  - -  -U  - -  UUU  UUUU  -<br>
ವಾರ|ವೇ ಕೈ|ವಾರ|ವಾದಂ|ತಹೆನು| ಕುರುನೃಪ|ತಿ =21+2

**ಛಂದಸ್ಸಿನ ಹೆಸರು :** ಭಾಮಿನಿ ಷಟ್ಪದಿ.

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ :** **1 X 3 = 3**

46. "ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಪಾಸಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ"

**ಅಲಂಕಾರದ ಹೆಸರು :** ಅರ್ಥಾಂತರನ್ಯಾಸ ಅಲಂಕಾರ.

**ಲಕ್ಷಣ :** ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದು. ಅರ್ಥಾಂತರನ್ಯಾಸ ಅಲಂಕಾರ.

VIJAYAPUR DISTRICT KANNADA SUBJECT FORUM

**ಉಪಮೇಯ(ವಿ.ವಾ):** ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಪಾಸಾದನು.

**ಉಪಮಾನ (ಸಾ.ವಾ)** : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ.

**ಸಮನ್ವಯ** : ಇಲ್ಲಿ 'ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಪಾಸಾದನು' ಎಂಬ ವಿಶೇಷ ವಾಕ್ಯವನ್ನು (ಉಪಮೇಯ) ಲೋಕದಲ್ಲಿ ಎಲ್ಲ ಬುದ್ಧಿವಂತ ಮಕ್ಕಳಿಗೆ ಅನ್ವಯವಾಗುವಂತಹ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?'ಎಂಬ ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥಿಸಲಾಗಿದೆ.

**ಅಥವಾ**

“ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಘತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ನೀಚರಿಗೆ ಮಾಡಿದ ಉಪಕಾರ.

**ಉಪಮಾನ** : ಹಾವಿಗೆ ಹಾಲೆರೆಯುವುದು.

46

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ**: ಲುಪ್ತ.(ನಿರರ್ಥಕ)

**ಸಮನ್ವಯ** : ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರ ಉಪಮಾನವಾದ ಹಾವಿಗೆ ಹಾಲೆರೆಯುವುದಕ್ಕೆ ಹೋಲಿಸಲಾಗಿದೆ. ಇದರಲ್ಲಿ ಸಮಾನ ಧರ್ಮ ಇಲ್ಲದಿರುವುದರಿಂದ ಇದು ಲುಪ್ತೋಪಮಾಲಂಕಾರ.

## ಭಾಗ - ‘ಸಿ'

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ :1X3 = 3**

- ಅಲ್ಪರ ಸಂಗ ಅಭಿಮಾನ ಭಂಗ.
- ಕೋಟಿ ವಿದ್ಯಗಳಲ್ಲಿ ಮೇಟಿ ವಿದ್ಯೆಯೇ ಮೇಲು.
- ಕಬ್ಬು ಡೊಂಕಾದರೆ ಸಿಹಿ ಡೊಂಕೆ.

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ

VIJAYAPUR DISTRICT KANNADA SUBJECT FORUM

ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ ______ ________________ ಎಂಬ ಗಾದೆ ಪ್ರಸಿದ್ಧವಾಗಿದೆ.

--------------------------------------------

------------------------------------------------

------------------------------------------------

------------------------------------------------

**48.** ನಿಮ್ಮನ್ನು ವಿಜಯಪುರ ತಾಲೂಕಿನ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆ, ಕನ್ನೂರಿನ ಸುಮಂಗಲಾ ಎಂದು ಭಾವಿಸಿ ನೀರಿನ ಸಂಸ್ಕರಣಾ ಘಟಕ ಸ್ಥಾಪಿಸುವಂತೆ ಕೋರಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ. **1 X 5 = 5**

**ಅಥವಾ**

ನಿಮ್ಮನ್ನು ಹುಬ್ಬಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ಮಂಜುನಾಥ/ಆಶಾ ಎಂದು ಭಾವಿಸಿ, ವಿಜಯಪುರದಲ್ಲಿ ವಾಸವಾಗಿರುವ ನಿಮ್ಮ ಸ್ನೇಹಿತನಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪೂರ್ವಸಿದ್ಧತೆ ತಯಾರಿ ಕುರಿತು ಪತ್ರ ಬರೆಯಿರಿ.



**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ಇವರಿಗೆ,

-----------------

-----------------

-----------------

ಮಾನ್ಯರೆ,

ವಿಷಯ : -----------------------------

------------------------------

-------------------------------------------

VIJAYAPUR DISTRICT KANNADA SUBJECT FORUM

-------------------------------------------

------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ----------  ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------

**2. ವಯಕ್ತಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ದಿನಾಂಕ. ----------------

(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

------------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ



ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)

ಮುಖ್ಯ ವಿಷಯವೆನೆಂದರೆ ----------------------------

-------------------------------------------------

-------------------------------------------------

-------------------------------------------------

-------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,

-------------------------

-------------------------

-------------------------

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.** **1 X 5 = 5**

- ಐತಿಹಾಸಿಕ ಸ್ಮಾರಕಗಳ ರಕ್ಷಣೆ.
- ಕೃಷಿಯ ಪ್ರಾಮುಖ್ಯತೆ.
- ಹವಾಮಾನದ ವೈಪರಿತ್ಯ.

**ಪೀಠಿಕೆ :** ______________________________

VIJAYAPUR DISTRICT KANNADA SUBJECT FORUM

______________________________

______________________________

**ವಿವರಣೆ :** ______________________________

______________________________

______________________________

______________________________

______________________________

______________________________

**ಉಪಸಂಹಾರ :** ______________________________

______________________________

______________________________

*****************



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

# ವಿಷಯ : ಪ್ರಥಮ ಭಾಷೆ ಕನ್ನಡ.

**2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 3.**

| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | 1 | 2 | | 2 | 1 | 2 | 2 | 1 | 2 | 3 | 2 | | |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| | **ಗದ್ಯಭಾಗ** | | | | | | | | | | | | | | |
| 01 | ಶಬರಿ. | | | | | | | | | | 4(1) | | | **4** | **1** |
| 02 | ಅ. ಗೊರೂರು. | | 1(1) | | | | 3(1) | | | | | | | **4** | **2** |
| 03 | ಜೀವನ ದೃಷ್ಟಿ. | | 1(1) | | | 2(1) | | | | | | | | **3** | **2** |
| 04 | ಧರ್ಮ ಸಮದೃಷ್ಟಿ. | | 1(1) | | | 2(1) | | | | | | | | **3** | **2** |
| 05 | ಭಾ.ಶಿ.ಎಂ. ವಿ. | | 1(1) | | | 2(1) | | | | | | | | **3** | **2** |
| 06 | ಎದೆಗೆ ಬಿದ್ದ ಅಕ್ಷರ. | | | | | | | | | 3(1) | | | | **3** | **1** |
| 07 | ವೃಕ್ಷ ಸಾಕ್ಷಿ. | | | | | | | | | 3(1) | | | | **3** | **1** |
| 08 | ವ್ಯಾಘ್ರಗೀತೆ. | | 1(1) | | | 2(1) | | | | | | | | **3** | **2** |
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗೇಳ್. | | 1(1) | | | | 3(1) | | | | | | | **4** | **2** |
| 02 | ಹ.ಹಾ. ನೋಡಿದಿರಾ. | | | 4(1) | | | | | | | | | | **4** | **1** |
| 03 | ಹಲಗಲಿ ಬೇಡರು. | | 1(1) | | | 2(1) | | | | | | | | **3** | **2** |
| 04 | ವಚನ ಸೌರಭ. | | | | | | | | | 3(1) | | | | **3** | **1** |
| 05 | ಸಂಕಲ್ಪಗೀತೆ. | | | | | | | | | | | | 4(1) | **4** | **1** |
| 06 | ಕೌ. ಕೊಂ. ನೀನು. | | | | | | | | | | 4(1) | | | **4** | **1** |
| 07 | ವೀರಲವ. | | | | | | | | | 3(1) | | | | **3** | **1** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |

VIJAYAPUR DISTRICT KANNADA SUBJECT FORUM



| **ಕ್ರ. ಸಂ.** | **ಪಾಠದ ಹೆಸರು** | **ಸ್ಮರಣೆ** | | | **ಗ್ರಹಿಕೆ** | | | | **ಅಭಿವ್ಯಕ್ತಿ** | | | | **ಪ್ರಶಂಸೆ** | **ಅಂಕಗಳು** | **ಪ್ರಶ್ನೆಗಳ ಸಂ.** |
|---|---|---|---|---|---|---|---|---|---|---|---|---|---|---|---|
| | | **ವ** | **ಕಿ** | **ದೀ** | **ವ** | **ಕಿ** | **ದೀ** | **ದೀ** | **ಕಿ** | **ದೀ** | **ದೀ** | **ದೀ** | **ದೀ** | | |
| | | **ನಿ** | **ಉ** | **ಉ** | **ನಿ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | | | | 2(1) | | | | | **2** | **1** |
| 02 | ನಾಮಫಲಕ. | | | | | 2(1) | | | | | | | | **2** | **1** |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 03 | ಉದಾತ್ತಚಿಂತನೆಗಳು | | | | | 2(1) | | | | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದಒಗಟುಗಳು | | | | | | | | 2(1) | | | | | **2** | **1** |
| | **ಪ. ಪ್ರೋ. ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

VIJAYAPUR DISTRICT KANNADA SUBJECT FORUM

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಪ್ರಶ್ನಾನುಸಾರ ವಿಶ್ಲೇಷಣೆ - 3

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |

| | | | | | | |
|---|---|---|---|---|---|---|
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 17 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 18 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 19 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 5 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 5 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 4.4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 5 ನಿಮಿಷ |

Vijayapur District Kannada Subject Forum



| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಸುಲಭ | 4 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಕಠಿಣ | 6 ನಿಮಿಷ |

| | | | | | | |
|---|---|---|---|---|---|---|
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಸಾಧಾರಣ | 4 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 5 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪರಿತ ಗದ್ಯ | 4 | ಸಾಧಾರಣ | 6 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಕಠಿಣ | 1.7 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 41 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 42 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 43 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 44 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಕಠಿಣ | 4.4 ನಿಮಿಷ |
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಕಠಿಣ | 4.6 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸಾಧಾರಣ | 4.6 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಕಠಿಣ | 10 ನಿಮಿಷ |

Vijayapur District Kannada Subject Forum



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 3.

## ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 9 X 1 = 9**

1. ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಕಂಡ ಶಾಲಾ ಮಕ್ಕಳು ಏನೆಂದು ಕೂಗಿದರು?

ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಕಂಡ ಶಾಲಾ ಮಕ್ಕಳು ಪೈಡ್ ಪೈಪರ್ ಸಾಂತಾಕ್ಲಾಸ್ ಎಂದೆಲ್ಲ ಕೂಗಿದರು.

2. ಕರ್ಮಯೋಗದ ಬಗ್ಗೆ ಗೀತೆಯಲ್ಲಿ ಏನೆಂದು ಹೇಳಿದೆ?

ಕರ್ಮಯೋಗದ ಬಗ್ಗೆ ಗೀತೆಯಲ್ಲಿ ಯಾವುದೇ ಫಲಾಪೇಕ್ಷೆಯಿಲ್ಲದೆ ತಾನು ಮಾಡಬೇಕಾದ ಕೆಲಸವನ್ನು ಮಾಡುವುದು (ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷುಕದಾಚನ) ಎಂದು ಹೇಳಿದೆ.

3. 'ಧರ್ಮಸಮದೃಷ್ಟಿ' ಶಾಸನವನ್ನು ಬರೆಸಿದವರಾರು?

'ಧರ್ಮಸಮದೃಷ್ಟಿ' ಶಾಸನವನ್ನು ಬರೆಸಿದವರು ವಿಜಯನಗರ ಸಾಮ್ರಾಜ್ಯದ ಅರಸ ವೀರ ಬುಕ್ಕರಾಯ.

4. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಯಾರು?

ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು.

VIJAYAPUR DISTRICT KANNADA SUBJECT FORUM

5. ಶಾನುಭೋಗರ ರಾಜ ಭಕ್ತಿಯ ಲಾಂಛನ ಯಾವುದು?

ಶಾನುಭೋಗರ ರಾಜ ಭಕ್ತಿಯ ಲಾಂಛನ ಖಿರ್ದಿ ಪುಸ್ತಕ.

6. ಗಾಂಡೀವಿ ಯಾರು ಯಾರಿಗೆ ಅಸಾಧ್ಯನಾಗಿದ್ದಾನೆ?

ಗಾಂಡೀವಿಯು ಭೀಷ್ಮ, ದ್ರೋಣ, ಕರ್ಣನಿಗೆ ಅಸಾಧ್ಯನಾಗಿದ್ದಾನೆ.

7. ಕುಂಪಣಿ ಸರಕಾರ ಹೊರಡಿಸಿದ ಆದೇಶವೇನು?

ಕುಂಪಣಿ ಸರಕಾರ ತಮ್ಮ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ, ಅಲ್ಲದೆ ತಮ್ಮಲ್ಲಿರುವ ಆಯುಧಗಳನ್ನು ಸರಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶ ಹೊರಡಿಸಿತು.

8. ಮಣ್ಣಿನ ಮಾಲೀಕ ಯಾರು?

ಮಾನವ ಮಣ್ಣಿನ ಮಾಲೀಕ.

9. ಸರ್ವನಾಶದ ಸಿದ್ಧಿ ಯಾವಾಗ ಆಗುತ್ತದೆ?

ಸರ್ವನಾಶದ ಸಿದ್ಧಿ ಅತಿಯಾದ ಮೋಹವಾದಾಗ ಆಗುತ್ತದೆ.



**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಕಲೋಪಾಸಕನ ಕರ್ತವ್ಯ ಏನು?

ಕಲೋಪಾಸಕನೂ ಒಬ್ಬ ವ್ಯಕ್ತಿ. ಸಮಾಜದ-ಮನುಕುಲದ-ಒಂದು ಘಟಕ. ಪರಾಂತಃಕರಣ ಪ್ರವೇಶಿಯಾಗಿ ಜನತೆಯ ಮನವನ್ನೂ, ಅಂತಃಕರಣವನ್ನೂ ಅವನು ತಿದ್ದಬಹುದು. ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು

ಅಲಕ್ಷಿಸಿಯಾದರೂ ಉಳಿದವರ ಹಿತಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.

11. ಜೈನ ಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ಸಂತವಿಟ್ಟು, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜೀನಾಲಯಗಳಿಗೆ ಸುಣ್ಣ ಬಳಿಸುವುದು. ಹೀಗೆ ಜೈನ ಧರ್ಮದ ಸುಧಾರಣೆಗಾಗಿ ಹಲವಾರು ಕ್ರಮ ಕೈಗೊಂಡನು.

VIJAYAPUR DISTRICT KANNADA SUBJECT FORUM

12. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?

ವಿಶ್ವೇಶ್ವರಯ್ಯನವರು ಕ್ರಿ. ಶ. 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಅನಂತರ ಉಳಿತಾಯ ಬ್ಯಾಂಕುಗಳು ಅಸ್ಥಿತ್ವಕ್ಕೆ ಬಂದವು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್, ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

13. ಶಾನುಭೋಗರು ಮೂರ್ಚೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.

ಶಾನುಭೋಗರು ಮೂರ್ಚೆಯಲ್ಲಿದ್ದಾಗ ನಡೆದ ಘಟನೆಗಳು. - ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದ ಪಲಾಯನ ಮಾಡಿತು. ಅನಂತರ ರೈತರು ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.



14. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?

ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ ಸರಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

15. 'ನನ್ನಾಸೆ' ಕವನದಲ್ಲಿ ಕವಿಯತ್ರಿಯವರ ಆಸೆಗಳೇನು?

ನನ್ನಾಸೆ' ಕವನದಲ್ಲಿ ಕವಿಯತ್ರಿಯು ಬೆಳಕು ನೀಡುವ ಬತ್ತಿಯಾಗಬೇಕು, ಮರವಾಗಿ ಬೆಳೆದು ಪುಣ್ಯವಂತರಿಗೆ ನೆರಳಾಗಬೇಕು, ಚಿಮ್ಮುವ ಚಿಲುಮೆಯಾಗಿ ದಾಹಗೊಂಡವರ ತನುವ ತಣಿಸುವಂತಾಗಬೇಕು. ಅಳುವ ಕಂದನ ನಗಿಸಲು ಅಮ್ಮನ ಕಂಠದ ಜೋಗುಳವಾಗಬೇಕು. ಅಜ್ಞಾನತೆಯನ್ನು ತೊಲಗಿಸಲು ಸರಸ್ವತಿಯ ಕೈಯಲ್ಲಿರುವ ಗ್ರಂಥವಾಗಬೇಕು, ದೀನರ ಊರುಗೋಲಾಗಬೇಕು. ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯವಾಗಬೇಕು ಎಂದು ಆಸೆ ಪಟ್ಟಿದ್ದಾರೆ.

16. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಎಚ್, ನರಸಿಂಹಯ್ಯ ಹೇಳಿದ್ದಾರೆ?

VIJAYAPUR DISTRICT KANNADA SUBJECT FORUM

ವಿಜ್ಞಾನ ಮತ್ತದರ ಬೆಳಕು ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನ ಮತ್ತು ಶೋಷಣೆಗಳ ನಾಶ ಸಾಧ್ಯವಾಗುತ್ತದೆ. ಅದು ಪ್ರಗತಿವಿರೋಧಿ ಸಿದ್ಧಾಂತಗಳನ್ನೂ ಸ್ವಹಿತಾಸಕ್ತಿಯನ್ನೂ ದೂರಮಾಡಬಲ್ಲದು. ವಿಜ್ಞಾನಿಗಳು ವಿಜ್ಞಾನದಲ್ಲಿ ಜೀವಂತ ನಂಬಿಕೆ ಹೊಂದಬೇಕು. ಅಂತೆಯೇ ತರ್ಕಬದ್ಧರಾಗಿ ಧೈರ್ಯದಿಂದ ವರ್ತಿಸಬೇಕು. ಆಗ ಸಮಾಜ ಸುಧಾರಣೆ ಸಾಧ್ಯವೆಂದು ಎಚ್, ನರಸಿಂಹಯ್ಯ ಹೇಳಿದ್ದಾರೆ.

17. ಭರತ ಚಕ್ರವರ್ತಿಯ ಗರ್ವರಸವು ಸೋರಲು ಕಾರಣವೇನು?

ಭರತ ಚಕ್ರವರ್ತಯು ಆರೂ ಖಂಡಗಳನ್ನು ಗೆದ್ದು ತನ್ನ ಗೆಲುವಿನ ಶಾಸನವನ್ನು ವೃಷಬಾಚಲದಲ್ಲಿ ಬರೆಸಲು ಹೋಗುತ್ತಾನೆ. ಅಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮ ಪ್ರಶಂಸೆಗಳು ತುಂಬಿ ಹೋಗಿದ್ದು, ಭರತೇಶನಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳ ದೊರೆಯದೇ ಅದನ್ನು ನೋಡಿ ಆತನ ಗರ್ವರಸವು ಸೋರಿ ಹೋಯಿತು.

18. ಗಾಂಧೀಜಿಯವರು ತಿಳಿದಂತೆ 'ಅನ್‌ಟು ದಿಸ್ ಲಾಸ್ಟ್ ಗ್ರಂಥದ ಸಿದ್ಧಾಂತಗಳಾವವು?

ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ. ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ. ಶ್ರಮ ಜೀವಿಯ ಜೀವನ, ಉಳುವವನ ಅಥವಾ ಕೈ ಕಸಬುಗಾರನ ಜೀವನವೇ ಯೋಗ್ಯ ಜೀವನ. ಇವು ಗಾಂಧೀಜಿಯವರು ತಿಳಿದಂತೆ 'ಅನ್‌ಟು ದಿಸ್ ಲಾಸ್ಟ್ ಗ್ರಂಥದ

ಸಿದ್ಧಾಂತಗಳು.

19. ಬೀಸುವ ಕಲ್ಲಿನ ಕುರಿತಾದ ಒಗಟನ್ನು ಬರೆಯಿರಿ.

ಬೀಸುಕಲ್ಲು ಬಗಲಲ್ಲಿ ಕುಕ್ಕುವುದು, ಬಾಯಿಯಲ್ಲಿ ತಿನ್ನುವುದು ಅಂದರೆ ಬೀಸುವಾಗ ಅದನ್ನು ತಿರುಗಿಸುತ್ತಾ ಕಾಳುಗಳನ್ನು ಹಾಕುವುದರಿಂದ ಈ ಒಗಟಿಗೆ ಬೀಸುಕಲ್ಲು ಉತ್ತರವಾಗಿದೆ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"

ಈ ವಾಕ್ಯವನ್ನು "ಶ್ರೀ ದೇವನೂರು ಮಹಾದೇವ" ಅವರು ರಚಿಸಿರುವ "ಎದೆಗೆ ಬಿದ್ದ ಅಕ್ಷರ" ಎಂಬ ಕೃತಿಯಿಂದಾಯ್ದ "ಎದೆಗೆ ಬಿದ್ದ ಅಕ್ಷರ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಗ್ರಾಮದ ಜನರೆಲ್ಲ ಸೇರಿ ಮನೆ ಮಂಚಮ್ಮನಿಗೆ ಗುಡಿ ಕಟ್ಟಲು ಪ್ರಾರಂಭಿಸಿದ ಸಂದರ್ಭದಲ್ಲಿ ಗ್ರಾಮ ದೇವತೆ ಮಂಚಮ್ಮ ಒಬ್ಬನ ಮೈಮೇಲೆ ಆವಾಹಿಸಿಕೊಂಡು ಜನರಿಗೆ ಪ್ರಶ್ನಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

VIJAYAPUR DISTRICT KANNADA SUBJECT FORUM

ತನ್ನ ಭಕ್ತರಿಗೆ ವಾಸಿಸಲು ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

21. "ಹುಸಿಯದ ಬೇಹಾರಿಯೇ ಇಲ್ಲ"

ಈ ವಾಕ್ಯವನ್ನು "ದುರ್ಗಸಿಂಹ" ಅವರು ರಚಿಸಿರುವ "ಕರ್ಣಾಟಕ ಪಂಚತಂತ್ರಂ" ಎಂಬ ಕೃತಿಯಿಂದಾಯ್ದ "ವೃಕ್ಷಸಾಕ್ಷಿ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ವೃಕ್ಷ ಸಾಕ್ಷಿಯನ್ನು ಕೇಳಿದ ಧರ್ಮಬುದ್ಧಿಯು ಆಲೋಚಿಸಿ, ಮರವನ್ನು ಸುತ್ತು ಹಾಕಿ, ಆಲದ ಮರದಲ್ಲಿಯ ಪೋಟರೆಯನ್ನು ಗಮನಿಸಿ, ಮನುಷ್ಯ ಸಂಚಾರವಾಗಿರುವುದನ್ನು ಕಂಡು ಸತ್ಯವನ್ನು ಹೊರಹಾಕಲು ನಿಶ್ಚಯಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಧರ್ಮಬುದ್ಧಿಯು ವೃತ್ತಿಧರ್ಮದಲ್ಲಿ ವ್ಯಾಪಾರಿಯಾದವನಿಗೆ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ. ಎಂದು ಹೇಳುವುದನ್ನು ಸ್ವಾರಸ್ಯಪೂರ್ಣವಾಗಿ ಈ ವಾಕ್ಯದಲ್ಲಿ ವರ್ಣಿಸಲಾಗಿದೆ.

22. "ಸುಡು ! ಸುಡು ! ಮನವಿದು ವಿಷಯಕ್ಕೆ ಹರಿವುದು"

ಈ ವಾಕ್ಯವನ್ನು "ಶ್ರೀ ಸಂ. ಶಿ. ಭೂಸನೂರಮಠ" ಅವರು ಸಂಪಾದಿಸಿರುವ "ವಚನ ಸಾಹಿತ್ಯ ಸಂಗ್ರಹ" ಎಂಬ ಕೃತಿಯಿಂದಾಯ್ದ "ವಚನ ಸೌರಭ" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ನಾಯಿಯನ್ನು ಪಲ್ಲಕ್ಕಿಯ ಮೇಲೆ ಕೂಡಿಸಿದರೂ ಸಹ ಅದು ಹೊಲಸನ್ನು ಕಂಡಾಗ ಆ ಕಡೆಗೆ ಓಡುತ್ತದೆ. ಅದರಂತೆ ಮನುಷ್ಯನ ಮನಸ್ಸು ಕಾಮನೆಯ ಸುಖದ ಕಡೆಗೆ ವಾಲುತ್ತದೆ ವಿನಃ ದೇವರನ್ನು ನೆನೆಯಲು ಬಿಡುವುದಿಲ್ಲ. ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

58

ಮಾನವನ ಮನಸ್ಸು ಯಾವಾಗಲೂ ಕಾಮನೆಯ ಸುಖದ ಕಡೆಗೆ ವಾಲುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

23. “ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

ಈ ವಾಕ್ಯವನ್ನು "ಕವಿ ಲಕ್ಷ್ಮೀಶ" ನು ರಚಿಸಿರುವ "ಜೈಮಿನಿ ಭಾರತ" ಎಂಬ ಮಹಾ ಕಾವ್ಯದಿಂದ ಆಯ್ದ "ವೀರಲವ" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ವಾಲ್ಮೀಕಿ ಋಷಿಯು ಲವನಿಗೆ ಆಶ್ರಮದ ತೋಟವನ್ನು ನೋಡಿಕೊಳ್ಳುವಂತೆ ಹೇಳಿದ್ದರು. ಆ ಸಮಯದಲ್ಲಿ ಶ್ರೀ ರಾಮನ ಯಜ್ಞಾಶ್ವವು ತೋಟವನ್ನು ಧ್ವಂಸಗೊಳಿಸಲು ಆಗ ಲವನು ಅದರ ಹಣೆಯಲ್ಲಿದ್ದ ಪಟ್ಟಿಯ ಬರೆಹವನ್ನು ಓದಿ ಅದನ್ನು ಕಟ್ಟಿ ಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುವನು.

ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣಾಗಿ ವ್ಯಕ್ತವಾಗಿದೆ.

**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 X 3 = 6**

VIJAYAPUR DISTRICT KANNADA SUBJECT FORUM

24. ಗೊರೂರು ರಾಮಸ್ವಾಮಿ ಅಯ್ಯಂಗಾರ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರು ಕ್ರಿ. ಶ. 1904 ರಲ್ಲಿ ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಅಮೆರಕಾದಲ್ಲಿ ಗೊರೂರು, ಮೆರವಣಿಗೆ,ಹೇಮಾವತಿ ತೀರದಲ್ಲಿ, ನಮ್ಮೂರಿನ ರಸಿಕರು ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಶ್ರಿಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಗೌರವ ಡಿ. ಲಿಟ್ ಪದವಿ ದೊರೆತಿದೆ.

25. ಆದಿಕವಿ ಪಂಪ

ಆದಿಕವಿ ಪಂಪನ ಕಾಲ ಕ್ರಿ.ಶ. ಸುಮಾರು 941. ಈತನ ಸ್ಥಳ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರ. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಈತ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ರತ್ನತ್ರಯರಲ್ಲಿ ಒಬ್ಬನಾದ ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳಿವೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :** **1 X 4 = 4**

26. ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡಮೇಡುಗಳ
ವಸಂತವಾಗುತ ಮುಟ್ಟೋಣ.



**ಅಥವಾ**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ-ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 X 4 = 4**

27. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ - ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ - ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

ಕವಿ ದ. ರಾ. ಬೇಂದ್ರೆಯವರು ಹಕ್ಕಿ ಹಾರುತಿದೆ ಪದ್ಯದ ಈ ಚರಣಗಳಲ್ಲಿ ಕಾಲಚಕ್ರದಲ್ಲಿ ನಡೆದಿರುವ ಭೂಮಂಲದ ರಾಜಕೀಯ ಹಾಗೂ ಪ್ರಾಕೃತಿಕ ಪ್ರಗತಿ ಹಾಗೂ ವಿನಾಶದ ಬದಲಾವಣೆಗಳನ್ನು ಕುರಿತು ವರ್ಣಿಸುತ್ತಾರೆ.

VIJAYAPUR DISTRICT KANNADA SUBJECT FORUM

ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣ ಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ ಅವುಗಳ ಫಲಿತವನ್ನು ಕೊಯ್ಲು ಮಾಡಿದೆ. ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು ಕೋಟೆ ಕೊತ್ತಲಗಳನ್ನು ನಾಶಗೊಳಿಸಿದೆ. ಕಾಲ ಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿಸಿ ಪ್ರಾಕೃತಿಕ ಬದಲಾವಣೆಗೆ ಕಾರಣವಾಗಿದೆ. ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು ವರ್ಣಿಸುತ್ತಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಹಗಲಿರುಳು ರಾಮನ ಬರುವಿಕೆಗಾಗಿಯೇ ಹಂಬಲಿಸುತ್ತ ಕಾಯುತ್ತಿರುವಾಗ ದನುವಿನ ಸಲಹೆಯಂತೆ ರಾಮಲಕ್ಷ್ಮಣರು ಆಶ್ರಮಕ್ಕೆ ಬಂದಿರುವುದನ್ನು ಕಂಡು ಹಿರಿಹಿರಿ ಹಿಗ್ಗಿ ಸಂತೋಷಪಡುತ್ತಾಳೆ. ಆ ಸಂಭ್ರಮದಲ್ಲಿ ತನ್ನನ್ನೆ ತಾನು ಮರೆತು ಅತೀವ ಆನಂದದಿಂದ ಅವರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ನಿಮ್ಮನ್ನು ಕಂಡ ನಾನು ಪರಮಸುಖಿ, ಸುಮ್ಮನೆ ಸುಖಿನಾನು ಎಂದು ಹಾಡುತ್ತ ನರ್ತಿಸುತ್ತಾಳೆ. ಸಡಗರದಲ್ಲಿ ಕಣ್ಣೀರು ತುಂಬಿಕೊಂಡು ನನ್ನ



ಇರುವಿಕೆಯನ್ನು ಗುರುತಿಸಿ, ಬಂದು ಸಂತಸ ನೀಡಿದಿರಿ. ನಿಮಗೆ ಹಸಿವು ತೃಷೆ ಹಿಂಗಿತೇ? ಬಡವಿಯಾದ ನನ್ನ ಮೇಲೆ ಮರುಕ ತೋರಿದಿರಾ? ಎಂದಾಗ ರಾಮನು ನಿನ್ನ ಕಣ್ಣಲ್ಲಿ ನೀರೇಕೆ ತಾಯಿ? ನೀನು ಯಾವ ಕೊರತೆಯನ್ನೂ ಮಾಡಿಲ್ಲ, ಅರಮನೆಯ ಸುಖಕ್ಕಿಂತ ಮಿಗಿಲಾಗಿದೆ ನಿನ್ನ ಆತಿಥ್ಯ. ಇಂದು ಕಾಡನ್ನು ಮರೆತು ಮನೆಯೆಂದು ತಿಳಿದೆವು. ನೀನೆ ನಮ್ಮ ತಾಯಿ ಎಂದುಕೊಂಡೆವು. ಎಂದಾಗ ಶಬರಿಯು ನಿನ್ನ ರೂಪಿನಂತೆ ಮಾತು ಕೂಡ ಉದಾರವಾಗಿದೆ. ಸಿದ್ಧರ ಫಲವು ಇಂದು ಫಲಿಸಿತು. ಗುರು ಪೂಜೆಯನ್ನು ಮಾಡಿದ ಪುಣ್ಯ ದೊರೆಯಿತು. ನಾನು ಧನ್ಯನಾದೆ. ಇಂದು ನನ್ನ ಮನಸ್ಸಿನ ಭಾರ ಇಳಿಯಿತು. ನನ್ನ ಜೀವನ ಸಾರ್ಥಕವಾಯಿತು. ಇನ್ನು ನನಗೆ ಮುಕ್ತಿಯನ್ನು ದೊರಕಿಸಿಕೊಡು ಎಂದು ಸಂತೋಷಪಡುತ್ತ ತನ್ನ ಮನಸ್ಸಿನ ಚಿಂತೆಯನ್ನು ಹಿಂಗಿಸಿಕೊಂಡಳು.

**ಅಥವಾ**

ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

ನಂಬಿ ಕೆಟ್ಟವರಿಲ್ಲ ಎಂಬುದು ದಾಸರ ವಾಣಿಯಾಗಿದೆ. ಭಾರತೀಯರ ಪುರಾಣ ಪುಣ್ಯ ಕಥೆಗಳಲ್ಲಿ, ಮಹಾಕಾವ್ಯಗಳಲ್ಲಿ ಈ ಮಾತಿನ ನಿದರ್ಶನಗಳು ಕಂಡು ಬರುತ್ತವೆ. ಅದರಂತೆ ಶಬರಿಯೂ ಕೂಡ. ಶಬರಿ ತನ್ನ ಭಕ್ತಿ, ಭಾವ, ಪ್ರೀತಿಯಿಂದ ರಾಮನ ಬರುವಿಕೆಗಾಗಿ ಹಗಲಿರುಳು ಕಾಯುವಳು. ತಮ್ಮ ಗುರುಗಳಾದ ಮತಂಗ ಋಷಿಗಳು "ರಾಮ ಲಕ್ಷ್ಮಣರು ಈ ಆಶ್ರಮಕ್ಕೆ ಬಂದೆ ಬರುತ್ತಾರೆ. ನಿನ್ನ ಇಷ್ಟಾರ್ಥ ನೆರವೇರುತ್ತದೆ" ಎಂದಿದ್ದರು. ಅವರ ಮಾತನ್ನು ನಂಬಿಕೊಂಡಿದ್ದ ಶಬರಿ ಕಾದು ಕಾದು ಕಾತರಿಸಿ,ಮುಪ್ಪಾಗಿ ಭಕ್ತಿಯೇ ರೂಪಗೊಂಡಂತಾದಳು. ರಾಮ ಬಂದರೆ ಅವನನ್ನು ಸತ್ಕರಿಸಲು ಪ್ರತಿನಿತ್ಯ ಕಾಡಿಗೆ ಹೋಗಿ ಹೂ ಹಣ್ಣು ತಳಿರುಗಳನ್ನು ತಂದು ಅಲಂಕರಿಸಿ ರಾಮನ ಆತಿಥ್ಯಕ್ಕೆ ಸಿದ್ಧಪಡಿಸುತ್ತಿದ್ದಳು. ಮತ್ತೆ ಮಾರನೆಯ ದಿವಸ ಇವುಗಳನ್ನು ತೆಗೆದು ಹೊಸದಾದ ಹೂ ಹಣ್ಣು ತಳಿರುಗಳನ್ನು ತಂದು ಅಲಂಕರಿಸುತ್ತಿದ್ದಳು. ನಂಬಿದ ರಾಮ

VIJAYAPUR DISTRICT KANNADA SUBJECT FORUM

ಬಂದೇ ಬರುವನೆಂದು ಹಲವಾರು ದಿನಗಳು ಕಾದಳು ಕೊನೆಗೆ ಆತನ ದರ್ಶನ ಮಾಡುವ ಕಾಲ ಬಂದಿತು. ಕುಟೀರಕ್ಕೆ ರಾಮಲಕ್ಷ್ಮಣರ ಆಗಮವಾದಾಗ ಶಬರಿ ಅತೀವ ಸೋತೋಷದಿಂದ ಅವರ ಸೇವೆಗೈದು ಮುಕ್ತಿಯನ್ನು ಹೊಂದಿದಳು. ಹಾಗಾಗಿ ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

29. "ಪತಿಯವಸರಕ್ಕೆ ಶರೀರವನು ನೂಕುವೆನು" ಎಂಬ ಕರ್ಣನ ನಿರ್ಧಾರ ಸರಿಯೇ ? ಏಕೆ?

ಹೌದು. ಕರ್ಣನ ಮಾತುಗಳಲ್ಲೇ ಹೇಳುವುದಾದರೆ "ಶ್ರೀಕೃಷ್ಣ! ವೀರ ಕೌರವರಾಯನೇ ನನ್ನ ಪ್ರಭು. ಅವನಿಗೆ ಯಾರು ಶತ್ರುಗಳೊ ಅವರೆಲ್ಲ ನನಗೂ ಶತ್ರುಗಳೆ. ದುರ್ಯೋಧನನ ಚಿಂತನೆಗಳೇ ನನ್ನ ಚಿಂತನಗಳು. ಅವನಿಗೆ ಏನಾಗುತ್ತದೋ ನನಗೂ ಅದೇ ಆಗಲಿ. ವೈರಿಗಳ ಶಿರಗಳನ್ನು ಕತ್ತರಿಸಿ ಒಪ್ಪಿಸಬೇಕೆಂಬ ಭರದಲ್ಲಿದ್ದೆ. ಆದರೆ ನೀನು ಮೋಸ ಮಾಡಿದೆ. ಕೃಷ್ಣ ಹೇಳು, ನಾಳಿನ ಯುದ್ಧದಲ್ಲಿ ಪಾಂಡವರಿಗೆ ನನ್ನ ನಿಜಭುಜದ ಪರಾಕ್ರಮವನ್ನು ತೋರಿಸುತ್ತೇನೆ. ನಾಳಿನ ಭಾರತವು ಮಾರಿಗೆ ಔತಣವಾಗಲಿದೆ. ಒಡೆಯನಿಗಾಗಿ ಹೋರಾಡಿ ಸಾಯುತ್ತೇನೆ. ನೀನು ನನ್ನ ಜನ್ಮ ರಹಸ್ಯದ ವೃತ್ತಾಂತವನ್ನೆಲ್ಲ ಹೇಳಿದ್ದಿಯಾ? ಆದುದರಿಂದ ಸೂರ್ಯದೇವನ ಆಣೆ ಮಾಡಿ ಹೇಳುತ್ತೇನೆ ನಿನ್ನ



ಪಾಂಡವರೈವರನ್ನು ನೋಯಿಸುವುದಿಲ್ಲ. ಒಡೆಯನಿಗಾಗಿ ಹೊರಾಡುತ್ತೇನೆ. ಈ ಶರೀರವನ್ನು ನೂಕುತ್ತೇನೆ." ಎಂದನು ಆದುದರಿಂದ ಕರ್ಣನ ನಿರ್ಧಾರ ಸರಿ ಇದೆ.

ಇಲ್ಲಿ ಕರ್ಣನ ಕರ್ತವ್ಯನಿಷ್ಠೆ, ಅನ್ನದಾತನ ಬಗ್ಗೆ ಇರುವ ನಿಯತ್ತು, ಅಚಲ ನಿರ್ಧಾರ, ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದರೂ ನೋವು ಸಂಕಟಗಳಿಂದ ಬಳಲಿದರೂ ಕರ್ಣನ ದೃಢಭಾವ ಅವನ ಮೇರು ವ್ಯಕ್ತಿತ್ವದ ಹಿರಿಮೆಗೆ ಹಿಡಿದ ಕೈಗನ್ನಡಿಯಂತಿದೆ.

**ಅಥವಾ**

"ಕುರುಪತಿಗೆ ಕೇಡಾದುದು" ಎಂದು ಕರ್ಣನು ಮನದೊಳಗೆ ಬಗೆಯಲು ಕಾರಣವಾದ ಅಂಶಗಳಾವವು?

ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಇನ್ನೋರ್ವ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಹಸ್ತಿನಾವತಿಯಿಂದ ಎಲ್ಲರನ್ನು ಬೀಳ್ಕೊಟ್ಟು ಕರ್ಣನ್ನು ಕರೆದು ರಥದಲ್ಲಿ ಕುಳ್ಳಿರಿಸಿಕೊಂಡು ಯಮುನಾತಟದ ಸರಸದಿಂದ ಉಸುರುತ್ತ "ನಿನ್ನಾಣೆ! ವಾಸ್ತವವಾಗಿ ನೀನೆ ಈ ಭೂಮಿಯ ಒಡೆಯ. ಇದು ನಿನಗೆ ತಿಳಿದಿಲ್ಲ" ಎಂದು ಹೇಳಿ ಕರ್ಣನಿಗೆ ದ್ವಂದ್ವ ನಿಲುವನ್ನು ಉಂಟು ಮಾಡಿದನು. ಇದರಿಂದ ಅವನ ಬೆರಗು, ಅಳುಕು ಇನ್ನೂ ಹೋಗದೇ ಇರುವಾಗ ಅವನ ಜನ್ಮದ ವೃತ್ತಾಂತವನ್ನು ತಿಳಿಸಿದನು. ಮತ್ತು ಹಸ್ತಿನಾಪುರದ ರಾಜನನ್ನಾಗಿ ಮಾಡುವೆ, ಕೌರವ ಪಾಂಡವರು ನಿನ್ನನ್ನು ಓಲೈಸುವರು. ಅವರು ನಿನ್ನ ಸೇವೆ ಮಾಡುವರು. ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ

VIJAYAPUR DISTRICT KANNADA SUBJECT FORUM

ಹೇಳು? ಎಂದು ಕೃಷ್ಣನು ಒಡ್ಡಿದ ಆಮಿಷಗಳಿಗೆ ಒಳಗಾಗದೆ ತುಂಬಾ ಚಿಂತಿತನಾದನಲ್ಲದೆ ಕೊರಳ ಸೆರೆ ಹಿಗ್ಗಿದವು. ಕಂಬನಿ ರಭಸದಿಂದ ಹರಿಯತೊಡಗಿದವು. ದುಃಖಿತನಾದ ಕರ್ಣ ತನ್ನ ಮನದಲ್ಲಿಯೇ 'ಕುರುಪತಿಗೆ ಕೇಡಾದುದು' ಎಂದು ಬಗೆದನಲ್ಲದೆ 'ನನ್ನ ವಂಶ ರಹಸ್ಯವನ್ನರುಹಿ ನನ್ನನ್ನು ಕೊಂದನು' ಎಂದು ನೊಂದುಕೊಂಡನು.

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 X 4 = 4 (2+2)**

"ಮದವು ಪರಿ ಬಂದ ಕಣ್ಣು, ಸೊಕ್ಕಿದ ಆನೆ, ಅದಕ್ಕೆ ಮತ್ತೇನೂ ಕಾಣುವುದಿಲ್ಲ. ತಲೆಯಲ್ಲಿಯ ಮತ್ತನ್ನೆಲ್ಲ ಸಿಂಹವು ಕೆದರುವುದೆಂದು ಅದಕ್ಕೆ ಗೊತ್ತಿಲ್ಲ. ಮದದಲ್ಲಿ ಸೂಕ್ಷ್ಮ ಪ್ರಕಾರಗಳೂ ಉಂಟು. ತಾನು ಸಾತ್ವಿಕನೆಂಬ ಅಹಂಕಾರ, ವಿನಯದಿಂದ ನಡೆದುಕೊಂಡರೂ ಆ ವಿನಯದಲ್ಲಿ ಸೂಚಿತವಾಗುವ ತಾನು ಅನ್ಯರಿಗಿಂತ ಸಾರತಃ ದೊಡ್ಡವನೆಂಬ ಭಾವ, ತನ್ನ ಗುಣಗಳ ಬಗ್ಗೆ ಇರುವ ಸ್ವಗೌರವ, ತಾನು ದೇವಕೃಪೆಗೆ ಪಾತ್ರನಾದೆನೆಂಬ ಅನಿಸಿಕೆ, ದೇವ ಚಿತ್ತಕ್ಕೆ ತಾನು ಪ್ರಿಯನೆಂಬ ಸ್ಫುರಣೆ - ಇವೆಲ್ಲ ಮದದ ಸೂಕ್ಷ್ಮ ಪ್ರಕಾರಗಳು. ಮಂಜುಗವಿದ ಕಣ್ಣಿಗೆ ಸೃಷ್ಟಿಯ ಇಲ್ಲವೆ ಅನ್ಯ ವ್ಯಕ್ತಿಗಳ ಮಹತ್ವ ಕಾಣುವುದಿಲ್ಲ. ಅದರ ಇಲ್ಲವೆ ಅವರ ದೈವಾಂಶವು ಕ್ರಮೇಣ ಕಡಿಮೆ



ಮರೆಯಾಗುತ್ತದೆ. ಇದಕ್ಕೆ ಉಪಾಯವೆಂದರೆ ಒಂದೇ ಒಂದು - ಸಮರ್ಪಣ ಭಾವ. ಸೇವಕನ ಈ ಸೇವಾ ಬುದ್ಧಿ ಅವಶ್ಯವಾಗಿ ಬೇಕು.

**ಪ್ರಶ್ನೆಗಳು :**

1. ಮದದ ಸೂಕ್ಷ್ಮ ಪ್ರಕಾರಗಳಾವವು?

ತಾನು ಸಾತ್ವಿಕನೆಂಬ ಅಹಂಕಾರ, ವಿನಯದಿಂದ ನಡೆದುಕೊಂಡರೂ ಆ ವಿನಯದಲ್ಲಿ ಸೂಚಿತವಾಗುವ ತಾನು ಅನ್ಯರಿಗಿಂತ ಸಾರತಃ ದೊಡ್ಡವನೆಂಬ ಭಾವ, ತನ್ನ ಗುಣಗಳ ಬಗ್ಗೆ ಇರುವ ಸ್ವಗೌರವ, ತಾನು ದೇವಕೃಪೆಗೆ ಪಾತ್ರನಾದೆನೆಂಬ ಅನಿಸಿಕೆ, ದೇವ ಚಿತ್ತಕ್ಕೆ ತಾನು ಪ್ರಿಯನೆಂಬ ಸ್ಫುರಣೆ - ಇವೆಲ್ಲ ಮದದ ಸೂಕ್ಷ್ಮ ಪ್ರಕಾರಗಳು.

2. ಅಹಂಕಾರ ಅಳಿಯಲು ಬೇಕಾದ ಉಪಾಯ ಯಾವುದು?

ಅಹಂಕಾರ ಅಳಿಯಲು ಬೇಕಾದ ಉಪಾಯ ಒಂದೇ ಒಂದು - ಸಮರ್ಪಣ ಭಾವ. ಸೇವಕನ ಈ ಸೇವಾ ಬುದ್ಧಿ ಅವಶ್ಯವಾಗಿ ಬೇಕು.

VIJAYAPUR DISTRICT KANNADA SUBJECT FORUM

## ಭಾಗ - 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ : 10 X 1 = 10**

31. ಕನ್ನಡ ವರ್ಣಮಾಲೆಯಲ್ಲಿ 'ತ್' ವರ್ಗಾಕ್ಷರಗಳಿವು :

ಎ) ಯ್,ರ್,ಲ್,ವ್,ಶ್, ಬಿ) ಕ್,ಚ್,ಟ್,ತ್,ಪ್,

ಸಿ) ಜ್,ಞ್.ಙ್,ನ್,ಮ್, ಡಿ) ತ್,ಥ್,ದ್,ಧ್, ನ್.

ಉತ್ತರ:ಡಿ) ತ್,ಥ್,ದ್,ಧ್, ನ್.

32. 'ತಲೆಬಾಗು' ಪದವು ಈ ಸಮಾಸಕ್ಕೆ ಉದಾಹರಣೆ :

ಎ) ಕ್ರಿಯಾ ಬಿ) ಅಂಶಿ ಸಿ) ಕರ್ಮಧಾರೆಯ ಡಿ) ತತ್ಪುರುಷ

ಉತ್ತರ:ಎ) ಕ್ರಿಯಾ

33. ಉಪ ಾಧ ್ಯಾಯರು ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ

ಲೇಖನ ಚಿಹ್ನೆ :

ಎ) ವಾಕ್ಯವೇಷ್ಟನ ಬಿ) ಉದ್ದರಣ ಸಿ) ಭಾವಸೂಚಕ ಡಿ) ಆವರಣ

ಉತ್ತರ:ಬಿ) ಉದ್ದರಣ

34. "ಮಾಹಿತಿಗಳಲ್ಲಾಗಲಿ ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ" ಈ ವಾಕ್ಯದಲ್ಲಿರುವ ನಿಷೇಧಾರ್ಥಕ ರೂಪ :



ಎ) ಉಚಿತವಲ್ಲ ಬಿ) ಮಾಹಿತಿಗಳಲ್ಲಾಗಲಿ ಸಿ) ಹಿಂದುಳಿಯುವುದು ಡಿ) ನಾವು

ಉತ್ತರ:ಎ) ಉಚಿತವಲ್ಲ

35. 'ವಧೂಪೇತ' ಪದವು ಈ ಸಂಧಿಗೆ ಉದಾಹರಣೆ :

ಎ) ಸವರ್ಣದೀರ್ಘ ಬಿ) ಲೋಪ ಸಿ) ಆಗಮ ಡಿ) ಜಸ್ತ್ವ

ಉತ್ತರ: ಎ) ಸವರ್ಣದೀರ್ಘ

36. 'ಹೊನ್ನಿಂಗೆ' ಈ ಪದದಲ್ಲಿರುವ ವಿಭಕ್ತಿ :

ಎ) ತೃತೀಯಾ ಬಿ) ಚತುರ್ಥಿ ಸಿ) ದ್ವಿತೀಯಾ ಡಿ) ಷಷ್ಠಿ

ಉತ್ತರ:ಬಿ) ಚತುರ್ಥಿ

37. 'ಅವನು ಬರಲಿಲ್ಲ ಆದ್ದರಿಂದ ನಾನು ಬರಲಿಲ್ಲ' ಗೆರೆ ಎಳೆದ ಪದವು ಈ ಅವ್ಯಯ :

ಎ) ಅವಧಾರಣಾರ್ಥಕ ಬಿ) ಭಾವಸೂಚಕ ಸಿ) ಸಂಬಂಧಾರ್ಥಕ ಡಿ) ಸಾಮಾನ್ಯ

VIJAYAPUR DISTRICT KANNADA SUBJECT FORUM

ಉತ್ತರ: ಸಿ) ಸಂಬಂಧಾರ್ಥಕ

38. ಗುಂಪಿಗೆ ಸೇರದ ಪದ ಇದು :

ಎ) ಈಗೀಗ ಬಿ) ಒಬ್ಬೊಬ್ಬ ಸಿ) ಹೌದ್ಹೌದು ಡಿ) ಸತಿಪತಿ

ಉತ್ತರ: ಡಿ) ಸತಿಪತಿ

39. 'ಸಿಟ್ಟಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ' ಈ ವಾಕ್ಯದಲ್ಲಿರುವ ಹಿಂದುಸ್ತಾನಿ ಪದವಿದು :

ಎ) ಸಿಟ್ಟಲಿ ಬಿ) ಹುಕುಮ ಸಿ) ಸಾಹೇಬ ಡಿ) ಮುಂಗೈ

ಉತ್ತರ: ಬಿ) ಹುಕುಮ

40. 'ಮಕ್ಕಳು ಹಾಲನ್ನು ಕುಡಿಯುತ್ತಾರೆ, ಆದರೆ ಅವರಿಗೆ ಕೊಡಲು ಸಾಕಷ್ಟು ಹಾಲಿಲ್ಲ' ಇದು ಈ ವಾಕ್ಯಕ್ಕೆ ಉದಾಹರಣೆಯಾಗಿದೆ :

ಎ) ಸಾಮಾನ್ಯ ಬಿ) ವಿಧ್ಯರ್ಥಕ ಸಿ) ಸಂಯೋಜಿತ ಡಿ) ಮಿಶ್ರ

ಉತ್ತರ: ಸಿ) ಸಂಯೋಜಿತ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

41. ಅದು ; ಪುರುಷಾರ್ಥಕ ಸರ್ವನಾಮ :: ತನ್ನ ; ………………………

ಉತ್ತರ: ಆತ್ಮಾರ್ಥಕ ಸರ್ವನಾಮ.

42. ಅಬ್ಜೋದರ ; ವಿಷ್ಣು :: ಶಿತಿಕಂಠ ; ………………………

ಉತ್ತರ: ಶಿವ.

43. ಓದು ; ಓಟ :: ಜಾಣ ; ………………………



ಉತ್ತರ: ಜಾಣತನ.

44. ಕಬ್ಬ ; ಕಾವ್ಯ :: ಬೇಹಾರಿ ; ………………………

ಉತ್ತರ: ವ್ಯಾಪಾರಿ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ:**

**1 X 3 = 3**

UUUU  UU -    UU-

ಅತಿಕುಟಿ|ಲಮನಂ |ಧನಲು = 12

UU -    - -  U – U  UU -    UU -

ಬ್ಧತೆಯಿಂ|ದಂ ದು|ಷ್ಟಬುದ್ಧಿ |ನುಡಿದಂ| ಪುಸಿಯಂ = 20

**ಛಂದಸ್ಸಿನ ಹೆಸರು :** ಕಂದಪದ್ಯ.

VIJAYAPUR DISTRICT KANNADA SUBJECT FORUM

**ಅಥವಾ**

ಭ ರ ನ ಭ ಭ ರ ಲ+ಗು

-UU  -  U-  UUU  -UU  -UU  -  U -  U-

ಮೇದಿನಿ|ಯಂ ಕ್ರಮ|ಕ್ರಮದೆ| ಸರ್ವಿದು|ದಾತ್ತನ| ಭೋವಿಭಾ|ಗಮಾ

ಉತ್ಪಲಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಟ್ಟಿರಲ್.

**ಛಂದಸ್ಸಿನ ಹೆಸರು :** ಉತ್ಪಲಮಾಲಾ ವೃತ್ತ.

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ : 1 X 3 = 3**

46. ಕುವೆಂಪುರವರ 'ಮಲೆಗಳಲ್ಲಿ ಮಧುಮಗಳು' ಪುಣ್ಯದಂತೆ ನನಗೆ ಕಾಣುತ್ತದೆ.

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ಮಲೆಗಳಲ್ಲಿ ಮಧುಮಗಳು.

**ಉಪಮಾನ** : ಪುಣ್ಯ

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ**: ಕಾಣುವುದು.



**ಸಮನ್ವಯ** : ಇಲ್ಲಿ ಉಪಮೇಯವಾದ ಮಲೆಗಳಲ್ಲಿ ಮಧುಮಗಳನ್ನು

ಉಪಮಾನವಾದ ಪುಣ್ಯಕ್ಕೆ ಹೋಲಿಸಲಾಗಿದ್ದರಿಂದ ಇದು ಉಪಮಾ

ಅಲಂಕಾರ.

**ಅಥವಾ**

"ಮಾರಿಗೌತಣವಾಯ್ತು ನಾಳಿನ ಭಾರತವು"

**ಅಲಂಕಾರದ ಹೆಸರು** : ರೂಪಕ ಅಲಂಕಾರ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕ ಅಲಂಕಾರ.

**ಉಪಮೇಯ** : ನಾಳಿನ ಭಾರತ.

**ಉಪಮಾನ** : ಮಾರಿಗೌತಣ.

**ಸಮನ್ವಯ** : ಇಲ್ಲಿ ಉಪಮೇಯವಾದ ನಾಳಿನ ಭಾರತವನ್ನು ಉಪಮಾನವಾದ ಮಾರಿಗೌತಣಕ್ಕೆ ಅಭೇದವಾಗಿ ಹೋಲಿಸಲಾಗಿದ್ದರಿಂದ ಇದು ರೂಪಕ ಅಲಂಕಾರ.

## ಭಾಗ - 'ಸಿ'

VIJAYAPUR DISTRICT KANNADA SUBJECT FORUM

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : 1X3 = 3**

- ಹುಟ್ಟುಗುಣ ಸುಟ್ಟರೂ ಹೋಗದು.
- ಪ್ರಯತ್ನಕ್ಕೆ ಫಲವಿದೆ.
- ಹತ್ತು ದೇವರ ಪೂಜಿಸುವುದಕ್ಕಿಂತ ಹೆತ್ತ ತಂದೆ ತಾಯಿಗಳನ್ನು ಪೂಜಿಸು.

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ ____________________ ಎಂಬ ಗಾದೆ ಪ್ರಸಿದ್ಧವಾಗಿದೆ.

---------------------------------------------

---------------------------------------------

---------------------------------------------

---------------------------------------------

**48.** ನಿಮ್ಮನ್ನು ವಿಜಯಪುರದ ರಾಮನಗರ ಬಡಾವಣೆ ಶ್ರೀಧರ ಎಂದು ಭಾವಿಸಿ ಗಾಂಧಿ ಜಯಂತಿಯಂದು ಕೈಗೊಂಡ ಸ್ವಚ್ಛತಾ ಅಭಿಯಾನದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.. **1 X 5 = 5**

**ಅಥವಾ**

ನಿಮ್ಮನ್ನು ವಿಜಯಪುರದ ಶ್ರೀ ಮುನಿಶ್ವರ ಪ್ರೌಢ ಶಾಲೆಯ ಶಿವರಾಜ ಎಂದು ಭಾವಿಸಿ, ಕಾರವಾರದ ನಿಮ್ಮ ಸಹೋದರಿ ಜ್ಯೋತಿಗೆ ಹುಟ್ಟು ಹಬ್ಬದ ಶುಭಾಶಯ ತಿಳಿಸಿ ಪತ್ರ ಬರೆಯಿರಿ.

**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ಇವರಿಗೆ,

-----------------

-----------------

-----------------

VIJAYAPUR DISTRICT KANNADA SUBJECT FORUM

ಮಾನ್ಯರೆ,

ವಿಷಯ : ------------------------------

------------------------------

--------------------------------------------

--------------------------------------------

--------------------------------------------

--------------------------------------------

------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ----------    ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------

**2. ವಯಕ್ತಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ದಿನಾಂಕ. ----------------



(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

-----------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)

ಮುಖ್ಯ ವಿಷಯವೆನೆಂದರೆ ----------------------------

-----------------------------------------------

-----------------------------------------------

-----------------------------------------------

VIJAYAPUR DISTRICT KANNADA SUBJECT FORUM

-----------------------------------------------

------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,
-------------------------
-------------------------
-------------------------

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.** **1 X 5 = 5**

- ತಂತ್ರಜ್ಞಾನದ ಬಳಕೆ.
- ಬ್ರಷ್ಟಾಚಾರ ತಡೆಯುವಲ್ಲಿ ನಾಯಕರ ಪಾತ್ರ.
- ಜಾಗತಿಕ ತಾಪಮಾನ.

**ಪೀಠಿಕೆ :** ____________________________________

__________________________________________

__________________________________________

**ವಿವರಣೆ :** ________________________________

________________________________

________________________________

69

________________________________

________________________________

________________________________

________________________________

________________________________

________________________________

________________________________

________________________________

VIJAYAPUR DISTRICT KANNADA SUBJECT FORUM

**ಉಪಸಂಹಾರ :** ________________________________

________________________________

________________________________

*****************

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ವಿಷಯ : ಪ್ರಥಮ ಭಾಷೆ ಕನ್ನಡ.

**2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 4.**

| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | 1 | 2 | | 2 | 1 | 2 | 2 | 1 | 2 | 3 | 2 | | |
| | ಗದ್ಯಭಾಗ | | | | | | | | | | | | | | |
| 01 | ಶಬರಿ. | | 1(1) | | | | | | | 3(1) | | | | **4** | **2** |
| 02 | ಅ. ಗೊರೂರು. | | | | | | | | | | 4(1) | | | **4** | **1** |
| 03 | ಜೀವನ ದೃಷ್ಟಿ. | | | | | | 3(1) | | | | | | | **3** | **1** |
| 04 | ಧರ್ಮ ಸಮದೃಷ್ಟಿ. | | 1(1) | | | 2(1) | | | | | | | | **3** | **2** |
| 05 | ಭಾ.ಶಿ.ಎಂ. ವಿ. | | 1(1) | | | 2(1) | | | | | | | | **3** | **2** |
| 06 | ಎದೆಗೆ ಬಿದ್ದ ಅಕ್ಷರ. | | 1(1) | | | 2(1) | | | | | | | | **3** | **2** |
| 07 | ವೃಕ್ಷ ಸಾಕ್ಷಿ. | | 1(1) | | | 2(1) | | | | | | | | **3** | **2** |
| 08 | ವ್ಯಾಘ್ರಗೀತೆ. | | | | | | | | | 3(1) | | | | **3** | **1** |
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗೇಳ್. | | | | | | | | | | 4(1) | | | **4** | **1** |
| 02 | ಪ.ಹಾ. ನೋಡಿದಿರಾ. | | 1(1) | | | | | | | 3(1) | | | | **4** | **2** |
| 03 | ಹಲಗಲಿ ಬೇಡರು. | | 1(1) | | | 2(1) | | | | | | | | **3** | **2** |
| 04 | ವಚನ ಸೌರಭ. | | | | | | | | | 3(1) | | | | **3** | **1** |
| 05 | ಸಂಕಲ್ಪಗೀತೆ. | | | | | | | | | | | | 4(1) | **4** | **1** |
| 06 | ಕೌ. ಕೊಂ. ನೀನು. | | | 4(1) | | | | | | | | | | **4** | **1** |
| 07 | ವೀರಲವ. | | | | | | 3(1) | | | | | | | **3** | **1** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |

VIJAYAPUR DISTRICT KANNADA SUBJECT FORUM

| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ ನಿ | ಕಿ ಉ 1 | ದೀ ಉ 2 | ವ ನಿ | ಕಿ ಉ 2 | ದೀ ಉ 1 | ದೀ ಉ 2 | ಕಿ ಉ 2 | ದೀ ಉ 1 | ದೀ ಉ 2 | ದೀ ಉ 3 | ದೀ ಉ 2 | | |
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | | | | 2(1) | | | | | **2** | **1** |
| 02 | ನಾಮಫಲಕ. | | | | | | | | 2(1) | | | | | **2** | **1** |
| 03 | ಉದಾತ್ತ ಚಿಂತನೆಗಳು | | | | | 2(1) | | | | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದ ಒಗಟುಗಳು | | | | | 2(1) | | | | | | | | **2** | **1** |
| | **ಪ. ಪೋ.ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

VIJAYAPUR DISTRICT KANNADA SUBJECT FORUM

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಪ್ರಶ್ನಾನುಸಾರ ವಿಶ್ಲೇಷಣೆ - 4

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3.5 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 17 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 18 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 19 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 4.5 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 4.5 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4.5 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4.5 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸುಲಭ | 4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 5 ನಿಮಿಷ |

Vijayapur District Kannada Subject Forum

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಕಠಿಣ | 5 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಕಠಿಣ | 6 ನಿಮಿಷ |
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಸಾಧಾರಣ | 4 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 4 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪರಿತ ಗದ್ಯ | 4 | ಸಾಧಾರಣ | 6 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸಾಧಾರಣ | 2 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸಾಧಾರಣ | 2 ನಿಮಿಷ |
| 41 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 42 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 43 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸಾಧಾರಣ | 2 ನಿಮಿಷ |
| 44 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಸಾಧಾರಣ | 5 ನಿಮಿಷ |
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಸಾಧಾರಣ | 5 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸುಲಭ | 5 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಸಾಧಾರಣ | 10 ನಿಮಿಷ |

Vijayapur District Kannada Subject Forum

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 4.

## ವಿಷಯ : ಪ್ರಥಮ ಭಾಷೆ ಕನ್ನಡ

### ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ** ಬರೆಯಿರಿ **: 9 X 1 = 9**

1. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

    ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

2. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?

    ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಜೈನರಿಗೂ ವೈಷ್ಣವರಿಗೂ (ಭಕ್ತರು) ಸಂವಾದ ನಡೆಯಿತು.

3. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?

    ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜನಿಯರ್ಸ್' ದಿನಾಚರಣೆಯನ್ನು ಮಾಡಲಾಗುತ್ತಿದೆ.

VIJAYAPUR DISTRICT KANNADA SUBJECT FORUM

4. 'ಮಲೆಗಳಲ್ಲಿ ಮದುಮಗಳು' ಇದು ಯಾರು ಬರೆದ ಕಾದಂಬರಿ?

    'ಮಲೆಗಳಲ್ಲಿ ಮದುಮಗಳು' ಇದು ಕೆ. ವಿ. ಪುಟ್ಟಪ್ಪ (ಕುವೆಂಪು) ಅವರು ಬರೆದ ಕಾದಂಬರಿ.

5. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

    ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನಿನ (ಸಂಪತ್ತಿನ) ಕಳ್ಳತನದ ಆರೋಪವನ್ನು ಹೊರಿಸಿದನು.

6. ಹಕ್ಕಿಯು ಯಾವುದರ ಸಂಕೇತವಾಗಿದೆ?

    ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.

7. ಕುಂಪಣಿ ಸರಕಾರ ಹೊರಡಿಸಿದ ಆದೇಶವೇನು?

    ಕುಂಪಣಿ ಸರಕಾರ ತಮ್ಮ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊದುವಂತಿಲ್ಲ, ಅಲ್ಲದೆ ತಮ್ಮಲ್ಲಿರುವ ಆಯುಧಗಳನ್ನು ಸರಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶ ಹೊರಡಿಸಿತು.

8. ಮಾನವನ ಕಾದಾಟಕ್ಕೆ ಕಾರಣವೇನು?

    ಮಾನವನ ಕಾದಾಟಕ್ಕೆ ಕಾರಣ ಅಹಮ್ಮು (ಗರ್ವ).

9. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?

    ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದಂತೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಜೈನ ಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ಸಂತವಿಟ್ಟು, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜೀನಾಲಯಗಳಿಗೆ ಸುಣ್ಣ ಬಳಿಸುವುದು. ಹೀಗೆ ಜೈನ ಧರ್ಮದ ರಕ್ಷಣೆಗಾಗಿ ಹಲವಾರು ಕ್ರಮ ಕೈಗೊಂಡನು.

11. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?

ವಿಶ್ವೇಶ್ವರಯ್ಯ ಅವರು ಎಂಜಿನಿಯರ್‌ಗಳಿಗೆ "ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ ಗುಣಲಕ್ಷಣಗಳು ಒಂದೇ ಆಗಿರುತ್ತವೆ. ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಹೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು. ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ" ಎಂದು ಮಾರ್ಗದರ್ಶನ ಮಾಡಿದರು.

12. 'ವಚನ ಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯವೇನು?

VIJAYAPUR DISTRICT KANNADA SUBJECT FORUM

ಕರ್ನಾಟಕದ ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಆಂದೋಲನ ಬೇರೆ ಎಲ್ಲಿಯೂ ನಡೆದಿಲ್ಲ. ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೆ ಇದು ಬೆಳಕಾಗಬಹುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ ಎಂಬುದು 'ವಚನ ಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ.

13. ಧರ್ಮಾಧೀಕರಣರು ವಟವೃಕ್ಷಕ್ಕೆ ಏನು ಹೇಳಿದರು?

ಧರ್ಮಾಧೀಕರಣರು ವಟವೃಕ್ಷಕ್ಕೆ "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ. ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ. ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

14. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ಬ್ರಿಟಿಷ ಸರಕಾರ

ನಿಶ್ಯಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರಕಾರದ ಅನುಮತಿಯಿಲ್ಲದೆ ಭಾರತೀಯರು ಆಯುಧಗಳನ್ನು ಹೊಂದುವಂತಿಲ್ಲ, ಈ ನಿಯಮದ ಪ್ರಕಾರ ಭಾರತೀಯರು ತಮ್ಮಲ್ಲಿರುವ ಆಯುಧಗಳನ್ನು ಸರಕಾರಕ್ಕೆ ಒಪ್ಪಿಸಬೇಕಾಗಿತ್ತು. ಇದನ್ನು ಹಲಗಲಿಯ ಬೇಡರ ಮುಖಂಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ ರಾಮ ಮೊದಲಾದವರ ನೇತೃತ್ವದಲ್ಲಿ



ಸಭೆ ಸೇರಿ ತಮ್ಮ ಆಯುಧಗಳನ್ನು ಒಪ್ಪಿಸಬಾರದೆಂದು ತಿರ್ಮಾನಿಸಿ ಬ್ರಿಟಿಷರ ವಿರುದ್ಧ ದಂಗೆ ಎದ್ದರು.

15. ನನ್ನಾಸೆ ಕವನದಲ್ಲಿ ಕವಿಯತ್ರಿಯವರ ಆಸೆಗಳೇನು? ವಿವರಿಸಿರಿ.

ನನ್ನಾಸೆ' ಕವನದಲ್ಲಿ ಕವಿಯತ್ರಿಯು ಬೆಳಕು ನೀಡುವ ಬತ್ತಿಯಾಗಬೇಕು, ಮರವಾಗಿ ಬೇಳೆದು ಪುಣ್ಯವಂತರಿಗೆ ನೆರಳಾಗಬೇಕು, ಚಿಮ್ಮುವ ಚಿಲುಮೆಯಾಗಿ ದಾಹಗೊಂಡವರ ತನುವ ತಣಿಸುವಂತಾಗಬೇಕು. ಅಳುವ ಕಂದನ ನಗಿಸಲು ಅಮ್ಮನ ಕಂಠದ ಜೋಗುಳವಾಗಬೇಕು. ಅಜ್ಞಾನತೆಯನ್ನು ತೊಲಗಿಸಲು ಸರಸ್ವತಿಯ ಕೈಯಲ್ಲಿರುವ ಗ್ರಂಥವಾಗಬೇಕು, ದೀನರ ಊರುಗೋಲಾಗಬೇಕು. ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯವಾಗಬೇಕು ಎಂದು ಆಸೆ ಪಟ್ಟಿದ್ದಾರೆ.

16. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?

ವಿಜ್ಞಾನಿಯೊಬ್ಬನ ವಸ್ತು ಸ್ಥಿರತೆಯ ವಿಶ್ವ ನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದರೆ ಅದು ಮೂರ್ಖತನ. ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಹುದಾದರೆ ಅದು ಮೂರ್ಖತನದ ಪರಮಾವಧಿ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮೆಯುಂಟು; ಆದರೆ ವಿದ್ಯಾವಂತ ಈ ರೀತಿ ಅಭಿಪ್ರಾಯವನ್ನು ತಿಳಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಎಲ್ಲ ಶೋಧನೆಗಳು ಅರ್ಥರಹಿತವಾಗುತ್ತವೆ.

17. ಪಂಪನು ತನ್ನ ಹೆಸರನ್ನು ಕೆತ್ತಿಸಿಕೊಳ್ಳದಿರಲು ಕಾರಣವೇನು?

ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ತನ್ನ ಕೃತಿಗಳ ಮಹತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು. ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು. ಈ ಅಂಶಗಳು ಪಂಪ ತನ್ನ ಹೆಸರನ್ನು ಕೆತ್ತಿಸಿಕೊಳ್ಳದಿರಲು ಕಾರಣಗಳು.

VIJAYAPUR DISTRICT KANNADA SUBJECT FORUM

18. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?

ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಗಾಂಧೀಜಿಯವರು ಓದಲು ಪ್ರಾರಂಭಿಸಿದ ನಂತರ ಅದನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೂರೆಗೊಂಡಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಅವರ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು.

19. ಆರನೆಯ ಒಗಟಿನ ಉತ್ತರ 'ಉತ್ತರಾಣಿ ಗಿಡ' ಎಂಬುದನ್ನು ಸಮರ್ಥಿಸಿರಿ.

‘ಉತ್ತರಾಣಿ ಗಿಡ'ವು ಹೊಲದ ಬದಿಯಲ್ಲಿ ಹುಟ್ಟಿ, ಬದಿಯಲ್ಲೇ ಬೆಳೆಯುವುದು. ಅದರ ಹತ್ತಿರದಿಂದ ಹಾದು ಹೋಗುವವರಿಗೆ ತಾಗಿ ತನ್ನ ಮುಳ್ಳುಗಳನ್ನು ಚುಚ್ಚುವುದು. ಹಾಗಾಗಿ ಆರನೆಯ ಒಗಟಿಗೆ ಇದು ಉತ್ತರವಾಗಿದೆ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. “ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"



ಈ ವಾಕ್ಯವನ್ನು "ಪು. ತಿ. ನರಸಿಂಹಾಚಾರ್" ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ರಾಮನ ದರ್ಶನ ಭಾಗ್ಯದಿಂದ ಸಂತೃಪ್ತಗೊಂಡ ಶಬರಿ ಮುಕ್ತಿಯನ್ನು ಪಡೆಯಲು ರಾಮಲಕ್ಷ್ಮಣರ ಎದುರಲ್ಲಿಯೇ ಅಗ್ನಿ ಪ್ರವೇಶ ಮಾಡುವಳು. ಆಗ ಲಕ್ಷ್ಮಣನು ಅಣ್ಣನಿಗೆ ಅವಳ ನಲಿವಿನ ಬಗ್ಗೆ ಹೇಳುತ್ತಿರುವಾಗ ರಾಮನು ಈ ಮೇಲಿನಂತೆ ಹೇಳುತ್ತಾನೆ.

‘ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ' ಎಂಬ ಮಾತು ಶಬರಿಯ ರಾಮ ಭಕ್ತಿಯ ಶ್ರೇಷ್ಟತೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

21. “ಸ್ವಧರ್ಮೇ ನಿಧನಂ ಶ್ರೇಯ"

ಈ ವಾಕ್ಯವನ್ನು "ಶ್ರೀ ಎ. ಎನ್. ಮೂರ್ತಿರಾವ್" ಅವರು ರಚಿಸಿರುವ "ಸಮಗ್ರ ಲಲಿತ ಪ್ರಬಂಧಗಳು" ಎಂಬ ಕೃತಿಯಿಂದಾಯ್ದ "ವ್ಯಾಘ್ರಗೀತೆ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿದ್ದ ಸಂದರ್ಭದಲ್ಲಿ ಹುಲಿಗೆ ಭಗವದ್ಗೀತೆಯ ಈ ಮಾತು ನೆನಪಿಗೆ ಬಂತೆಂದು ಲೇಖಕರು ಹೇಳುವರು.

VIJAYAPUR DISTRICT KANNADA SUBJECT FORUM

ಸದ್ವಂಶದಲ್ಲಿ ಜನಿಸಿದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಆಕ್ರಮಣ ಮಾಡದೆ ಭಗವದ್ಗೀತೆಯ ಈ ಮಾತನ್ನು ನೆನೆಯುವುದು ಸ್ವಾರಸ್ಯಪೂರ್ಣವಾಗಿದೆ.

22. “ಸಾರ್ವಭೌಮರಾ ನೆತ್ತಿಯ ಕುಕ್ಕಿ"

ಈ ವಾಕ್ಯವನ್ನು **ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ "ಶ್ರೀ ದ. ರಾ. ಬೇಂದ್ರೆ" ಅವರು ರಚಿಸಿರುವ "ಗರಿ" ಎಂಬ ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಕವಿ ದ. ರಾ. ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

23. “ಸುಡು ! ಸುಡು ! ಮನವಿದು ವಿಷಯಕ್ಕೆ ಹರಿವುದು"

ಈ ವಾಕ್ಯವನ್ನು "ಶ್ರೀ ಸಂ. ಶಿ. ಭೂಸನೂರಮಠ" ಅವರು ಸಂಪಾದಿಸಿರುವ "ವಚನ ಸಾಹಿತ್ಯ ಸಂಗ್ರಹ" ಎಂಬ ಕೃತಿಯಿಂದಾಯ್ದ "ವಚನ ಸೌರಭ" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ನಾಯಿಯನ್ನು ಪಲ್ಲಕ್ಕಿಯ ಮೇಲೆ ಕೂಡಿಸಿದರೂ ಸಹ ಅದು ಹೊಲಸನ್ನು ಕಂಡಾಗ ಆ



ಕಡೆಗೆ ಓಡುತ್ತದೆ. ಅದರಂತೆ ಮನುಷ್ಯನ ಮನಸ್ಸು ಕಾಮನೆಯ ಸುಖದ ಕಡೆಗೆ ವಾಲುತ್ತದೆ ವಿನಃ ದೇವರನ್ನು ನೆನೆಯಲು ಬಿಡುವುದಿಲ್ಲ. ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಮಾನವನ ಮನಸ್ಸು ಯಾವಾಗಲೂ ಕಾಮನೆಯ ಸುಖದ ಕಡೆಗೆ ವಾಲುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 X 3 = 6**

24. ವಿ. ಕೃ. ಗೋಕಾಕ್

ವಿನಾಯಕ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗರುವ ವಿನಾಯಕ ಕೃಷ್ಣರಾವ್ ಗೋಕಾಕ್ ಅವರು ಕ್ರಿ. ಶ. 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಶ್ರೀಯುತರು ಜೀವನಪಾಠಗಳು, ಭಾರತ ಸಿಂಧೂರಶ್ಮಿ, ದ್ಯಾವ ಪೃಥಿವೀ, ಸಮುದ್ರಗೀತೆಗಳು ಮೋದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು ದೊರೆತಿವೆ.

25. ಲಕ್ಷ್ಮೀಶ

VIJAYAPUR DISTRICT KANNADA SUBJECT FORUM

ಲಕ್ಷ್ಮೀಶ ಕವಿಯು ಚಿಕ್ಕಮಂಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿನವನು. ಈತನ ಕಾಲ ಕ್ರಿ. ಶ. 1550. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳಿವೆ. ಈತನು 'ಜೈಮಿನಿಭಾರತ' ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ ಉಪಮಾಲೋಲ, ಕರ್ಣಾಟಕವಿಚೂತವನಚೈತ್ರ ಎಂಬ

ಬಿರುದುಗಳಿವೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :** **1 X 4 = 4**

26. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೊರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

**ಅಥವಾ**



ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 X 4 = 4**

27. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಜಿ.ಎಸ್. ಶಿವರುದ್ರಪ್ಪನವರು ಈ ಪದ್ಯದಲ್ಲಿ 'ಎಲ್ಲಾ ಮತಗಳ ಧ್ಯೇಯ ಒಂದೆ ಆಗಿದ್ದು, ಸುಂದರ ಬದುಕಿಗೆ ಮಾರ್ಗವಾಗಿವೆ. ಸಂಶಯ ಅನುಮಾನಗಳೆಂಬ ಕತ್ತಲೆಯನ್ನು ಹೋಗಲಾಡಿಸಲು ಸಂಕಲ್ಪವೆಂಬ ಹಣತೆ ಬೆಳಕು ನೀಡಲಿ' ಎಂದು ಆಶಿಸಿದ್ದಾರೆ.

VIJAYAPUR DISTRICT KANNADA SUBJECT FORUM

ಜಾತಿ ಮತಗಳು ಬೇರೆ ಬೇರೆ ರೀತಿ ನೀತಿಯನ್ನು ಅನುಸರಿಸುತ್ತಿದ್ದರೂ ಅವುಗಳ ಗುರಿ ಉದ್ದೇಶಗಳು ಒಂದೆಯಾಗಿವೆ. ವೈವಿಧ್ಯತೆಯಲ್ಲಿ ಏಕತೆಯನ್ನು ಹೋದಿರುವ ನಾವು, ಭಾಷೆ, ಜಾತಿ, ಮತ, ಆಚಾರ, ವಿಚಾರಗಳಲ್ಲಿ ಭಿನ್ನತೆಯಿದ್ದರೂ ಒಂದೇ ಎಂಬ ಭಾವನೆಯಿಂದ ಬದುಕುತ್ತಿದ್ದೇವೆ. ಎಲ್ಲಾ ಮತಧರ್ಮಗಳು ಸುಂದರ ಬದುಕಿಗೆ ಸನ್ಮಾರ್ಗಗಳನ್ನು ತೋರಿಸುತ್ತವೆ ಎನ್ನುವ ಹೊಸ ಎಚ್ಚರಿಕೆಯಿಂದ, ಬೇಧ, ಭಾವಗಳನ್ನು ಹೊಡೆದು ಹಾಕಿ, ಭಯ, ಸಂಶಯ, ಅನುಮಾನದಿಂದಿ ಕೂಡಿದ ಕಣ್ಣುಗಳಲ್ಲಿ ಶಾಂತಿ, ಸಮಾನತೆ ಸುಂದರ ಬದುಕುಗಳನ್ನು ಬಿತ್ತೋಣ ಎಂಬುದು ಈ ಪದ್ಯದ ಆಶಯವಾಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷ ಭೂಷಣಗಳು ಹೇಗಿದ್ದವು?

ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಭಾರತ ಸಂಸ್ಕೃತಿಯನ್ನು ಬೀಂಬಿಸುವ ಕನ್ನಡ ನಾಡಿನ ವೈಭವವನ್ನು ಮೆರೆಸುವಂತಹ ವೇಷಭೂಷಣಗಳನ್ನೇ ತೊಟ್ಟಿದ್ದರು. ಅಗಲವಾದ ಎಂಟೂವರೆ ಮೊಳ ಉದ್ದದ ಖಾದಿ ಕಪ್ಪು ಪಂಚೆಯನ್ನು ಉಟ್ಟಿದ್ದರು. ಅದು ಖಾದಿಯಲ್ಲಿನ ದಪ್ಪ ನೂಲಿನ ಬಟ್ಟೆಯಾಗಿತ್ತು. ಅದಕ್ಕೆ ಅಗಲವಾದ ಕೆಂಪು ಕಂಬಿ, ಕಂಬಿಯ



ತುದಿಯಲ್ಲಿ ನಾಲ್ಕು ಜರಿ ಗೆರೆಗಳಿದ್ದವು. ಭಾರತದಲ್ಲಿದ್ದಾಗ ಅತೀ ಭರ್ಜರಿಯಾಗಿ ಕಾಣುತ್ತದೆಂದು ಅದನ್ನು ಹೆಚ್ಚಾಗಿ ಉಡುತ್ತಿರಲಿಲ್ಲ. ಹೊರದೇಶಕ್ಕೆ ಹೋಗುವಾಗ ದಪ್ಪವಾಗಿರುವುದರಿಂದ ಬೆಚ್ಚಗಿರುತ್ತದೆಂದು ತೆಗೆದುಕೊಂಡು ಹೋಗಿದ್ದರು. ಚಳಿಯಿದ್ದ ಕಾರಣ ಅದನ್ನು ಉಟ್ಟುಕೊಂಡಿದ್ದರಲ್ಲದೆ ಒಂದು ಕೆಂಪು ಉಣ್ಣೆಯ ಶಾಲು ಹೊತ್ತುಕೊಂಡಿದ್ದರು. ತಲೆಗೆ ಮಫ್ಲರ್ ಕಟ್ಟಿಕೊಂಡಿದ್ದರು. ಕಾವಿ ಬಣ್ಣದ ನೀಳವಾದ ಜುಬ್ಬ ತೊಟ್ಟಿದ್ದರು. ಹಣೆಯಲ್ಲಿ ಥಾಳಾದ ಕೆಂಪು ನಾಮ, ತಲೆ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿ ಗಡ್ಡ, ಬಿಳಿ ಮೀಸೆ, ಕಾಲಿಗೆ ದಪ್ಪವಾದ ಎಕ್ಕಡ, ಅವರ ಮೈಯಲ್ಲಿರುವ ಉಡುಪುಗಳಲ್ಲಿ ಏಳೆಂಟು ಬಣ್ಣಗಳು ಕಾಣುತ್ತಿದ್ದವು. ಹೀಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳಿದ್ದವು.

**ಅಥವಾ**

ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿಕೊಂಡರು?

ಗೊರೂರರು ಅಮೆರಿಕದ ಮಗಳ ಮನೆಯಲ್ಲಿದ್ದಾಗ ಇದ್ದಕ್ಕಿದ್ದಂತೆ ಅಡುಗೆ ಮನೆಯ ವಿದ್ಯತ್ ಒಲೆಯಿಂದ 'ಕೊಯ್' ಎಂಬ ಶಬ್ದ ಪ್ರಾರಂಭವಾಯಿತು. ವಿದ್ಯುತ್ ಒಲೆಗಳ ಸ್ವಿಚ್ ಬಗ್ಗೆ ಲೇಖಕರಿಗೆ ಹಾಗೂ ಅವರ ಮನೆಯವರಿಗೆ ಮಾಹಿತಿ ಇರಲಿಲ್ಲ. ಹಾಗಾಗಿ ಅದನ್ನು ನಿಲ್ಲಿಸಲಾಗದೆ ಸಹಾಯಕ್ಕಾಗಿ ಅಕ್ಕ ಪಕ್ಕದ ಮನೆಯವರನ್ನು ಕೇಳಲು ಹೋದರೆ ಯಾರೂ

VIJAYAPUR DISTRICT KANNADA SUBJECT FORUM

ಸಿಗಲಿಲ್ಲ. ಮನೆಯಿಂದ ಹತ್ತಿರದಲ್ಲಿ ಒಂದು ಪ್ರೈಮರಿ ಶಾಲೆಯಿತ್ತು, ಅಲ್ಲಿಗೆ ಹೋಗಿ ಯಾರಾದರೂ ಒಬ್ಬರ ಸಹಾಯ ಕೇಳಬೇಕೆಂದು ಹೋದರೆ ವಿದ್ಯಾರ್ಥಿಗಳು ಇವರ ವೇಷಭೂಷಣಗಳನ್ನು ನೋಡಿ, ಹೆದರಿ ಶಾಲೆಯ ಒಳಗಡೆಯಿದ್ದ ಬ್ಯಾಡ್‌ಮಿಂಟನ್ ಟೆನ್ನಿಸ್ ಕೋರ್ಟ್‌ಹಾಲ್‌ಗೆ ನುಗ್ಗಿದರು. ಅಲ್ಲಿನ ಉಪಾಧ್ಯಾರು ಸಹ ಇವರನ್ನು ನೋಡಿ ನಕ್ಕು ಕರೆದು ಕೂಡಿಸಿದರು. ಅವರೊಂದಿಗೆ ಗಾಂಧೀಜಿ ಹಾಗೂ ಖಾದಿ ಬಟ್ಟೆಯ ಪರಿಚಯವನ್ನು ಮಾಡುತ್ತ ಮೈಮರೆತು ಕೂತಾಗ ಅವರ ಹೆಂಡತಿ ಬಂದರು. ಅವರನ್ನು ನೋಡಿ ಬಂದ ಕಾರ್ಯವನ್ನು ನೆನಪಿಸಿಕೊಂಡು ಅಲ್ಲಿನ ಉಪಾಧ್ಯಾರೊಬ್ಬರಿಗೆ ಮನೆಯಲ್ಲಿ ಉಂಟಾದ ಧ್ವನಿಯ ಬಗ್ಗೆ ವಿವರಿಸಿ, “ನಮ್ಮ ಮನೆ ನೋಡಿ ಆ ಎದುರು ಸಾಲಿನಲ್ಲಿದೆ. ಅಲ್ಲಿ ವಿದ್ಯುತ್ ಒಲೆ ಏನೋ ತೊಂದರೆ ಕೊಡುತ್ತಿದೆ. ಅದನ್ನು ನಿಲ್ಲಿಸಲು ಗೊತ್ತಿರುವವರನ್ನು ಕಳುಹಿಸಿಕೊಡಿ" ಎಂದು ಕೇಳಿದಾಗ ಉಪಾಧ್ಯಾಯರು ಒಬ್ಬ ಬಲಿಷ್ಠ ಹುಡುಗನ್ನು ಕೊಟ್ಟು ಕಳುಹಿಸಿದರು. ಅವನು ನೆಟ್ಟಗೆ ಅಡುಗೆ ಮನೆಗೆ ಬಂದು ಸುತ್ತಲೂ ನೋಡಿ ಅದಕ್ಕೆ ಸಂಬಂಧಿಸಿದ ಸ್ವಿಚ್‌ನ್ನು ಪತ್ತೆ ಮಾಡಿ ಒತ್ತಿದ ಕೂಡಲೇ ಆ ಧ್ವನಿ ನಿಂತಿತು. ಹೀಗೆ ಗೊರೂರರು ವಿದ್ಯುತ್ ಒಲೆಯಿಂದ ಉಂಟಾದ ಅಪಾಯವನ್ನು ಪರಿಹರಿಸಿಕೊಂಡರು.

29. ಧೃತರಾಷ್ಟ್ರ ಹಾಗೂ ಗಾಂಧಾರಿ ಇವರು ದುರ್ಯೋಧನನಿಗೆ ನಾವು ವಯೋವೃದ್ಧರು ಕುರುಡರು



ಎನ್ನದೆ ಎಮ್ಮ ನುಡಿಗೇಳ್ ಎಂದು ಹೇಳುವ ಮಾತುಗಳ ಔಚಿತ್ಯವೇನು? **ಅಥವಾ**

‘ಎಮ್ಮನುಡಿಗೇಳ್' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ವಯೋವೃದ್ಧರಾದ ತಂದೆ ತಾಯಿಗಳು ರಣರಂಗಕ್ಕೆ ಬಂ ದು ಸಂಧಿಗಾಗಿ ಪ್ರಾರ್ಥಿಸುವರು. ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ. ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಆ ಪಾಂಡುವಿನ ಮಕ್ಕಳು ನಿನ್ನಲ್ಲಿ ಹೊಂದಿಕೊಳ್ಳುತ್ತಾರೆ. ಭೀಷ್ಮನಿಗೆ, ದ್ರೋಣನಿಗೆ ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಯುದ್ಧ ಮಾಡುವವರು ಯಾರೂ ಇಲ್ಲ. ಯುದ್ಧದಲ್ಲಿ ಮಡಿದ ಮಕ್ಕಳ ಬಗ್ಗೆ ನಮ್ಮ ಮನಸ್ಸಿನಲ್ಲಿ ಏನೂ ದುಃಖವಿಲ್ಲ. ಅದು ಹೇಗೆಂದರೆ - ಹಗಲಿನಲ್ಲಿ ಸೂರ್ಯನೊಬ್ಬನೇ ಸಾಕು. ದೀವಿಗೆಗಳು ಉರಿದರೂ ಅಷ್ಟೇ, ನಂದಿದರೂ ಅಷ್ಟೆ. ಪ್ರತಿಭಟಿಸದೆ ಸಂಧಿಗೆ ಒಪ್ಪಕೋ, ನಿನಗೆ ಕೈಯೊಡ್ಡಿ ಬೇಡುವೆನು" ಎಂದು ಹೇಳುತ್ತಾನೆ. ಆ ಮಾತಿಗೆ ಬೆಂಬಲವಾಗಿ ಗಾಂಧಾರಿಯು ದುರ್ಯೋಧನನನ್ನು ಕುರಿತು ಹೀಗೆ ಹೇಳುತ್ತಾಳೆ.

"ಕುರುವಂಶವೆಂಬ ತೋಟವು ಭೀಮನೆಂಬ ಆನೆಯು ಮದದಿಂದ ಕುರುಡಾಗಿ ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು. ಪುಣ್ಯದಿಂದ ಒಂದು ದೊಡ್ಡ ಮರವು ಉಳಿದಂತೆ ನೀನು ಉಳಿದಿರುವೆ. ಇನ್ನು ಯದ್ಧ ಮಾಡುವಂತವರು ಯಾರೂ ಉಳಿದಿಲ್ಲ. ಮಗನೇ ಮುದುಕರು ಕುರುಡರು ಎನದೆ ನಮ್ಮ ಮಾತನ್ನು ಕೇಳು.

VIJAYAPUR DISTRICT KANNADA SUBJECT FORUM

ಆಲೋಚಿಸಿ ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದಳು.

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 X 4 = 4 (2+2)**

ಬಸವಣ್ಣನವರು ಹೇಳುವಂತೆ ನಮ್ಮ ಮಾತಿನಲ್ಲಿ, ಮನದಲ್ಲಿ, ಕಣ್ಣಲ್ಲಿ, ಕಿವಿಯಲ್ಲಿ ಸತ್ಯಶಿವನೇ ತುಂಬಿಕೊಂಡಾಗ ನಮ್ಮ ಜೀವನವು ಸುಂದರವಾಗುವುದರಲ್ಲಿ ಸಂಶಯವೇನಿದೆ? ಮಾತು ಮುತ್ತಿನ ಹಾರವಾದಾಗ, ಜ್ಯೋತಿರ್ಲಿಂಗವಾದಾಗ ಅದು ದೇವಲೋಕಕ್ಕೆ ದಾರಿಯಾಗುತ್ತದೆ, ದೇವನೇ ನೆಲೆಸಿ ಬಿಡುತ್ತಾನೆ. ಮಹಾಕವಿ ಕಾಳಿದಾಸನು ತನ್ನ ಮೇಘದೂತ , ಶಕುಂತಲಾ ಮೊದಲಾದ ಕಾವ್ಯಗಳಲ್ಲಿ ಸರಸ ನುಡಿಗಳನ್ನಾಡಿ ಸೌಂದರ್ಯ ರಸಸಾಗರವನ್ನೇ ನಿರ್ಮಿಸಿದ್ದನ್ನು ನೋಡುತ್ತೇವೆ. ಅದೇ ಮಾತು ರಸರಹಿತವಾದರೆ, ವಿರಸವಾದರೆ, ಬಿರುಸಾದರೆ ಅದರಿಂದಾಗುವ ಅನಾಹುತ ಅಷ್ಟಿಷ್ಟಲ್ಲ.

**ಪ್ರಶ್ನೆಗಳು :**

1. ಬಸವಣ್ಣನವರು ಹೇಳುವಂತೆ ದೇವರು ನೆಲೆಸಲು ಇರಬೇಕಾದ ಅರ್ಹತೆಗಳು ಯಾವವು?

ಬಸವಣ್ಣನವರು ಹೇಳುವಂತೆ ದೇವರು ನೆಲೆಸಲು ನಮ್ಮ ಮಾತಿನಲ್ಲಿ, ಮನದಲ್ಲಿ, ಕಣ್ಣಲ್ಲಿ, ಕಿವಿಯಲ್ಲಿ ಸತ್ಯಶಿವನೇ ತುಂಬಿಕೊಂಡಿರಬೇಕು. ಮಾತು ಮುತ್ತಿನ ಹಾರವಾದಾಗ, ಜ್ಯೋತಿರ್ಲಿಂಗವಾದಾಗ ಅದು ದೇವಲೋಕಕ್ಕೆ ದಾರಿಯಾಗುವುದಲ್ಲದೆ, ದೇವನೇ ನೆಲೆಸಿ ಬಿಡುತ್ತಾನೆ.



2. ಕಾಳಿದಾಸನು ಸೌಂದರ್ಯ ರಸವನ್ನು ಹೇಗೆ ಮತ್ತು ಯಾವ ಕಾವ್ಯಗಳಲ್ಲಿ ತುಂಬಿದ್ದಾನೆ?

ಮಹಾಕವಿ ಕಾಳಿದಾಸನು ಸೌಂದರ್ಯ ರಸವನ್ನು ಸರಸ ನುಡಿಗಳನ್ನಾಡಿ ತನ್ನ ಮೇಘದೂತ , ಶಕುಂತಲಾ ಮೊದಲಾದ ಕಾವ್ಯಗಳಲ್ಲಿ ಸೌಂದರ್ಯ ರಸಸಾಗರವನ್ನೇ ತುಂಬಿದ್ದಾನೆ.

## ಭಾಗ - 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ : 10 X 1 = 10**

31. 'ಮೈದೋರು' ಪದವು ಈ ಸಂಧಿಗೆ ಉದಾಹರಣೆ :

ಎ) ಲೋಪಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಗುಣಸಂಧಿ

ಉತ್ತರ:ಸಿ) ಆದೇಶ ಸಂಧಿ

32. "ಅಂತರ್‌ಜೀವಿಯು ಹೆಚ್ಚಾಗಿ ಸಮಾಜದ ಮಧ್ಯದಲ್ಲಿಯೇ ಜೀವಿಸುತ್ತಾನೆ" ಈ ವಾಕ್ಯದಲ್ಲಿರುವ ಕಾಲ ಪ್ರತ್ಯಯ

ಎ) ಧ ಬಿ) ಉತ್ತ ಸಿ) ವ ಡಿ) ಆನೆ

VIJAYAPUR DISTRICT KANNADA SUBJECT FORUM

ಉತ್ತರ: ಬಿ) ಉತ್ತ

33. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸುತ್ತಾರೆ :

ಎ) ಆವರಣ ಬಿ) ವಾಕ್ಯವೇಷ್ಟನ ಸಿ) ಭಾವಸೂಚಕ ಡಿ) ಉದ್ಧರಣ

ಉತ್ತರ: ಡಿ) ಉದ್ಧರಣ

34. "ಮೈಮುಚ್ಚು" ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ಕ್ರಿಯಾ ಸಮಾಸ ಬಿ) ದ್ವಂದ್ವ ಸಮಾಸ ಸಿ) ಅಂಶಿ ಸಮಾಸ ಡಿ) ದ್ವಿಗು ಸಮಾಸ

ಉತ್ತರ: ಎ) ಕ್ರಿಯಾ ಸಮಾಸ

35. ಇದು ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾದ ಪದ :

ಎ) ಬಳೆಗಾರ ಬಿ) ಸಿರಿವಂತ ಸಿ) ಚಂದ್ರನಂತೆ ಡಿ) ಚಲುವಿಕೆ

ಉತ್ತರ: ಡಿ) ಚಲುವಿಕೆ

36. 'ಪೊದರೊಳ್' ಈ ಪದದಲ್ಲಿರುವ ವಿಭಕ್ತಿ :

ಎ) ತೃತೀಯಾ ಬಿ) ಸಪ್ತಮಿ ಸಿ) ದ್ವಿತೀಯಾ ಡಿ) ಷಷ್ಠಿ

ಉತ್ತರ: ಬಿ) ಸಪ್ತಮಿ

37. 'ದರ್ಬಾರು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

ಎ) ಹಿಂದೂಸ್ಥಾನಿ ಬಿ) ಫಾರ್ಸಿ ಸಿ) ಉರ್ದು ಡಿ) ಅರಬ್ಬಿ

ಉತ್ತರ: ಎ) ಹಿಂದೂಸ್ಥಾನಿ



38. ವಿದ್ಯರ್ಥಕ ಕ್ರಿಯಾಪದಕ್ಕೆ ಸೂಕ್ತ ಉದಾಹರಣೆಯಿದು :

ಎ) ಮಾಡನು ಬಿ) ತಿಂದಳು ಸಿ) ಮಾಡಲಿ ಡಿ) ಮಾಡಿಯಾನು

ಉತ್ತರ: ಸಿ) ಮಾಡಲಿ

39. ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳೇ

ಎ) ಸಾಮಾನ್ಯಾವ್ಯಯ ಬಿ) ಭಾವಸೂಚಕಾವ್ಯಯ □□) ಅನುಕರಣಾವ್ಯಯ ಡಿ) ಕ್ರಿಯಾರ್ಥಕಾವ್ಯಯ

ಉತ್ತರ: ಡಿ) ಕ್ರಿಯಾರ್ಥಕಾವ್ಯಯ

40. "ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು" ಇದು ಈ ವಾಕ್ಯಕ್ಕೆ ಉದಾಹರಣೆಯಾಗಿದೆ :

ಎ) ಸಾಮಾನ್ಯ ಬಿ) ವಿಧ್ಯರ್ಥಕ ಸಿ) ಸಂಯೋಜಿತ ಡಿ) ಮಿಶ್ರ

ಉತ್ತರ: ಎ) ಸಾಮಾನ್ಯ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

41. ಹಿರಿಮೆ ; ಭಾವನಾಮ :: ಹನ್ನೆರಡು ; ……………………

ಉತ್ತರ: ಸಂಖ್ಯಾವಾಚಕ.

VIJAYAPUR DISTRICT KANNADA SUBJECT FORUM

42. ನಿಲ್ಲುನಿಲ್ಲು ; ದ್ವಿರುಕ್ತಿ :: ಕೆನೆಮೊಸರು ; ……………………

ಉತ್ತರ:ಜೋಡುನುಡಿ.

43. ನೆನಪು ; ಕೃದಂತ ಭಾವನಾಮ :: ಮಾಡದೆ ; ……………………

ಉತ್ತರ: ಕೃದಂತಾವ್ಯಯ.

44. ವರ್ಷ ; ವರುಷ :: ಬಿನ್ನಹ ; ……………………

ಉತ್ತರ:ವಿಜ್ಞಾಪನೆ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1 X 3 = 3**

UU-U - U - UUU UU UU UUU

ತೆಗೆದುತ್ತ|ರೀಯಮಂ| ಮುರಿದು ಕುದು|ರೆಯ ಗಳಕೆ | = 20

UUU UU -UUU --U UUU -

ಬಿಗಿದು ಕದ|ಳೀದ್ರುಮಕೆ| ಕಟ್ಟಲ್ಕೆ| ಮುನಿಸುತರ್ | = 20

UU UUU -U- UUUUU -U- UU UUU -UUU -

ಮಿಗೆ ನಡುಗಿ| ಬೇಡಬೇ|ಡರಸುಗಳ| ವಾಜಿಯಂ| ಬಿಡು ಬಡಿವ|ರೆಮ್ಮನೆನ|ಲು || = 30+2



**ಛಂದಸ್ಸಿನ ಹೆಸರು :** <u>ವಾರ್ಧಕ ಷಟ್ಪದಿ.</u>

**ಅಥವಾ**

ನ ಜ ಭ ಜ ಜ ಜ ರ

UUU U-U - UU U-U U-U U- U -U-

ಕುರುಕು|ಳನಂದ|ನಂ ಪವ|ನನಂದ|ನನೆಂಬ| ಮದಾಂಧ|ಗಂಧಸಿಂ

ನಜಭಜಜಂಜರಂ ಬಗೆಗೊಳ್ಳುತ್ತಿರೆ ಚಂಪಕಮಾಲೆ ಎಂದಪರ್.

**ಛಂದಸ್ಸಿನ ಹೆಸರು :** <u>ಚಂಪಕಮಾಲಾವೃತ್ತ.</u>

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ :** **1 X 3 = 3**

46. "ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

VIJAYAPUR DISTRICT KANNADA SUBJECT FORUM

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ಸತಿಪತಿಗಳೊಂದಾಗದವನ ಭಕ್ತಿ.

**ಉಪಮಾನ** : ಅಮೃತದೊಳು ವಿಷ ಬೆರೆಯುವುದು.

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ**: ಲುಪ್ತ.(ನಿರರ್ಥಕ)

**ಸಮನ್ವಯ** : ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದವನ ಭಕ್ತಿ ಉಪಮಾನವಾದ ಅಮೃತದೊಳು ವಿಷ ಬೆರೆಯುವುದಕ್ಕೆ ಹೋಲಿಸಲಾಗಿದೆ. ಇದರಲ್ಲಿ ಸಮಾನ ಧರ್ಮ ಇಲ್ಲದಿರುವುದರಿಂದ ಇದು ಲುಪ್ತೋಪಮಾಲಂಕಾರ.

**ಅಥವಾ**

“ಮಾತು ಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ."

**ಅಲಂಕಾರದ ಹೆಸರು** : ದೃಷ್ಟಾಂತ ಅಲಂಕಾರ.

**ಲಕ್ಷಣ** :ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ,ಉಪಮಾನ) ಅರ್ಥಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದೃಷ್ಟಾಂತ ಅಲಂಕಾರ.



**ಉಪಮೇಯ** : ಮಾತು ಬಲ್ಲವನಿಗೆ ಜಗಳವಿಲ್ಲ.

**ಉಪಮಾನ** : ಊಟಬಲ್ಲವನಿಗೆ ರೋಗವಿಲ್ಲ.

**ಸಮನ್ವಯ** : ಇಲ್ಲಿ ಉಪಮೇಯಾದ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ

ಉಪಮಾನವಾದ ಊಟಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ. ಆದ್ದರಿಂದ ಇದು ದೃಷ್ಟಾಂತ ಅಲಂಕಾರ.

## ಭಾಗ - 'ಸಿ'

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ :1X3 = 3**

- ಮಾತೇ ಮುತ್ತು, ಮಾತೇ ಮೃತ್ಯು.
- ಅತಿ ಆಸೆ ಗತಿಕೇಡು.
- ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ.

VIJAYAPUR DISTRICT KANNADA SUBJECT FORUM

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ ______________________ ಎಂಬ ಗಾದೆ ಪ್ರಸಿದ್ಧವಾಗಿದೆ.

-------------------------------------------

-----------------------------------------------

-----------------------------------------------

-----------------------------------------------

**48.** ನಿಮ್ಮನ್ನು ಇಂಡಿಯಲ್ಲಿನ ರಾಮನಗರ ಬಡಾವಣೆ ವಿಶ್ವನಾಥ / ನಂದಿತಾ ಎಂದು ಭಾವಿಸಿ ಮಕ್ಕಳ ದಿನಾಚರಣೆ ಆಚರಿಸಿದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.. **1 X 5 = 5**

**ಅಥವಾ**

ನಿಮ್ಮನ್ನು ಸಿಂದಗಿಯ ನೂತನ ಪ್ರೌಢ ಶಾಲೆಯ ಶಶಿಧರ/ಮಧುಶ್ರೀ ಎಂದು ಭಾವಿಸಿ, ಧಾರವಾಡದಲ್ಲಿರುವ ನಿಮ್ಮ ತಾಯಿಯವರಿಗೆ ಅಭ್ಯಾಸದ ಪ್ರಗತಿಯನ್ನು ತಿಳಿಸಿ ಪತ್ರ ಬರೆಯಿರಿ..



**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ಇವರಿಗೆ,

-----------------

-----------------

-----------------

ಮಾನ್ಯರೆ,

ವಿಷಯ : ------------------------------

------------------------------

VIJAYAPUR DISTRICT KANNADA SUBJECT FORUM

--------------------------------------------

--------------------------------------------

--------------------------------------------

--------------------------------------------

------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ---------- ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------

**2. ವಯಕ್ತಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ದಿನಾಂಕ. ----------------

(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

-----------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)

ಮುಖ್ಯ ವಿಷಯವೆನೆಂದರೆ ----------------------------

------------------------------------------------

------------------------------------------------

------------------------------------------------

-----------------------------------------------

------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,
-------------------------
-------------------------
-------------------------

VIJAYAPUR DISTRICT KANNADA SUBJECT FORUM

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.** **1 X 5 = 5**

- ಗಣಕ ಯಂತ್ರದ ಮಹತ್ವ
- ಸ್ವಚ್ಛತಾ ಆಂದೋಲನದಲ್ಲಿ ವಿದ್ಯಾರ್ಥಿಗಳ ಪಾತ್ರ
- ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆ

**ಪೀಠಿಕೆ :** ________________________________

________________________________

________________________________

**ವಿವರಣೆ :** ________________________________

________________________________

VIJAYAPUR DISTRICT KANNADA SUBJECT FORUM

**ಉಪಸಂಹಾರ :** ________________________

*****************

| 2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 5. | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಗದ್ಯಭಾಗ** | | | | | | | | | | | | | | |
| 01 | ಶಬರಿ. | | | | | | | | | | 4(1) | | | **4** | **1** |
| 02 | ಅ. ಗೊರೂರು. | | 1(1) | | | | | | | 3(1) | | | | **4** | **2** |
| 03 | ಜೀವನ ದೃಷ್ಟಿ. | | 1(1) | | | 2(1) | | | | | | | | **3** | **2** |
| 04 | ಧರ್ಮ ಸಮದೃಷ್ಟಿ. | | | | | | | | | 3(1) | | | | **3** | **1** |
| 05 | ಭಾ.ಶಿ.ಎಂ. ವಿ. | | 1(1) | | | 2(1) | | | | | | | | **3** | **2** |
| 06 | ಎದೆಗೆ ಬಿದ್ದ ಅಕ್ಷರ. | | | | | | 3(1) | | | | | | | **3** | **1** |
| 07 | ವೃಕ್ಷಸಾಕ್ಷಿ. | | 1(1) | | | 2(1) | | | | | | | | **3** | **2** |
| 08 | ವ್ಯಾಘ್ರಗೀತೆ. | | 1(1) | | | 2(1) | | | | | | | | **3** | **2** |
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗೇಳ್. | | | | | | | | | | | | 4(1) | **4** | **1** |
| 02 | ಹ.ಹಾ. ನೋಡಿದಿರಾ. | | | 4(1) | | | | | | | | | | **4** | **1** |
| 03 | ಹಲಗಲಿ ಬೇಡರು. | | | | | | | | | 3(1) | | | | **3** | **1** |
| 04 | ವಚನ ಸೌರಭ. | | | | | | | | | 3(1) | | | | **3** | **1** |
| 05 | ಸಂಕಲ್ಪಗೀತೆ. | | | | | | | | | | 4(1) | | | **4** | **1** |
| 06 | ಕೌ. ಕೊಂ. ನೀನು. | | 1(1) | | | | 3(1) | | | | | | | **4** | **2** |
| 07 | ವೀರಲವ. | | 1(1) | | | 2(1) | | | | | | | | **3** | **2** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |



| ಕ್ರ. | ಪಾಠದ ಹೆಸರು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಅಂ | ಪ್ರ |
|---|---|---|---|---|---|---|---|

| ಸಂ. | | ವ ನಿ | ಕಿ ಉ 1 | ದೀ ಉ 2 | ವ ನಿ | ಕಿ ಉ 2 | ದೀ ಉ 1 | ದೀ ಉ 2 | ಕಿ ಉ 2 | ದೀ ಉ 1 | ದೀ ಉ 2 | ದೀ ಉ 3 | ದೀ ಉ 2 | ಕ ಗ ಳು | ಶ್ನೆ ಗ ಳ ಸಂ. |
|---|---|---|---|---|---|---|---|---|---|---|---|---|---|---|---|
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | | | | 2(1) | | | | | **2** | **1** |
| 02 | ನಾಮಫಲಕ. | | | | | 2(1) | | | | | | | | **2** | **1** |
| 03 | ಉದಾತ್ತ ಚಿಂತನೆಗಳು | | | | | | | | 2(1) | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದ ಒಗಟುಗಳು | | | | | 2(1) | | | | | | | | **2** | **1** |
| | **ಪ. ಪೋ.ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.

# ಪ್ರಶ್ನಾನುಸಾರ ವಿಶ್ಲೇಷಣೆ - 5

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 17 | ಗ್ರಹಿಕೆ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 18 | ಅಭಿವ್ಯಕ್ತಿ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 19 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 3.5 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 5 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸುಲಭ | 3.5 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸುಲಭ | 4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸುಲಭ | 4 ನಿಮಿಷ |

Vijayapur District Kannada Subject Forum

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಸುಲಭ | 5 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಕಠಿಣ | 6 ನಿಮಿಷ |
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 6 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 6 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪರಿತ ಗದ್ಯ | 4 | ಸಾಧಾರಣ | 6 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸಾಧಾರಣ | 2 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸಾಧಾರಣ | 2 ನಿಮಿಷ |
| 41 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸಾಧಾರಣ | 1.5 ನಿಮಿಷ |
| 42 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸಾಧಾರಣ | 1.5 ನಿಮಿಷ |
| 43 | ಅಭಿವ್ಯಕ್ತಿ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಕಠಿಣ | 2 ನಿಮಿಷ |
| 44 | ಅಭಿವ್ಯಕ್ತಿ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸಾಧಾರಣ | 1.5 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಸಾಧಾರಣ | 5 ನಿಮಿಷ |
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಸಾಧಾರಣ | 5 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸಾಧಾರಣ | 4 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಸಾಧಾರಣ | 10 ನಿಮಿಷ |

Vijayapur District Kannada Subject Forum

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 5.

## ವಿಷಯ : ಪ್ರಥಮ ಭಾಷೆ ಕನ್ನಡ

### ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದ ಪ್ರಶ್ನೆಗಳಿಗೆ ಒಂದೊಂದ ವಾಕ್ಯದಲ್ಲಿ ಉತ್ತರ ಬರೆಯಿರಿ : 9 X 1 = 9**

1. ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯದ ಭಾಗಗಳು ಯಾವವು?

ಅಯ್ಯಂಗಾರರು ಹೇಳಿದ ಕನ್ನಡ ನಾಡಿನ ಅನೇಕ ಜನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದವು.

2. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?

ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಕಾಲಿದಾಸನು ಕಲ್ಪಿಸಿದ ಒಬ್ಬ ಋಷಿ ಅರಣ್ಯಕ.

3. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?

ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

VIJAYAPUR DISTRICT KANNADA SUBJECT FORUM

4. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?

ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿಯ ನ್ಯಾಯವನ್ನು ಬಗೆಹರಿಸಲು ವೃಕ್ಷದ ಬಳಿ ಸಾಕ್ಷಿ ಕೇಳಲು ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಬಂದರು.

5. ಹುಲಿಗೆ ಪರಮಾನಂದವಾಗಲು ಕಾರಣವೇನು?

ಹುಲಿಗೆ ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಪರಮಾನಂದವಾಯಿತು.

6. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?

ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.

7. ಯಜ್ಞಾಶ್ವವನ್ನು ಕಟ್ಟಿದವರು ಯಾರು?

ಯಜ್ಞಾಶ್ವವನ್ನು ಕಟ್ಟಿದವರು ವೀರಲವ.

8. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?

ಮಾನವ ಭೂಮಿಯ ಮಾಲೀಕ ಆದೆನೆಂಬ ಅಹಂಕಾರದಿಂದ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡ.

9. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?

ದಟ್ಟವಾದ ಕಾಡಿನಲ್ಲಿಯ ಮರದ ಪೊಟರೆಯಲ್ಲಿ ಮುದ್ದು ಪಾರಿವಾಳಗಳ ಜೋಡಿ ಸಂಸಾರ ಹೂಡಿತ್ತು.

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಅಂತರ್‌ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು?

ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಹೊರಟ ಅವನಿಗೆ ಉಳಿದವರ ಯೋಗಕ್ಷೇಮವನ್ನು ಹೊರುವ ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ.

11. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

12. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

ಧರ್ಮಬುದ್ಧಿಯು ದುಷ್ಟಬುದ್ಧಿಗೆ 'ಹೊನ್ನನ್ನು ಹಂಚಿಕೊಳ್ಳೋಣ' ಎಂದಾಗ ದುಷ್ಟಬುದ್ಧಿಯು "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರಲು ಸಾಧ್ಯವಿಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಕಾರಣ ನನಗೂ ನಿನಗೂ ಖರ್ಚಿಗೆ ಬೇಕಾದಷ್ಟು ಮಾತ್ರ ಹಂಚಿಕೊಳ್ಳೋಣ. ಉಳಿದ ಹೊನ್ನವನ್ನು ಇಲ್ಲಿಯೇ ಇಟ್ಟು ಹೋಗೋಣ" ಎಂದು ಸಲಹೆಯಿತ್ತನು.

VIJAYAPUR DISTRICT KANNADA SUBJECT FORUM

13. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

ಶಾನುಭೋಗರು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು, ಅದು ಕಾಡುದಾರಿಯಾಗಿತ್ತು. ಆ ದಿನ ಬೆಳದಿಂಗಳಿನ ರಾತ್ರಿ. ಆದರೂ ಶಾನುಭೋಗರ ಮನಸ್ಸಿನಲ್ಲಿ ಭಯ ಆವರಿಸಿತ್ತು. ಹೊಟ್ಟೆಯೂ ಹಸಿಯುತ್ತಿತ್ತು. "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಶಾನುಭೋಗರು ಯೋಚಿಸಿದರು.

14. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು. ಇದು ಅವನ ಯಜ್ಞ ಕುದುರೆ. ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

15. ಇಂದುಮತಿ ಲಮಾಣಿಯವರು ಬೆಳಕು ನೀಡುವ ಬತ್ತಿ, ಮರ, ಹಾಗೂ ಕೈಯಲ್ಲಿರುವ ಗ್ರಂಥವಾಗಬೇಕೆಂದು ಹೇಳಲು ಕಾರಣವೇನು?

ಇಂದುಮತಿ ಲಮಾಣಿಯವರು ತನ್ನನ್ನು ಸುಟ್ಟುಕೊಂಡು ಬೆಳಕು ನೀಡುವ ಬತ್ತಿಯಾಗಬೇಕು, ಮಣ್ಣಲ್ಲಿ ಮಣ್ಣಾಗಿ ಮರವಾಗಿ ಬೆಳೆದು ಪುಣ್ಯವಂತರಿಗೆ ನೆರಳಾಗಬೇಕು. ಮಾನವನ ಅಜ್ಞಾನತೆಯನ್ನು ತೊಲಗಿಸಲು ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಬೆಕು ಎಂದು



ಹೇಳುತ್ತಾರೆ.

16. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.

ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ನಿಜಜೀವನದಲ್ಲಿ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ.

17. ಲೇಖಕಿ ಆರ್ ನಿರ್ಮಲ ಅವರು ಕನ್ನಡಿಗರನ್ನು ಮೆಚ್ಚಲು ಕಾರಣವೇನು?

ಲೇಖಕಿ ಆರ್ ನಿರ್ಮಲ ಅವರು ಮನೆಗೆ ಹೆಸರಿಡುವಾಗ ಶ್ರೀಕೃಪ, ಶ್ರೀನಿವಾಸ, ಶ್ರೀನಿಲಯ ದರ್ಶಿನಿ ಇಂಥವುಗಳಿಗೆ ಮೊದಲ ಸ್ಥಾನ. ಇವೆಲ್ಲ ಸಂಸ್ಕೃತ ಮೂಲದವು. ಕನ್ನಡದ ಮೇಲಿನ ಅಭಿಮಾನದಿಂದ "ಗೃಹ ಪ್ರವೇಶ" ಮಾಡಲು ಇಷ್ಟಪಡದೆ 'ಮನೆಯೊಕ್ಕಲು' ಮಾಡಿ ಅಚ್ಚಗನ್ನಡದ ಹೆಸರಿನ ಮನೆಯಲ್ಲಿ ವಾಸ ಮಾಡುವ ಕನ್ನಡಿಗರನ್ನು ಮೆಚ್ಚಬೇಕೆಂದು ಹೇಳುತ್ತಾರೆ.

VIJAYAPUR DISTRICT KANNADA SUBJECT FORUM

18. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ. ಇದರಿಂದ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ. ಅಲ್ಲದೆ ಜನರಿಗೆ ಜೀವನ, ಸ್ವಾತಂತ್ರ್ಯ ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

19. ಐದನೆಯ ಒಗಟಿಗೆ 'ತಾವರ ಬೇರು' ಎಂಬುದು ಉತ್ತರ – ಹೇಗೆ ?

ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು ಗಿಡವಾಗುವುದೆಂದರೆ ಅದು ತಾವರೆ. ತಾವರೆ ಹುಟ್ಟುವುದು ಕೆಸರಿನಲ್ಲಿಯೇ ಹಾಗಾಗಿ ಆ ಒಗಟಿಗೆ ಅರ್ಥ ತಾವರೆ ಬೇರು.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. “ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ"

ಈ ವಾಕ್ಯವನ್ನು "ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ" ಅವರು ರಚಿಸಿರುವ "ಅಮೆರಿಕದಲ್ಲಿ ಗೊರೂರು" ಪ್ರವಾಸಕಥನದಿಂದ ಆಯ್ದ "ಅಮೆರಿಕದಲ್ಲಿ ಗೊರೂರು" ಎಂಬ ಗದ್ಯಪಾಠದಿಂದ

ಆಯ್ದುಕೊಳ್ಳಲಾಗಿದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರು ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ತಾವು ಧರಿಸಿದ್ದ ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಯಂತ್ರದ ಸಹಾಯವಿಲ್ಲದೆ ತಯಾರಾಗುವ ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ.

97

21. “ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು.”

ಈ ವಾಕ್ಯವನ್ನು "<u>ಶ್ರೀ ಬಿ. ಎಂ. ಶ್ರೀ</u>" ಅವರು ಸಂಪಾದಿಸಿರುವ "<u>ಕನ್ನಡ ಬಾವುಟ</u>" ಕೃತಿಯಿಂದ ಆಯ್ದ "<u>ಧರ್ಮಸಮದೃಷ್ಟಿ</u>" ಎಂಬ ಶಾಸನದಿಂದ ಆಯ್ದುಕೊಳ್ಳಲಾಗಿದೆ.

ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನಗೊಳಿಸಬೇಕು ಎಂಬ ವಿಶಾಲ ಮನೋಭಾವನೆ ರಾಯನು ಹೊಂದಿರುವುದನ್ನು ಸ್ವಾರಸ್ಯವೂರ್ಣವಾಗಿ ತಿಳಿಸಲಾಗಿದೆ.

22. “ಹೊಡೆದರೋ ಗುಂಡ ಕರುಣೆ ಇಲ್ಲದ್ಹಂಗ"

ಈವಾಕ್ಯವನ್ನು "<u>ಡಾ. ಬಿ. ಎಸ್. ಗದಗದಗಿಮಠ</u>" ಅವರು ಸಂಪಾದಿಸಿರುವ "<u>ಕನ್ನಡ ಜನಪದ ಗೀತೆಗಳು</u>" ಕೃತಿಯಿಂದ ಆಯ್ದ "**<u>ಹಲಗಲಿಯ ಬೇಡರು</u>**" ಎಂಬ ಲಾವಣಿಯಿಂದ ಆರಿಸಲಾಗಿದೆ.

ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ ಸರಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕವರನ್ನು ಕರುಣೆಯಿಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುವನು.

VIJAYAPUR DISTRICT KANNADA SUBJECT FORUM

ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

23. “ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು"

ಈ ವಾಕ್ಯವನ್ನು "<u>ಶ್ರೀ ಸಂ. ಶಿ. ಭೂಸನೂರಮಠ</u>" ಅವರು ಸಂಪಾದಿಸಿರುವ "<u>ವಚನ ಸಾಹಿತ್ಯ ಸಂಗ್ರಹ</u>" ಎಂಬ ಕೃತಿಯಿಂದಾಯ್ದ "**<u>ವಚನ ಸೌರಭ</u>**" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಮಾತು ಮುತ್ತಾಗಬೇಕು, ಸ್ಪಟಿಕದ ಸಲಾಕೆಯಾಗಬೇಕು, ದೇವರು ಮೆಚ್ಚುವಂತೆ ಇರಬೇಕು ಎಂದು

ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಮಾತು ಹಿತಮಿತವಾಗಿರಬೇಕೆಂಬುದನ್ನು ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಈ ಮಾತಿನಲ್ಲಿ ವ್ಯಕ್ತಪಡಿಸಿದ್ದಾರೆ.

**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 X 3 = 6**

24. ದೇವನೂರು ಮಹಾದೇವ

ದಲಿತ ಸಾಹಿತ್ಯದ ಪ್ರಮುಖರಾದ ದೇವನೂರು ಮಹಾದೇವ ಅವರು ಕ್ರಿ. ಶ. 1949 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು. ಎದೆಗೆ ಬಿದ್ದ ಅಕ್ಷರ, ಒಡಲಾಳ, ಕುಸುಮಬಾಲೆ, ದ್ಯಾವನೂರು, ನಂಬಿಕೆಯ ನೆಂಟ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.



ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾಷಾ ಪರಿಷತ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ.

25. ಕುಮಾರವ್ಯಾಸ

ಕುಮಾರವ್ಯಾಸ ಎಂದೇ ಪ್ರಖ್ಯಾತನಾದ ಗದುಗಿನ ನಾರಾಣಪ್ಪ ಗದಗ ಜಿಲ್ಲೆಯ ಕೋಳಿವಾಡದವನು. ಈತನ ಕಾಲ ಕ್ರಿ. ಶ. 1430. ಕರ್ಣಾಟಭಾರತಕಥಾಮಂಜರಿ ಎಂಬ ಮಹಾ ಕಾವ್ಯವನ್ನು ರಚಿಸಿದ್ದಾನೆ. ಈ ಕೃತಿಗೆ ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂದು ಕರೆಯುವರು. ಈತ ಐರಾವತ ಎಂಬ ಕೃತಿ ರಚಿಸಿದ್ದಾನೆಂದು ತಿಳಿದು ಬಂದಿದೆ. ಇವರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದಿದೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ : 1 X 4 = 4**

26. ನೀಲಮೇಘಮಂಡಲ - ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಪಕ್ಕಿಸಿಕೊಂಡು
ಸೂರ್ಯ - ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

VIJAYAPUR DISTRICT KANNADA SUBJECT FORUM

**ಅಥವಾ**

ಯುಗ-ಯುಗಗಳ ಹಣೆ ಬರೆಹವ ಒರಸಿ

ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4**

27. ನೀನುಳ್ಳೊಡೆಲ್ಲರೊಳರೆಮ
ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

ಮಹಾಕವಿ ಪಂಪನು ಈ ಪದ್ಯದಲ್ಲಿ ಧೃತರಾಷ್ಟ್ರ ಹಾಗೂ ಗಾಂಧಾರಿಯರ ಪುತ್ರವ್ಯಾಮೋಹ ಹಾಗೂ ಬಲಿಷ್ಠನಾದ ದುರ್ಯೋಧನನ ಮೇಲಿದ್ದ ಪ್ರೀತಿಯನ್ನು ಅಭಿವ್ಯಕ್ತಪಡಿಸುವ ಮೌಲ್ಯಗಳನ್ನು



ನಾವು ಇಲ್ಲಿ ಕಾಣುತ್ತೇವೆ.

ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವರು. ಮನದಲ್ಲಿ ದುಃಖವು ಏನೂ ಇಲ್ಲ. ಮಗನೆ ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನ ಬೆಳಕು ಸಾಕಾಗದೆ, ಹಗಲಿಗೆ ಸೂರ್ಯನಿದ್ದ ಹಾಗೆ ನೀನು, ಎಷ್ಟಾದರೂ ದೀಪಗಳು ಉರಿದರೇನು? ನಂದಿದರೇನು? ಹಾಗೆ ಉಳಿದ ಮಕ್ಕಳು ಸತ್ತರೆನಂತೆ ನಮ್ಮ ಬಾಳನ್ನು ಬೆಳಗಲು ನೀನೊಬ್ಬನಿದ್ದರೆ ಸಾಕು ಎಂದು ತಂದೆಯ ಈ ಖಚಿತ ನಿರ್ಧಾರ ಅಭಿವ್ಯಕ್ತವಾಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. ಶಬರಿ ಮತ್ತು ರಾಮನ ಮಧ್ಯ ನಡೆದ ಸಂಭಾಷಣೆಯನ್ನು ಬರೆಯಿರಿ.

ಶಬರಿಯು ರಾಮನಿಗಾಗಿ ಹಂಬಲಿಸುತ್ತ ನಿತ್ಯ ಪೂಜೆಗೆ ಹೂ, ಹಣ್ಣು, ತಳಿರು ತಂದು ಅಲಂಕರಿಸುತ್ತ ರಾಮನಿಗಾಗಿ ವಿಶೇಷ ಹಣ್ಣುಗಳನ್ನು ಅರಸಿ ತಂದು ಭಕ್ತಿಯ ಪರಾಕಾಷ್ಠೆಯಲ್ಲಿ ನೆನೆಯುತ್ತ ಪೂಜಿಸುತ್ತಿರುವ ಶಬರಿಯ ಕುಟೀರಕ್ಕೆ ರಾಮ ಲಕ್ಷ್ಮಣರ ಆಗಮನವಾಗುತ್ತದೆ.

VIJAYAPUR DISTRICT KANNADA SUBJECT FORUM

ರಾಮ: ತಾಯಿ ದಾರಿಗರಿಗೆ ಇಲ್ಲಿ ಉಳಿದುಕೊಳ್ಳಲು ಆಶ್ರಯ ದೊರೆಯುವುದೇ?

ಶಬರಿ: (ದಿಟ್ಟಿಸಿನೋಡಿ, ನಡುಗುವ ಧ್ವನಿಯಲ್ಲಿ) ಎಲೈ ಮಹಾಪುರುಷನೇ ನೀನು ರಾಮನೆ!

ರಾಮ: ಹೌದು ತಾಯಿ, ನನ್ನನ್ನು ರಾಮನೆನ್ನುತ್ತಾರೆ. ಈತ ನನ್ನ ತಮ್ಮ ಲಕ್ಷ್ಮಣ.

ಶಬರಿ: (ಸಡಗರದಿಂದ) ನೀವು ರಾಮ ಲಕ್ಷ್ಮಣರೇ! (ಆಶ್ಚರ್ಯದಿಂದ ಕೇಳುತ್ತ ಅವರನ್ನು ಉಪಚರಿಸುತ್ತಾಳೆ ಹಾಗೂ ಆನಂದಭರಿತಳಾಗಿ ನರ್ತಿಸುತ್ತಾಳೆ)

ರಾಮ: ನಿನ್ನ ಆದರದೊಳು ನಾವು ಸುಖಿ, ಅರಣ್ಯದಲ್ಲಿದ್ದರೂ ಸ್ವರ್ಗದಂತ ಅನುಭವ. ನಿನಗೆ ನಾವು ಎಂದೆಂದಿಗೂ ಋಣಿಯಾಗಿದ್ದೇವೆ.

ಶಬರಿ: (ಕಂಬನಿದುಂಬಿ) ನನ್ನಾಸೆಯಂತೆ ನೀವು ಆಶ್ರಮಕ್ಕೆ ಬಂದಿದ್ದೀರಿ. ತುಂಬಾ ದಣಿದಿದ್ದೀರಿ. ಹಸಿವು ತೃಷೆಯಿಂದ ಬಳಲಿದ್ದೀರಿ. ನಾನು ಬಡವಳು ಒಬ್ಬಳೆ ಏನು ತಾನೇ ಮಾಡುತ್ತಾಳೆಂದು ಮರುಕ ತಳೆದಿರಾ? ಎಂದು ಪ್ರಶ್ನಿಸಿದಳು.

ರಾಮ: ತಾಯಿ ಏಕೆ ಈ ಕಣ್ಣೀರು? ನೀನು ನೀಡಿದ ಆದರ ಆಥಿತ್ಯ ಅಯೋಧ್ಯಯ ಅರಮನೆಗಿಂತಲೂ ಹೆಚ್ಚಿನದು. ಇದು ಕಾಡೆಂಬುದನ್ನು ಮರೆತು ಮನೆಯೆಂದರಿತು ನಿನ್ನನ್ನು ನಮ್ಮ ತಾಯಿ ಎಂದು ಭಾವಿಸಿದ್ದೇವೆ.

ಶಬರಿ: ರೂಪಿನಂತೆ ಮಾತು ಕೂಡ ಉದಾರವಾಗಿದೆ. ನಿಮ್ಮನ್ನು ಕಂಡ ಪುಣ್ಯವಂತೆ ನಾನು. ಗುರುಗಳನ್ನು ಪೂಜಿಸಿದಷ್ಟು ತೃಪ್ತಿ ನನಗೆ ಲಭಿಸಿದೆ.

ರಾಮ: ನಿನ್ನಂತಹ ಶಿಷ್ಯಳನ್ನು ಪಡೆದ ಆ ಗುರುಗಳು ಧನ್ಯರು. ಈ ಶಾಂತಿವನ ನಮ್ಮ ದುಃಖವನ್ನೆಲ್ಲ ಮರೆಯಿಸಿತು. ನೀನು ಪರಿಶುದ್ಧ ಪ್ರೇಮವುಳ್ಳವಳು. ಇಂದು ನಮ್ಮ ಸುದಿನ.

ಶಬರಿ: ನಮ್ಮ ಗುರುಗಳು ನಿಮ್ಮ ಆಗಮನದ ಬಗ್ಗೆ ಹೇಳಿದ ಮಾತುಗಳು ಇಂದು ನಿಜವಾಗಿದೆ. (ಆಗ



ರಾಮನಿಗೆ ತನ್ನ ಮನದಾಳವನ್ನು ತಿಳಿಸುವಳು) ಈ ಭವದಿಂದ ಬಿಡುಗಡೆ ಹೊಂದಬಯಸುತ್ತೇನೆ.

ರಾಮ: ಮಾತೆಯ ತೆರದಲ್ಲಿ ನೀನು ನಮ್ಮನ್ನು ಆದರಿಸಿ ಈ ರೀತಿ ಕೇಳುವುದು ಸರಿಯೇ?

ಶಬರಿ: ನನಗೆ ಪುಣ್ಯಲೋಕ ದೊರೆಯಲೆಂದು ಹರಸಿ, ಎಂದಳು.

ರಾಮ: ನನ್ನಿಂದ ನಿನಗೆ ಸಾವೇ ಕಾಣಿಕೆಯೆ?

ಶಬರಿ: ಅಲ್ಲ, ಮರಣವಲ್ಲ. ಮುಕ್ತಿಯದು.

ರಾಮ: ಮನ ಒಪ್ಪಿದರೂ ಎದೆ ಒಪ್ಪುತ್ತಿಲ್ಲ.

ಶಬರಿ: ನೀನು ಒಲಿದು ಒಪ್ಪಿದರೆ ಮುಕ್ತಿ ತಪ್ಪದೇ ದೊರೆಯುತ್ತದೆ.

ರಾಮ: ನಾನು ನಿನ್ನ ಅಪೇಕ್ಷೆಗೆ ಬೆರಗಾಗಿದ್ದೇನೆ. 'ನಿನ್ನೆ ಇಷ್ಟಾರ್ಥ ಸಿದ್ಧಿಸಲಿ.

ಶಬರಿ: (ಅಗ್ನಿ ಕುಂಡದ ಪ್ರದಕ್ಷಿಣೆ ಹಾಕುತ್ತ) ಕಾಡುಮೇಡು ಬೆಟ್ಟಗುಡ್ಡಗಳಿಗೆ ನಮೋ ನಮೋ ಎನ್ನುತ್ತ ಅಗ್ನಿ ಪ್ರವೇಶಿಸುತ್ತಾಳೆ.

**ಆಶಾ**

ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

ಶಬರಿಯು ತನ್ನ ಪರ್ಣಕುಟೀರದ ಬಾಗಿಲಿನಲ್ಲಿ ರಾಮಲಕ್ಷ್ಮಣರನ್ನು ಕಂಡಾಗ ಆಶ್ಚರ್ಯಚಕಿತಳಾಗಿ ನೀನು ರಾಮನೇ? ಮಹಾಪುರುಷನೇ? ಎಂದು ಪ್ರಶ್ನಿಸಿ, ಆತನೇ ರಾಮನೆಂದು ತಿಳಿದಾಗ ಅತ್ಯಂತ ಸಂತೋಷಗೊಳ್ಳುವಳು. ಅವಳ ಸಡಗರ ಹಾಗೂ ರಾಮಲಕ್ಷ್ಮಣರನ್ನು ಸತ್ಕರಿಸುವ ವಿಧಾನವನ್ನು ಮೇಳದವರ ಹಾಡಿನಲ್ಲಿ ಈ ರೀತಿ ವರ್ಣಿಸಲ್ಪಟ್ಟಿದೆ. ರಾಮನ ಹತ್ತಿರ ಬಂದು ಪಾದ ಮುಟ್ಟಿ ನಮಸ್ಕರಿಸಿ, ಆತನ ಕೈಯನ್ನು ಕಣ್ಣಿಗೊತ್ತಿಕೊಂಡು, ಆನಂದದ ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು. ಅಯ್ಯೋ ಏನು ಸಿದ್ಧವಾಗಿಲ್ಲವೇ ನಿನ್ನೆಯಷ್ಟು ಚನ್ನಾಗಿಲ್ಲವೆ, ಎಂದು ಬಗೆ ಬಗೆಯ ಕಂಪು ಸೂಸುವ ಹೂಗಳ ಮಾಲೆಯನ್ನು ಕೊರಳಿಗೆ ಹಾಕಿ, ಇದರಷ್ಟು ರುಚಿಯಾದ ಹಣ್ಣುಗಳು ಬೇರೆ ಎಲ್ಲಿಯೂ ಇಲ್ಲವೆಂದು ಹಣ್ಣುಗಳನ್ನು ತನ್ನ ಕೈಯಾರೆ ನೀಡಿ, ಉಪಚರಿಸಿದಳು. ಅವಳ ಪೂಜೆಯಿಂದ ಪ್ರಸನ್ನರಾದ ರಾಮ ಲಕ್ಷ್ಮಣರು ಧನ್ಯತಾ ಭಾವದಿಂದ ಮಂದಹಾಸ ಬೀರಿದರು. ಅದನ್ನು ಕಂಡು ಧನ್ಯನಾದೆಳೆಂದು ಸಂತಸ ವ್ಯಕ್ತಪಡಿಸಿದಳು. ಹೀಗೆ ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

29. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?

ಕವಿ ಶಿವರುದ್ರಪ್ಪನವರು ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚಬೇಕು. ಸಂಸಾರವೆಂಬ ಸಾಗರದಲ್ಲಿ ಕಷ್ಟಸುಖಗಳೆಂಬ ಬಿರುಗಾಳಿಗೆ ಸಿಲುಕಿ ಹೊಯ್ದಾಡುವ ಬದುಕೆಂಬ ಹಡಗವನ್ನು ಎಚ್ಚರಿಕೆಯಿಂದ ಮುನ್ನಡೆಸಬೇಕು. ಪರಿಸರ ಮಾಲಿನ್ಯವನ್ನು ಶುದ್ಧೀಕರಿಸುವ ಮುಂಗಾರಿನ ಮಳೆಯಂತೆ ಪರಿಸರ ರಕ್ಷಿಸಬೇಕು. ಬರುಡಾಗಿರುವ ಕಾಡುಗಳನ್ನು ಹಸಿರಿನಿಂದ ಕಂಗೊಳಿಸುವ ವಸಂತ ಕಾಲದಂತಾಗಬೇಕು. ಹೊಸ ಭರವಸೆಗಳ ಮೂಲಕ ಸ್ವಾಸ್ಥ್ಯ



ಸಮಾಜವನ್ನು ನಿರ್ಮಿಸಬೇಕು. ಜಾತಿ, ಮತ, ಧರ್ಮಗಳ ಭೇದ ಭಾವಗಳಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಯನ್ನು ಕೆಡುವಿ, ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗಬೇಕು. ಎಲ್ಲ ಮತಧರ್ಮಗಳು ಸಾಧನೆಯ ಮಾರ್ಗಗಳು ಎಂದು ತಿಳಿಯಬೇಕು. ಭಯ ಸಂಶಯದಿಂದ ಕೂಡಿದ ಕಂದಿದ ಕಣ್ಣುಗಳಲ್ಲಿ ಭವಿಷ್ಯದ ಕನಸು ಕಾಣುವಂತೆ ಮಾಡುವ ಧೃಡ ಸಂಕಲ್ಪ ಕೈಗೊಳ್ಳಬೇಕೆಂದು ಆಶಯ ವ್ಯಕ್ತಪಡಿಸುತ್ತಾರೆ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿರಿ.

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರು ನಾವು ಜೀವನದಲ್ಲಿ

VIJAYAPUR DISTRICT KANNADA SUBJECT FORUM

ಪ್ರೀತಿಯೆಂಬ ದೀಪವನ್ನು ಹಚ್ಚುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣವಾಗುವುದು, ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆದರೆ ಒದಗಬಹುದಾದ ಕಷ್ಟಗಳನ್ನು ಧೈರ್ಯವಾಗಿ ಎದುರಿಸಬಹುದು. ಪರಿಸರ ರಕ್ಷಣೆಯಲ್ಲಿ ತೊಡಗಿದರೆ ಉತ್ತಮ ಆರೋಗ್ಯವನ್ನು ಪಡೆಯಬಹುದು. ವನಸಂರಕ್ಷಣೆ ಮಾಡುವುದರಿಂದ ಕಾಡುಗಳನ್ನು ಹಸಿರಾಗಿರಿಸಬಹುದು. ಹೊಸ ಭರವಸೆಗಳನ್ನು ಮೂಡಿಸುವ ಸಂಕಲ್ಪ ಕೈಗೊಂಡರೆ ಸಮಾಜದ ಅದೋಗತಿಯನ್ನು ತಡೆಯಬಹುದು. ಸಮಾನತೆಯ ಮನೋಭಾವ ಹೊಂದಿದರೆ ಮನುಜರ ನಡುವಿನ ಭೇದ ಭಾವ ಹೋಗಲಾಡಿಸಬಹುದು. ಎಲ್ಲ ಮತಗಳು ಸಾಧನೆಯ ಹಾದಿಗೆ ಮಾರ್ಗದರ್ಶನ ಎಂದು ತಿಳಿದರೆ ಎಲ್ಲ ಮತಧರ್ಮದವರು ಶಾಂತಿ, ಪ್ರೀತಿ, ಕಾರಣ್ಯದಿಂದ ಬದುಕಬಹುದುಸಂಶಯ ತುಂಬಿದ ಕಣ್ಣುಗಳಿಂದ ಮುಕ್ತರಾಗಿ ಹೊಸ ಭವಿಷ್ಯದ ಕನಸನ್ನು ಕಾಣಬಹುದೆಂದು ಹೇಳಿದ್ದಾರೆ.

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 X 4 = 4 (2+2)**

ಮಕ್ಕಳ ಆಸಕ್ತಿ ಅರಳಿಸುವ, ವೈಜ್ಞಾನಿಕ ಮತ್ತಿತರ ನೂರಾರು ವಿಚಾರಗಳನ್ನೊಳಗೊಂಡ ಸುಮಾರು ಮೂರು ಸಾವಿರ ಪುಟಗಳ 'ಬಾಲ ಪ್ರಪಂಚ'ವನ್ನು ಕೇವಲ ಮೂರು ತಿಂಗಳೊಳಗೆ ಬರೆಯಲಾಯಿತು. ಬರೆದವರು ಯಾರು ಗೊತ್ತೆ? ನೂರಕ್ಕೂ ಹೆಚ್ಚು ಕಾದಂಬರಿಗಳು, ಅನುವಾದಿತ ಪ್ರಬಂಧಗಳು, ಪ್ರವಾಸ ಸಾಹಿತ್ಯ, ವಿಡಂಬನೆಯ ಬರಹಗಳು, ನಾಟಕಗಳು, ಗೀತನಾಟಕಗಳು, ಕಥೆಗಳು, ಯಕ್ಷಗಾನ, ಚಿತ್ರಕಲೆ, ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳು, ಪಠ್ಯಪುಸ್ತಕಗಳು, ಶಬ್ದಕೋಶ, ಜನಪ್ರಿಯ ವಿಜ್ಞಾನ ಪ್ರಪಂಚ, ಒಂದೇ ಎರಡೇ? ಅವರ ಕ್ರಿಯಾ ಶೀಲತೆ ಕೇವಲ ಗ್ರಂಥ ಸಾಹಿತ್ಯ ಪ್ರಪಂಚಕ್ಕೆ ಮೀಸಲಾಗದೇ ಸಾಮಾಜಿಕ, ರಾಜಕೀಯ, ನೃತ್ಯ ನಾಟಕ ಸಿನಿಮಾಗಳವರೆಗೂ ವ್ಯಾಪಿಸಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಅವರ ಹೆಸರು ಕೋಟ ಶಿವರಾಮ ಕಾರಂತ.



**ಪ್ರಶ್ನೆಗಳು :**

1. ಕೋಟ ಶಿವರಾಮ ಕಾರಂತ ಅವರು ಸಾಹಿತ್ಯದ ಯಾವ ಯಾವ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ?

ಕೋಟ ಶಿವರಾಮ ಕಾರಂತ ಅವರು ನೂರಕ್ಕೂ ಹೆಚ್ಚು ಕಾದಂಬರಿಗಳು, ಅನುವಾದಿತ ಪ್ರಬಂಧಗಳು, ಪ್ರವಾಸ ಸಾಹಿತ್ಯ, ವಿಡಂಬನೆಯ ಬರಹಗಳು, ನಾಟಕಗಳು, ಗೀತನಾಟಕಗಳು, ಕಥೆಗಳು, ಯಕ್ಷಗಾನ, ಚಿತ್ರಕಲೆ, ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳು, ಪಠ್ಯಪುಸ್ತಕಗಳು, ಶಬ್ದಕೋಶ, ಜನಪ್ರಿಯ ವಿಜ್ಞಾನ ಪ್ರಪಂಚ, ಹೀಗೆ ಹತ್ತು ಹಲವು ಸಾಹಿತ್ಯದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ .

2. ಕೋಟ ಶಿವರಾಮ ಕಾರಂತ ಅವರ ಕ್ರಿಯಾ ಶೀಲತೆಯನ್ನು ಕುರಿತು ಬರೆಯಿರಿ.

ಕೋಟ ಶಿವರಾಮ ಕಾರಂತ ಅವರು ಕೇವಲ ಮೂರು ತಿಂಗಳೊಳಗೆ ಸುಮಾರು ಮೂರು ಸಾವಿರ ಪುಟಗಳ 'ಬಾಲ ಪ್ರಪಂಚ'ವನ್ನು ಬರೆದರು. ಅವರ ಕ್ರಿಯಾ ಶೀಲತೆ ಕೇವಲ ಗ್ರಂಥ ಸಾಹಿತ್ಯ ಪ್ರಪಂಚಕ್ಕೆ ಮೀಸಲಾಗದೇ ಸಾಮಾಜಿಕ, ರಾಜಕೀಯ, ನೃತ್ಯ ನಾಟಕ ಸಿನಿಮಾಗಳವರೆಗೂ ವ್ಯಾಪಿಸಿದೆ.

VIJAYAPUR DISTRICT KANNADA SUBJECT FORUM

**ಭಾಗ - 'ಬಿ'**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ . ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ , ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ :** **10 X 1 = 10**

31. 'ಅನುನಾಸಿಕ' ಸಂಧಿಗೆ ಉದಾಹರಣೆಯಿದು :

ಎ) ದಿಗಂತ ಬಿ) ಸನ್ಮಾನ ಸಿ) ಏಕೈಕ ಡಿ) ಮೈದೋರು

ಉತ್ತರ:ಬಿ) ಸನ್ಮಾನ

32. ಪೇಳಿ ಎನ್ನರಸಿ ದೊರೆಯಳೇ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ :

ಎ) ಅಲ್ಪವಿರಾಮ ಬಿ) ಭಾವಸೂಚಕ ಸಿ) ಪ್ರಶ್ನಾರ್ಥಕ ಡಿ) ಆವರಣ

ಉತ್ತರ:ಸಿ) ಪ್ರಶ್ನಾರ್ಥಕ

33. 'ಕೃದಂತ ಭಾವನಾಮ'ಕ್ಕೆ ಸೂಕ್ತ ಉದಾಹರಣೆಯಿದು :

ಎ) ತಿನ್ನುವ ಬಿ) ಮಾಡುತ್ತ ಸಿ) ಬರೆದು ಡಿ) ಬಾಳುವಿಕೆ

ಉತ್ತರ:ಡಿ) ಬಾಳುವಿಕೆ

34. 'ಸಿಟ್ಟಿಲೆ <u>ಮುಂಗೈ</u> ಕಟ್ಟನೆ ಕಡಕೊಂಡ' ಗೆರೆ ಎಳೆದ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ಕ್ರಿಯಾ ಸಮಾಸ ಬಿ) ದ್ವಂದ್ವ ಸಮಾಸ ಸಿ) ಅಂಶಿ ಸಮಾಸ ಡಿ) ದ್ವಿಗು ಸಮಾಸ

ಉತ್ತರ:ಸಿ) ಅಂಶಿ ಸಮಾಸ

35. ರೂಢನಾಮಕ್ಕೆ ಸೂಕ್ತ ಉದಾಹರಣೆಯಾದ ಪದ :



ಎ) ರಾಹುಲ ಬಿ) ಪೂಜಾರಿ ಸಿ) ದೇಶ ಡಿ) ಭೀಮ

ಉತ್ತರ:ಸಿ) ದೇಶ

36. ಕ್ರಿಯಾರ್ಥಕಾವ್ಯಯ ಪದಕ್ಕೆ ಉದಾಹರಣೆಯಿದು :

ಎ) ಬೇಡ ಬಿ) ಆದ್ದರಿಂದ ಸಿ) ಅವನೇ ಡಿ) ಓಹೋ

ಉತ್ತರ: ಎ) ಬೇಡ

37. 'ಸಲಾಮು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

ಎ) ಫಾರ್ಸಿ  ಬಿ) ಪೋರ್ಚುಗೀಸ್  ಸಿ) ಹಿಂದೂಸ್ತಾನಿ  ಡಿ) ಇಂಗ್ಲಿಷ

ಉತ್ತರ:ಸಿ) ಹಿಂದೂಸ್ತಾನಿ

38. ಸಂಭವನಾರ್ಥಕ ಕ್ರಿಯಾಪದಕ್ಕೆ ಸೂಕ್ತ ಉದಾಹರಣೆಯಿದು :

ಎ) ಮಾಡನು  ಬಿ) ತಿಂದಳು  ಸಿ) ಮಾಡಲಿ  ಡಿ)ಮಾಡಿಯಾನು

ಉತ್ತರ:ಡಿ) ಮಾಡಿಯಾನು

39. 'ಕೋಟಿಕರಗಳಿಂ' ಈ ಪದದಲ್ಲಿರುವ ವಿಭಕ್ತಿ :

ಎ) ತೃತೀಯಾ  ಬಿ) ಸಪ್ತಮಿ  ಸಿ) ಪ್ರಥಮಾ  ಡಿ) ಪಂಚಮಿ

ಉತ್ತರ:ಎ) ತೃತೀಯಾ

40. 'ಹೊಸಗನ್ನಡ' ಪದವು ಈ ಸಮಾಸಕ್ಕೆ ಸೂಕ್ತ ಉದಾಹರಣೆಯಾಗಿದೆ :

VIJAYAPUR DISTRICT KANNADA SUBJECT FORUM

ಎ) ದ್ವಿಗು ಸಮಾಸ  ಬಿ) ಕರ್ಮಧಾರೆಯ ಸಮಾಸ  ಸಿ) ಅಂಶಿ ಸಮಾಸ  ಡಿ) ದ್ವಂದ್ವ ಸಮಾಸ

ಉತ್ತರ:ಬಿ) ಕರ್ಮಧಾರೆಯ ಸಮಾಸ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ : 4 X 1 = 4**

41. ಅಬ್ಬೆ ; ತಾಯಿ :: ಹಳು ; ……………………

ಉತ್ತರ:ಕಾಡು.

42. ಮೊಟ್ಟಮೊದಲು ; ದ್ವಿರುಕ್ತಿ :: ಹುಳಹುಪ್ಪಡಿ ; ……………………

ಉತ್ತರ:ಜೋಡುನುಡಿ.

43. ಕನ್ನಡಿಗ ; ತದ್ಧಿತಾಂತ ನಾಮ :: ಭೀಮನಂತೆ ; ……………………

ಉತ್ತರ:ತದ್ಧಿತಾಂತಾವ್ಯಯ.

44. ವೀರ ; ಬೀರ :: ಭಕ್ತ ; ……………………

ಉತ್ತರ:ಭಕುತ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 3**



UUUUU -UUU UUU - UUUUU

ಸತಿಮಡಿಸಿ| ನೀಡುವೆಲೆ|ವಿಸಿದ ಕೈ| ಬಸವಳಿದು =20

UU -U U U UUU UU - U UUU -

ದತಿ ಚಿಂತೆ|ಯೊಳು ಮಱಿದ| ತನುಜೊಮ್ಮು|ವಿಡಿದ ಪು = 20

UU -U -U - - U - U U UUU - UU -UUU -

ರ್ಱತಿ ಭಾರ|ವಾಗಿ ಕ|ಣ್ಮುಚ್ಚಿತೋಳ್| ತೊಡೆಮಿಡುಕೆ| ಸುಯ್ಸೂಸೆ| ನಿದ್ರೆ ಕವಿ|ದು= 30+2

**ಛಂದಸ್ಸಿನ ಹೆಸರು** : <u>ವಾರ್ಧಕ ಷಟ್ಪದಿ.</u>

**ಅಥವಾ**

ನ ಜ ಭ ಜ ಜ ಜ ರ

UUU U-U - UU U - U U - U U - U -U -

ಕುರುಡ|ರುಮೆನ್ನ|ದೆಮ್ಮ ನು|ಡಿಗೇಳ್ ಮ|ಗನೇ ಬ|ಗೆ ತಂದೆ|ಗಿಂಬುಕೆಯ್

ನಜಭಜಜಂಜರಂ ಬಗೆಗೊಳ್ಳುತ್ತಿರೆ ಚಂಪಕಮಾಲೆ ಎಂದಪರ್.

**ಛಂದಸ್ಸಿನ ಹೆಸರು** : <u>ಚಂಪಕಮಾಲಾವೃತ್ತ.</u>

VIJAYAPUR DISTRICT KANNADA SUBJECT FORUM

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಿಸಿ : 1 X 3 = 3**

46. "ನುಡಿದರೆ ಮುತ್ತಿನ ಹಾರದಂತಿರಬೇಕು"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ನುಡಿಯುವಿಕೆ.

**ಉಪಮಾನ** : ಮುತ್ತಿನ ಹಾರ.

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ** : ಇರುವುದು.

**ಸಮನ್ವಯ** : ಇಲ್ಲಿ ಉಪಮೇಯವಾದ ನುಡಿಯುವಿಕೆಯು ಉಪಮಾನವಾದ ಮುತ್ತಿನ ಹಾರಕ್ಕೆ ಹೋಲಿಸಲಾಗಿದ್ದರಿಂದ ಇದು ಉಪಮಾ ಅಲಂಕಾರ.

**ಅಥವಾ**

"ಒಡಲಬೇಗೆಯ ಬೆಂಕಿಯುರಿ ನಿನ್ನನರಿಯದೆ ಪೇಳು ವಿಶ್ವಾಮಿತ್ರ"

**ಅಲಂಕಾರದ ಹೆಸರು** : ರೂಪಕ ಅಲಂಕಾರ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ

ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕ ಅಲಂಕಾರ.



**ಉಪಮೇಯ** : ಒಡಲಬೇಗೆ.

**ಉಪಮಾನ** : ಬೆಂಕಿಯುರಿ.

**ಸಮನ್ವಯ** : ಇಲ್ಲಿ ಉಪಮೇಯವಾದ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ಹೋಲಿಸಲಾಗಿದ್ದರಿಂದ ಇದು ರೂಪಕ ಅಲಂಕಾರ.

## ಭಾಗ - 'ಸಿ'

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : 1X3 = 3**

- ತಾಳಿದವನು ಬಾಳಿಯಾನು.
- ದೇಶ ಸುತ್ತು ಇಲ್ಲವೇ ಕೋಶ ಓದು.
- ಕೈ ಕೆಸರಾದರೆ ಬಾಯಿ ಮೊಸರು.

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ ______ ________________ಎಂಬ ಗಾದೆ ಪ್ರಸಿದ್ಧವಾಗಿದೆ.

----------------------------------------------

VIJAYAPUR DISTRICT KANNADA SUBJECT FORUM

----------------------------------------------

----------------------------------------------

----------------------------------------------

**48.** ನಿಮ್ಮನ್ನು ಮುದ್ದೇಬಿಹಾಳದ ರಾಮನಗರ ಬಡಾವಣೆ ಬಸವರಾಜ / ರತ್ನಾ ಎಂದು ಭಾವಿಸಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಿದ ವರದಿಯನ್ನು ಪ್ರಕಟಿಸುವಂತೆ ಕೋರಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.. **1 X 5 = 5**

**ಅಥವಾ**

ನಿಮ್ಮನ್ನು ಬೆಂಗಳೂರಿನ ನೂತನ ಪ್ರೌಢ ಶಾಲೆಯ ಹೇಮಂತ / ಕಾವ್ಯ ಎಂದು ಭಾವಿಸಿ, ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಅನುಮತಿ ಹಾಗೂ 1000 ರೂಪಾಯಿಗಳನ್ನು ಕಳುಹಿಸಿ ಕೊಡುವಂತೆ ಕೋರಿ ವಿಜಯಪುರಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ.

**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------



ಇವರಿಗೆ,

-----------------

-----------------

-----------------

ಮಾನ್ಯರೆ,

ವಿಷಯ : ------------------------------

------------------------------

--------------------------------------------

--------------------------------------------

--------------------------------------------

--------------------------------------------

------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ---------- ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------

VIJAYAPUR DISTRICT KANNADA SUBJECT FORUM

**2. ಮುಕ್ತಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ದಿನಾಂಕ. ----------------

(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

-----------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)



ಮುಖ್ಯ ವಿಷಯವೆನೆಂದರೆ ---------------------------

-----------------------------------------------

-----------------------------------------------

-----------------------------------------------

-----------------------------------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,
-------------------------
-------------------------
-------------------------

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ .** **1 X 5 = 5**

- ಮಕ್ಕಳ ಹಕ್ಕು ಕಾಯ್ದೆ.
- ಸ್ವಚ್ಛತಾ ಆಂದೋಲನ
- ಮಹಿಳೆಯರ ರಕ್ಷಣೆ

**ಪೀಠಿಕೆ** : ______________________________

______________________________

______________________________

VIJAYAPUR DISTRICT KANNADA SUBJECT FORUM

**ವಿವರಣೆ** : ______________________________

______________________________

______________________________

______________________________

______________________________

______________________________

ಉಪಸಂಹಾರ :

*****************



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ವಿಷಯ : ಪ್ರಥಮ ಭಾಷೆ ಕನ್ನಡ.

**2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 6.**

| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
|---|---|---|---|---|---|---|---|---|---|---|---|---|---|---|---|
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಗದ್ಯಭಾಗ** | | | | | | | | | | | | | | |
| 01 | ಶಬರಿ. | | | | | | | | | | 4(1) | | | **4** | **1** |
| 02 | ಅ. ಗೊರೂರು. | | 1(1) | | | | | | | 3(1) | | | | **4** | **2** |
| 03 | ಜೀವನ ದೃಷ್ಟಿ. | | | | | | 3(1) | | | | | | | **3** | **1** |
| 04 | ಧರ್ಮ ಸಮದೃಷ್ಟಿ. | | 1(1) | | | 2(1) | | | | | | | | **3** | **2** |
| 05 | ಭಾ.ಶಿ.ಎಂ. ವಿ. | | 1(1) | | | 2(1) | | | | | | | | **3** | **2** |
| 06 | ಎದೆಗೆ ಬಿದ್ದ ಅಕ್ಷರ. | | 1(1) | | | 2(1) | | | | | | | | **3** | **2** |
| 07 | ವೃಕ್ಷಸಾಕ್ಷಿ. | | | | | | | | | 3(1) | | | | **3** | **1** |
| 08 | ವ್ಯಾಘ್ರಗೀತೆ. | | 1(1) | | | 2(1) | | | | | | | | **3** | **2** |
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗೇಳ್. | | 1(1) | | | | 3(1) | | | | | | | **4** | **2** |
| 02 | ಪ.ಹಾ. ನೋಡಿದಿರಾ. | | | 4(1) | | | | | | | | | | **4** | **1** |
| 03 | ಹಲಗಲಿ ಬೇಡರು. | | 1(1) | | | 2(1) | | | | | | | | **3** | **2** |

VIJAYAPUR DISTRICT KANNADA SUBJECT FORUM

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 04 | ವಚನ ಸೌರಭ. | | | | | | | | | 3(1) | | | | **3** | **1** |
| 05 | ಸಂಕಲ್ಪಗೀತೆ. | | | | | | | | | | | | 4(1) | **4** | **1** |
| 06 | ಕೌ. ಕೊಂ. ನೀನು. | | | | | | | | | | 4(1) | | | **4** | **1** |
| 07 | ವೀರಲವ. | | | | | | | | | 3(1) | | | | **3** | **1** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |



| **ಕ್ರ. ಸಂ.** | **ಪಾಠದ ಹೆಸರು** | **ಸ್ಮರಣೆ** | | | **ಗ್ರಹಿಕೆ** | | | | **ಅಭಿವ್ಯಕ್ತಿ** | | | | **ಪ್ರಶಂಸೆ** | **ಅಂಕಗಳು** | **ಪ್ರಶ್ನೆಗಳ ಸಂ.** |
|---|---|---|---|---|---|---|---|---|---|---|---|---|---|---|---|
| | | **ವ** | **ಕಿ** | **ದೀ** | **ವ** | **ಕಿ** | **ದೀ** | **ದೀ** | **ಕಿ** | **ದೀ** | **ದೀ** | **ದೀ** | **ದೀ** | | |
| | | **ನಿ** | **ಉ** | **ಉ** | **ನಿ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | 2(1) | | | | | | | | **2** | **1** |
| 02 | ನಾಮಫಲಕ. | | | | | | | | 2(1) | | | | | **2** | **1** |
| 03 | ಉದಾತ್ತ ಚಿಂತನೆಗಳು | | | | | | | | 2(1) | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದ ಒಗಟುಗಳು | | | | | 2(1) | | | | | | | | **2** | **1** |
| | **ಪ.ಪೋ.ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

VIJAYAPUR DISTRICT KANNADA SUBJECT FORUM

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಪ್ರಶ್ನಾನುಸಾರ ವಿಶ್ಲೇಷಣೆ - 6

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.6 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.6 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.6 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.6 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.6 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3.5 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3.5 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 17 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |

Vijayapur District Kannada Subject Forum

| | | | | | | |
|---|---|---|---|---|---|---|
| 18 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 3.5 ನಿಮಿಷ |
| 19 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3.5 ನಿಮಿಷ |
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4.4 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 4.4 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸಾಧಾರಣ | 4.4 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 4.4 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 4.4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸಾಧಾರಣ | 4.4 ನಿಮಿಷ |



| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಸುಲಭ | 5 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಸಾಧಾರಣ | 5 ನಿಮಿಷ |
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 5 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಕಠಿಣ | 5 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪರಿತ ಗದ್ಯ | 4 | ಸಾಧಾರಣ | 5 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.7 ನಿಮಿಷ |
| 41 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 42 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 43 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಕಠಿಣ | 2 ನಿಮಿಷ |

Vijayapur District Kannada Subject Forum

| | | | | | | |
|---|---|---|---|---|---|---|
| 44 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಸಾಧಾರಣ | 4.6 ನಿಮಿಷ |
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಕಠಿಣ | 5 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸಾಧಾರಣ | 4 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಸಾಧಾರಣ | 10 ನಿಮಿಷ |

113

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 6.

## ವಿಷಯ : ಪ್ರಥಮ ಭಾಷೆ ಕನ್ನಡ

### ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 9 X 1 = 9**

1. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಂತ್ರಜ್ಞಾನದ ಬಗ್ಗೆ ತಿಳಿದುಕೊಂಡಿರುವ ಅಂಶಗಳು ಯಾವವು?

   ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಂತ್ರಜ್ಞಾನದ ಬಗ್ಗೆ ತಿಳಿದುಕೊಂಡಿರುವ ಅಂಶಗಳೆಂದರೆ ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಇತ್ಯಾದಿ.

2. ಬುಕ್ಕರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?

   ಬುಕ್ಕರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಅವನು ರಾಜದ್ರೋಹಿ ಎನಿಸುವನು.

3. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

   ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು.

4. ಅಶೋಕ ಪೈ ಅವರ ವೃತ್ತಿ ಯಾವುದು?

   ಅಶೋಕ ಪೈ ಅವರು ಮನೋವೈದ್ಯ ವೃತ್ತಿಯಲ್ಲಿದ್ದರು.

VIJAYAPUR DISTRICT KANNADA SUBJECT FORUM

5. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

   ಖಿರ್ದಿ ಪುಸ್ತಕ ಶಾನುಭೋಗರ ಬ್ರಹ್ಮಾಸ್ತ್ರವಾಗಿತ್ತು.

6. ಘಟ ಸಂಭೂತ ಎಂದರೆ ಯಾರು?

   ಘಟ ಸಂಭೂತ ಎಂದರೆ ದ್ರೋಣ.

7. ಹಲಗಲಿ ಗ್ರಾಮ ಎಲ್ಲಿದೆ?

ಹಲಗಲಿ ಗ್ರಾಮ ಇಂದಿನ ಬಾಗಲಕೋಟ ಜಿಲ್ಲೆಯ ಮುದೋಳ ಸಂಸ್ಥಾನದಲ್ಲಿದೆ.

8. ದು. ಸರಸ್ವತಿಯವರ ಅಭಿಪ್ರಾಯದಂತೆ ಮಣ್ಣಿನ ಮಾಲೀಕ ಯಾರು?

ದು. ಸರಸ್ವತಿಯವರ ಅಭಿಪ್ರಾಯದಂತೆ ಮಣ್ಣಿನ ಮಾಲೀಕ ಮಾನವ.

9. ಸು. ರಂ. ಎಕ್ಕುಂಡಿಯವರು ಯಾವುದನ್ನು ತೊರೆದು ಬಾಳಬೇಕೆಂದಿದ್ದಾರೆ?

ಸು. ರಂ. ಎಕ್ಕುಂಡಿಯವರು ವ್ಯಾಮೋಹವನ್ನು ತೊರೆದು ಬಾಳಬೇಕೆಂದಿದ್ದಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಜೈನ ಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ



ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ಸಂತವಿಟ್ಟು, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜೀನಾಲಯಗಳಿಗೆ ಸುಣ್ಣ ಬಳಿಸುವುದು. ಹೀಗೆ ಜೈನ ಧರ್ಮದ ಸುಧಾರಣೆಗಾಗಿ ಹಲವಾರು ಕ್ರಮ ಕೈಗೊಂಡನು.

11. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

12. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?

ದೇವನೂರು ಮಹಾದೇವ ಅವರು ಪರಮಹಂಸರ ವ್ಯಕ್ತಿತ್ವದ ಬಗ್ಗೆ "ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು" ಎಂದು ಹೇಳಿದ್ದಾರೆ.

VIJAYAPUR DISTRICT KANNADA SUBJECT FORUM

13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

ಭರತಖಂಡದ ಹುಲಿಗಳು ಯಾರನ್ನಯಾಗಲಿ ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಏಕೆಂದರೆ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಶತ್ರುಗಳಾದರೂ ಸರಿ ಮುಂದಿನಿಂದ ಮಾತ್ರ ದಾಳಿ ಮಡುತ್ತವೆ. ತಮ್ಮ

ಮುತ್ತಜ್ಜನ ತ್ಯಾಗವನ್ನು ನೆನಪಿಸಿಕೊಂಡ ಹುಲಿಯು ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

14. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಒಂದು ಘಟನೆಯನ್ನು ಆಧರಿಸಿ ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

15. ಇಂದುಮತಿ ಲಮಾಣಿಯವರ 'ನನ್ನಾಸೆ' ಕವನದಲ್ಲಿನ ಆಸೆಗಳೇನು?

'ನನ್ನಾಸೆ' ಕವನದಲ್ಲಿ ಇಂದುಮತಿ ಲಮಾಣಿಯವರು ಬೆಳಕು ನೀಡುವ ಬತ್ತಿಯಾಗಬೇಕು, ಮರವಾಗಿ ಬೇಳೆದು ಪುಣ್ಯವಂತರಿಗೆ ನೆರಳಾಗಬೇಕು, ಚಿಮ್ಮುವ ಚಿಲುಮೆಯಾಗಿ ದಾಹಗೊಂಡವರ ತನುವ ತಣಿಸುವಂತಾಗಬೇಕು. ಅಳುವ ಕಂದನ ನಗಿಸಲು ಅಮ್ಮನ ಕಂಠದ ಜೋಗುಳವಾಗಬೇಕು. ಅಜ್ಞಾನತೆಯನ್ನು ತೊಲಗಿಸಲು ಸರಸ್ವತಿಯ ಕೈಯಲ್ಲಿರುವ ಗ್ರಂಥವಾಗಬೇಕು, ದೀನರ ಊರುಗೋಲಾಗಬೇಕು. ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯವಾಗಬೇಕು ಎಂದು ಆಸೆ ಪಟ್ಟಿದ್ದಾರೆ.



16. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಹೆಚ್. ನರಸಿಂಹಯ್ಯರವರು ವಿವರಿಸಿದ್ದಾರೆ?

ವಿಜ್ಞಾನ ಮತ್ತದರ ಬಳಕೆ ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನ ಮತ್ತು ಶೋಷಣೆಗಳ ನಾಶ ಸಾಧ್ಯವಾಗುತ್ತದೆ. ಅದು ಪ್ರಗತಿವಿರೋಧಿ ಸಿದ್ಧಾಂತಗಳನ್ನೂ ಸ್ವಹಿತಾಸಕ್ತಿಯನ್ನೂ ದೂರಮಾಡಬಲ್ಲದು. ವಿಜ್ಞಾನಿಗಳು ವಿಜ್ಞಾನದಲ್ಲಿ ಜೀವಂತ ನಂಬಿಕೆ ಹೊಂದಬೇಕು. ಅಂತೆಯೇ ತರ್ಕಬದ್ಧರಾಗಿ ಧೈರ್ಯದಿಂದ ವರ್ತಿಸಬೇಕು. ಆಗ ಸಮಾಜ ಸುಧಾರಣೆ ಸಾಧ್ಯವೆಂದು ಎಚ್, ನರಸಿಂಹಯ್ಯ ಹೇಳಿದ್ದಾರೆ.

17. ಲೇಖಕಿ ಆರ್ ನಿರ್ಮಲ ಅವರು ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ ಎಂದಿದ್ದಾರೆ?

VIJAYAPUR DISTRICT KANNADA SUBJECT FORUM

ಲೇಖಕಿ ಆರ್ ನಿರ್ಮಲ ಅವರು ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ತನ್ನ ಕೃತಿಗಳ ಮಹತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು. ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು. ಈ ಅಂಶಗಳು ಪಂಪ ತನ್ನ ಹೆಸರನ್ನು ಕೆತ್ತಿಸಿಕೊಳ್ಳದಿರಲು ಕಾರಣ ಎಂದಿದ್ದಾರೆ. .

18. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ ಇದರಿಂದ ಶಾಸನಗಳನ್ನು ರಚಿಸುವುದರಲ್ಲಿ, ಸರ್ಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ. ಅಲ್ಲದೆ ಜನರಿಗೆ ಜೀವನ, ಸ್ವಾತಂತ್ರ್ಯ

ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

19. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕಾರಿಯಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. “ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ"

ಈ ವಾಕ್ಯವನ್ನು "ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ" ಅವರು ರಚಿಸಿರುವ "ಅಮೆರಿಕಾದಲ್ಲಿ ಗೊರೂರು" ಎಂಬ ಕೃತಿಯಿಂದಾಯ್ದ "ಅಮೆರಿಕಾದಲ್ಲಿ ಗೊರೂರು" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರು ಅಮೆರಿಕದಲ್ಲಿಯ ಶಾಲೆಯಲ್ಲಿ



ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ "ನೀವು ಗಾಂಧೀಜಿಯವರ ಹೆಸರು ಕೇಳಿರುವಿರಾ?” ಎಂದು ಪ್ರಶ್ನಿಸಿದ ಸಂದರ್ಭದಲ್ಲಿ ಅಲ್ಲಿಯ ವಿದ್ಯಾರ್ಥಿಯೊಬ್ಬನು ಈ ಮೇಲಿನಂತೆ ಹೇಳುತ್ತಾನೆ.

ಅಮೆರಿಕದ ವಿದ್ಯಾರ್ಥಿಗಳಿಗೆ ಗಾಂಧೀಜಿಯವರ ಪರಿಚಯವಿತ್ತು ಎಂಬುದು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

21. “ಈತನ ಮಾತು ಅಶ್ರುತಪೂರ್ವಂ"

ಈ ವಾಕ್ಯವನ್ನು "ದುರ್ಗಸಿಂಹ" ಅವರು ರಚಿಸಿರುವ "ಕರ್ಣಾಟಕ ಪಂಚತಂತ್ರಂ" ಎಂಬ ಕೃತಿಯಿಂದಾಯ್ದ "ವೃಕ್ಷಸಾಕ್ಷಿ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ದುಷ್ಟಬುದ್ಧಿಯು " ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾವ ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿದ್ದ ಆಲದ ಮರವೇ ಸಾಕ್ಷಿ" ಎಂದ ಸಂದರ್ಭದಲ್ಲಿ ಧರ್ಮಾಧಿಕರಣರು ಆಶ್ಚರ್ಯಗೊಂಡು ಈ ಮಾತನ್ನು ಹೇಳುತ್ತಾರೆ.

ವೃಕ್ಷವು ಸಾಕ್ಷಿಯನ್ನು ಹೇಳುತ್ತದೆಂಬುದನ್ನು ಕೇಳಿದ ಧರ್ಮಾಧಿಕರಣರು ಇಂಥಹ ವಿಷಯ ಹಿಂದೆ ಎಲ್ಲೂ ಕೇಳಿಲ್ಲವೆಂದು ಹೇಳುವುದನ್ನು ಸ್ವಾರಸ್ಯಪೂರ್ಣವಾಗಿ ಈ ವಾಕ್ಯದಲ್ಲಿ ವರ್ಣಿಸಲಾಗಿದೆ.

22. “ಹಲವು ಕೊಂಬೆಗೆ ಹಾಯುತಲಿದೆ"

VIJAYAPUR DISTRICT KANNADA SUBJECT FORUM

ಈ ವಾಕ್ಯವನ್ನು "ಶ್ರೀ ಸಂ. ಶಿ. ಭೂಸನೂರಮಠ" ಅವರು ಸಂಪಾದಿಸಿರುವ "ವಚನ ಸಾಹಿತ್ಯ ಸಂಗ್ರಹ" ಎಂಬ ಕೃತಿಯಿಂದಾಯ್ದ "ವಚನ ಸೌರಭ" ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಕೋತಿಯು ಮರ ಹತ್ತಿ ಕೊಂಬೆಯಿಂದ ಕೊಂಬೆಗೆ ಜೀಗಿಯುವಂತೆ ಚಂಚಲ ಮನಸ್ಸು ದೇವರ ಕಡೆಗೆ ತಿರುಗಲು ಸಾಧ್ಯವಾಗದು ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಬಸವಣ್ಣನವರು ಮಾನವನ ಮನಸ್ಸನ್ನು ಕೋತಿಯ ಚಲನವಲನಕ್ಕೆ ಹೋಲಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

23. “ಅರಸುಗಳ ವಾಜಿಯಂ ಬಿಡು"

ಈ ವಾಕ್ಯವನ್ನು "ಕವಿ ಲಕ್ಷ್ಮೀಶ" ನು ರಚಿಸಿರುವ "ಜೈಮಿನಿ ಭಾರತ" ಎಂಬ ಮಹಾ ಕಾವ್ಯದಿಂದ ಆಯ್ದ "ವೀರಲವ" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ರಾಮನ ಯಜ್ಞಾಶ್ವವನ್ನು ವೀರಲವನು ತನ್ನ ಉತ್ತರೀಯದಿಂದ ಬಾಳೆಗಿಡಕ್ಕೆ ಕಟ್ಟಿ ಹಾಕಿರುವುದನ್ನು ಕಂಡು ಮುನಿಕುಮಾರರು ಹೆದರಿ ಕುದುರೆಯನ್ನು ಬೀಡು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುವರು.
.

ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣಾಗಿ ವರ್ಣಿಸಲಾಗಿದೆ.

117

**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ /ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 X 3 = 6**

24. ವಿ. ಕೃ. ಗೋಕಾಕ್

ವಿನಾಯಕ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗರುವ ವಿನಾಯಕ ಕೃಷ್ಣರಾವ್ ಗೋಕಾಕ್ ಅವರು ಕ್ರಿ. ಶ. 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಶ್ರೀಯುತರು ಜೀವನಪಾಠಗಳು, ಭಾರತ ಸಿಂಧೂರಶ್ಮಿ, ದ್ಯಾವ ಪೃಥಿವೀ, ಸಮುದ್ರಗೀತೆಗಳು ಮೋದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು ದೊರೆತಿವೆ.

25. ಆದಿ ಕವಿ ಪಂಪ

ಆದಿಕವಿ ಪಂಪನ ಕಾಲ ಕ್ರಿ.ಶ. ಸುಮಾರು 941. ಈತನ ಸ್ಥಳ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರ. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಈತ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ರತ್ನತ್ರಯರಲ್ಲಿ ಒಬ್ಬನಾದ

VIJAYAPUR DISTRICT KANNADA SUBJECT FORUM

ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳಿವೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :** **1 X 4 = 4**

26. ನೀಲಮೇಘಮಂಡಲ - ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ - ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 X 4 = 4**



27. ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಜಿ.ಎಸ್. ಶಿವರುದ್ರಪ್ಪನವರು ಈ ಪದ್ಯದಲ್ಲಿ ಮಲಿನವಾಗಿರುವ ಮನಸ್ಸುಗಳು ಸ್ವಚ್ಛವಾಗಿ, ಗುಣಮೌಲ್ಯಗಳು ಹೃದಯದಲ್ಲಿ ತುಂಬಿಕೊಳ್ಳುವಂತಹ ಸಂದೇಶವನ್ನು ಪ್ರಕೃತಿಯ ನಿದರ್ಶನವನ್ನು ನೀಡುತ್ತ ವಿವರಿಸಿದ್ದಾರೆ.

ಆಧುನಿಕ ಮಾನವನ ಹಲವಾರು ಸ್ವಾರ್ಥದ ಕೃತ್ಯಗಳಿಂದಾಗಿ ಭೂಮಿಯ ಮೇಲಿನ ನದಿಜಲಗಳು ಮಲೀನವಾಗಿವೆ. ಅದು ಮುಂಗಾರಿನ ಮಳೆಯಿಂದ ಸ್ವಚ್ಛವಾಗುವಂತೆ, ನಮ್ಮ ಮಲೀನವಾಗಿರುವ ಮನಸ್ಸುಗಳು ಒಳ್ಳೆಯ ಗುಣಮೌಲ್ಯಗಳಿಂದ ತುಂಬಿಕೊಳ್ಳಲಿ, ಬರುಡವಾಗಿರುವ ಕಾಡುಮೇಡುಗಳು ವಸಂತ ಕಾಲದಲ್ಲಿ

VIJAYAPUR DISTRICT KANNADA SUBJECT FORUM

ಚಿಗುರೊಡೆಯುವಂತೆ ನಮ್ಮ ಮನಸ್ಸುಗಳು ಸದಾ ಹಸುರಾಗಿರಲಿ ಎಂಬ ಸಂದೇಶವನ್ನು ನೀಡಿದ್ದಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

ನಂಬಿ ಕೆಟ್ಟವರಿಲ್ಲ ಎಂಬುದು ದಾಸರ ವಾಣಿಯಾಗಿದೆ. ಭಾರತೀಯರ ಪುರಾಣ ಪುಣ್ಯ ಕಥೆಗಳಲ್ಲಿ, ಮಹಾಕಾವ್ಯಗಳಲ್ಲಿ ಈ ಮಾತಿನ ನಿದರ್ಶನಗಳು ಕಂಡು ಬರುತ್ತವೆ. ಅದರಂತೆ ಶಬರಿಯೂ ಕೂಡ. ಶಬರಿ ತನ್ನ ಭಕ್ತಿ, ಭಾವ, ಪ್ರೀತಿಯಿಂದ ರಾಮನ ಬರುವಿಕೆಗಾಗಿ ಹಗಲಿರುಳು ಕಾಯುವಳು. ತಮ್ಮ ಗುರುಗಳಾದ ಮತಂಗ ಋಷಿಗಳು "ರಾಮ ಲಕ್ಷ್ಮಣರು ಈ ಆಶ್ರಮಕ್ಕೆ ಬಂದೆ ಬರುತ್ತಾರೆ. ನಿನ್ನ ಇಷ್ಟಾರ್ಥ ನೆರವೇರುತ್ತದೆ". ಎಂದಿದ್ದರು. ಅವರ ಮಾತನ್ನು ನಂಬಿಕೊಂಡಿದ್ದ ಶಬರಿ ಕಾದು ಕಾದು ಕಾತರಿಸಿ,ಮುಪ್ಪಾಗಿ ಭಕ್ತಿಯೇ ರೂಪಗೊಂಡಂತಾದಳು. ರಾಮ ಬಂದರೆ ಅವನನ್ನು ಸತ್ಕರಿಸಲು ಪ್ರತಿನಿತ್ಯ ಕಾಡಿಗೆ ಹೋಗಿ ಹೂ ಹಣ್ಣು ತಳಿರುಗಳನ್ನು ತಂದು ಅಲಂಕರಿಸಿ ರಾಮನ ಆತಿಥ್ಯಕ್ಕೆ ಸಿದ್ಧಪಡಿಸುತ್ತಿದ್ದಳು. ಮತ್ತೆ ಮಾರನೆಯ ದಿವಸ ಇವುಗಳನ್ನು ತೆಗೆದು ಹೊಸದಾದ ಹೂ ಹಣ್ಣು ತಳಿರುಗಳನ್ನು ತಂದು ಅಲಂಕರಿಸುತ್ತಿದ್ದಳು. ನಂಬಿದ ರಾಮ ಬಂದೇ ಬರುವನೆಂದು ಹಲವಾರು ದಿನಗಳು ಕಾದಳು ಕೊನೆಗೆ ಆತನ ದರ್ಶನ ಮಾಡುವ ಕಾಲ ಬಂದಿತು. ಕುಟೀರಕ್ಕೆ ರಾಮಲಕ್ಷ್ಮಣರ ಆಗಮವಾದಾಗ ಶಬರಿ ಅತೀವ ಸೋತೋಷದಿಂದ ಅವರ ಸೇವೆಗೈದು ಮುಕ್ತಿಯನ್ನು ಹೊಂದಿದಳು. ಹಾಗಾಗಿ ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

**ಅಥವಾ**

ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?



ಶಬರಿಯು ತನ್ನ ಪರ್ಣಕುಟೀರದ ಬಾಗಿಲಿನಲ್ಲಿ ರಾಮಲಕ್ಷ್ಮಣರನ್ನು ಕಂಡಾಗ ಆಶ್ಚರ್ಯಚಕಿತಳಾಗಿ ನೀನು ರಾಮನೇ? ಮಹಾಪುರುಷನೇ? ಎಂದು ಪ್ರಶ್ನಿಸಿ, ಆತನೇ ರಾಮನೆಂದು ತಿಳಿದಾಗ ಅತ್ಯಂತ ಸಂತೋಷಗೊಳ್ಳುವಳು. ಅವಳ ಸಡಗರ ಹಾಗೂ ರಾಮಲಕ್ಷ್ಮಣರನ್ನು ಸತ್ಕರಿಸುವ ವಿಧಾನವನ್ನು ಮೇಳದವರ ಹಾಡಿನಲ್ಲಿ ಈ ರೀತಿ ವರ್ಣಿಸಲ್ಪಟ್ಟಿದೆ. ರಾಮನ ಹತ್ತಿರ ಬಂದು ಪಾದ ಮುಟ್ಟಿ ನಮಸ್ಕರಿಸಿ, ಆತನ ಕೈಯನ್ನು ಕಣ್ಣಿಗೊತ್ತಿಕೊಂಡು, ಆನಂದದ ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು. ಅಯ್ಯೋ ಏನು ಸಿದ್ಧವಾಗಿಲ್ಲವೇ ನಿನ್ನೆಯಷ್ಟು ಚನ್ನಾಗಿಲ್ಲವೆ, ಎಂದು ಬಗೆ ಬಗೆಯ ಕಂಪು ಸೂಸುವ ಹೂಗಳ ಮಾಲೆಯನ್ನು ಕೊರಳಿಗೆ ಹಾಕಿ, ಇದರಷ್ಟು ರುಚಿಯಾದ ಹಣ್ಣುಗಳು ಬೇರೆ ಎಲ್ಲಿಯೂ ಇಲ್ಲವೆಂದು ಹಣ್ಣುಗಳನ್ನು ತನ್ನ ಕೈಯಾರೆ ನೀಡಿ, ಉಪಚರಿಸಿದಳು. ಅವಳ ಪೂಜೆಯಿಂದ ಪ್ರಸನ್ನರಾದ ರಾಮ ಲಕ್ಷ್ಮಣರು ಧನ್ಯತಾ ಭಾವದಿಂದ ಮಂದಹಾಸ ಬೀರಿದರು. ಅದನ್ನು ಕಂಡು ಧನ್ಯನಾದೆಳೆಂದು ಸಂತಸ

ವ್ಯಕ್ತಪಡಿಸಿದಳು. ಹೀಗೆ ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

29. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳಾವುವು?

VIJAYAPUR DISTRICT KANNADA SUBJECT FORUM

ಪಾಂಡವರನ್ನು ರಕ್ಷಿಸಬೇಕೆಂಬ ಮಹದಾಶೆಯೊಂದಿಗೆ ಕೃಷ್ಣ ಕೌರವರ ಸೇನೆಯಲ್ಲಿದ್ದ ಕರ್ಣನ್ನು ಒಲಿಸಿಕೊಳ್ಳಲು ಒಂದು ಸಂದರ್ಭವನ್ನು ಸೃಷ್ಟಿಸುತ್ತಾನೆ. ಕರ್ಣನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು "ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನೆ ನಿಜವಾಗಿ ಈ ಭೂಮಿಯ ಅಧಪತಿ. ಅದರ ಅರಿವು ನಿನಗಿಲ್ಲ. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ನೀನೆ ಮೊದಲಿಗ. ನಂತರ ಧರ್ಮರಾಯ. ಮೂರನೆಯವನು ಭೀಮ. ನಾಲ್ಕನೆಯ ಮಂತ್ರದಿಂದ ಜನಿಸಿದವ ಅರ್ಜುನ. ಐದನೆಯ ಮಂತ್ರದಿಂದ ಮಾದ್ರಿಯ ಹೋಟ್ಟೆಯಲ್ಲಿ ಜನಿಸಿದವರೇ ನಕುಲ ಸಹದೇವರು" ಎಂದು ಆತನ ಹುಟ್ಟಿನ ರಹಸ್ಯವನ್ನು ತಿಳಿಸುತ್ತ "ಕರ್ಣ ಐದು ಜನ ಪಾಂಡವರಿಗಿಂತ ನೀನು ಹಿರಿಯವನು. ನಿನಗೆ ಈ ವಿಚಾರವನ್ನು ತಿಳಿಸುವದಕ್ಕಾಗಿಯೇ ನಿನ್ನನ್ನು ಕರೆದುಕೊಂಡು ಬಂದಿರುವೆನು. ನೀನು ಪಾಂಡವರ ಕಡೆಗೆ ಬಂದರೆ ನಿನ್ನನ್ನು ಹಸ್ತಿನಾವತಿಗೆ ರಾಜನಾಗಿ ಮಾಡುವೆನು. ಪಾಂಡವ ಕೌರವರು ನಿನ್ನನ್ನು ಒಪ್ಪಿಕೊಳ್ಳುವರು. ನಿನಗೆ ಎರಡೂ ವಂಶದವರು ಮರು ಮಾತನಾಡದೆ ಸೇವೆಯನ್ನು ಮಾಡುವರು. ನಿನ್ನ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು ಎದುರಲ್ಲಿ ಮಾದ್ರ ಮಾಗದ ಯಾದವಾದಿಗಳು, ಅವರ ಮಧ್ಯದಲ್ಲಿ ನೀನು ರಾಜನಾಗಿ ರಾರಾಜಿಸುವೆ" ಎಂದು ಕರ್ಣನಿಗೆ ಶ್ರೀಕೃಷ್ಣನು ಆಮಿಷಗಳನ್ನು ಒಡ್ಡಿದನು.

**ಅಥವಾ**

ಪಾಂಡವರು ಸೋದರರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕುರಿತು ಬರೆಯಿರಿ.

ತನ್ನ ಒಡೆಯನ ಮೇಲೆ ಅಪಾರ ನಂಬಿಕೆಯಿಟ್ಟು ಪಾಂಡವರನ್ನು ಎದುರಿಸುವ ಭರದಲ್ಲಿದ್ದ ಕರ್ಣನಿಗೆ ಕೃಷ್ಣನು ಜನ್ಮ ರಹಸ್ಯವನ್ನು ತಿಳಿಸಿ, ಆಮಿಷಗಳನ್ನು ಒಡ್ಡಿದಾಗ ಕರ್ಣನ ಕೊರಳಸೆರೆ ಹಿಗ್ಗಿದವು. ಕಂಬನಿಯು ರಭಸದಿಂದ ಹರಿಯತೊಡಗಿದವು. ಅತ್ಯಂತ ದುಃಖತಪ್ತನಾದ ಕರ್ಣನು ಮನದಲ್ಲಿ



ನೊಂದುಕೊಂಡು ದುರ್ಯೋಧನನಿಗೆ ಕೇಡಾಯಿತು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ? ಎಂದು ಮನದಲ್ಲಿ ನೊಂದುಕೊಂಡನು. ಕೃಷ್ಣನನ್ನು ಕುರಿತು "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಭರದಲ್ಲಿದ್ದೆ. ಆದರೆ ನೀನು ನನ್ನ ಜನ್ಮರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ. ಆ ವೀರ ದುರ್ಯೋಧನನೇ ನನಗೆ ಒಡೆಯ. ಆತನ ಶತ್ರುಗಳು ನನಗೂ ಶತ್ರುಗಳು. ನಾಳಿನ ಭಾರತವು ಮಾರಿಗೌತಣವಾಗುವುದು. ಕೌರವನ ಉಪಕಾರ (ಋಣ) ತೀರಿಸಲು

VIJAYAPUR DISTRICT KANNADA SUBJECT FORUM

ಯುದ್ಧರಂಗದಲ್ಲಿ ಹೋರಾಡಿ ಅವನಿಗಾಗಿ ಶರೀರವನು ನೂಕುವೆನು ಆದರೆ ನಿನ್ನ ವೀರರೈವರನು ನೋಯಿಸೆನು ರಾಜೀವಸಖನ ಮೇಲಾಣೆ" ಎಂದನು. ಹೀಗೆ ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿ ಬದಲಾಯಿತು.

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು , ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 X 4 = 4 (2+2)**

ಭಗತ್‌ಸಿಂಗ 3 ವರ್ಷದ ಬಾಲಕನಾಗಿದ್ದಾಗ ಅವನ ತಂದೆ ತಮ್ಮ ಮಿತ್ರರೊಡನೆ ಸುತ್ತಾಡಲು ಹೊರಟರು. ಭಗತ್‌ಸಿಂಗ ಸಹ ಅವರೊಂದಿಗೆ ಹೊರಟರು. ಹಿರಿಯರು ಮಾತಾಡುತ್ತ ಮುಂದೆ ಮುಂದೆ ಹೋಗಿದ್ದರು. ಊರಿನಾಚೆ ಹೊಲಗದ್ದೆಗಳನ್ನು ದಾಟಿ ಹೋಗುತ್ತಿದ್ದ ಹಿರಿಯರಿಗೆ ಬಾಲಕನ ನೆನಪಾಗಿ ತಿರುಗಿ ನೋಡಿದರು. ಅವನು ಗದ್ದೆಯೊಂದರಲ್ಲಿ ಕುಳಿತು ಏನೋ ಮಾಡುತ್ತಿದ್ದುದು ಕಂಡು ಬಂದಿತು. ಕುತೂಹಲದಿಂದ ಅವನ ಬಳಿಗೆ ಬಂದು "ಏನು ಮಾಡುತ್ತಿದ್ದೀಯಾ?” ಎಂದು ಅವರು ಕೇಳಿದರು. ಆಗ ಬಾಲಕ ಭಗತ್‌ಸಿಂಗ "ಈ ಹೊಲದ ತುಂಬಾ ನಾನು ಬಂದೂಕುಗಳನ್ನು ಬೆಳೆಯಲು ಸಿದ್ಧಮಾಡುತ್ತಿದ್ದೇನೆ" ಎಂದು ಮುಗ್ಧವಾಗಿ ಉತ್ತರಿಸಿದನು. ಈ ಮಾತು ಹೇಳುವಾಗ ಅವನ ಕಣ್ಣಿನಲ್ಲಿ 'ನೆಡುವ ಬಂದೂಕುಗಳು ಹೊಲದ ತುಂಬಾ ಬೆಳೆಯಲಿವೆ' ಎಂಬ ಬಲವಾದ ನಂಬಿಕೆ ಕಾಣುತ್ತಿತ್ತು! ಬಂದೂಕುಗಳನ್ನು ಏಕೆ ಬೆಳೆಯುವೆ ಎಂದು ಪ್ರಶ್ನಿಸಿದ್ದಕ್ಕೆ "ಈ ಬಂದೂಕುಗಳಿಂದ ಆಂಗ್ಲರನ್ನು ನಮ್ಮ ದೇಶದಿಂದ ಹೊರಗೆ ಓಡಿಸುತ್ತೇನೆ" ಎಂದು ಉತ್ತರ ಕೊಟ್ಟರು! ಇದನ್ನು ಕೇಳುತ್ತಿದ್ದ ಹಿರಿಯರು ಈ ಬಾಲಕನ ದೇಶ ಭಕ್ತಿಯ ಬಗ್ಗೆ ಆಶ್ಚರ್ಯಚಕಿತರಾದರು.

**ಪ್ರಶ್ನೆಗಳು :**

1. ಹಿರಿಯರ ಜೊತೆ ಹೊರಗೆ ಹೊರಟ ಭಗತ್‌ಸಿಂಗ ಹಿಂದೆ ಉಳಿಯಲು ಕಾರಣವೇನು?

ಹಿರಿಯರ ಜೊತೆ ಹೊರಗೆ ಹೊರಟ ಭಗತ್‌ಸಿಂಗ ಹಿಂದೆ ಉಳಿಯಲು ಕಾರಣ ಗದ್ದೆಯೊಂದರಲ್ಲಿ ಕುಳಿತು ಏನೋ ಮಾಡುತ್ತಿದ್ದನು. ಅದನ್ನು ಹಿರಿಯರು ಪ್ರಶ್ನಿಸಿದಾಗ "ಈ ಹೊಲದ ತುಂಬಾ ನಾನು ಬಂದೂಕುಗಳನ್ನು ಬೆಳೆಯಲು ಸಿದ್ಧಮಾಡುತ್ತಿದ್ದೇನೆ. ಈ ಬಂದೂಕುಗಳಿಂದ ಆಂಗ್ಲರನ್ನು ನಮ್ಮ ದೇಶದಿಂದ ಹೊರಗೆ ಓಡಿಸುತ್ತೇನೆ" ಎಂದು ಉತ್ತರಿಸಿದನು.



2. ಹಿರಿಯರು ಭಗತ್‌ಸಿಂಗನ ದೇಶಭಕ್ತಿಯನ್ನು ಕಂಡು ಆಶ್ಚರ್ಯಚಕಿತರಾಗಲು ಕಾರಣವೇನು?

ಹಿರಿಯರು ಭಗತ್‌ಸಿಂಗ ಹಿಂದೆ ಉಳಿದಿರುವುದನ್ನ ಕಂಡು ಅವನನ್ನು ಪ್ರಶ್ನಿಸಿದರು. ಅದಕ್ಕೆ ಬಾಲಕ ಭಗತ್‌ಸಿಂಗ "ಈ ಹೊಲದ ತುಂಬಾ ನಾನು ಬಂದೂಕುಗಳನ್ನು ಬೆಳೆಯಲು ಸಿದ್ಧಮಾಡುತ್ತಿದ್ದೇನೆ. ಈ

ಬಂದೂಕುಗಳಿಂದ ಆಂಗ್ಲರನ್ನು ನಮ್ಮ ದೇಶದಿಂದ ಹೊರಗೆ ಓಡಿಸುತ್ತೇನೆ" ಎಂದು ಉತ್ತರಿಸಿದನು. ಈ ಮಾತನ್ನು ಕೇಳಿದ ಹಿರಿಯರು ಇತನ ದೇಶಭಕ್ತಿಯನ್ನು ಕಂಡು ಆಶ್ಚರ್ಯಚಕಿತರಾದರು.

## ಭಾಗ - 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ . ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ , ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ :** **10 X 1 = 10**

31. 'ನಿಜ' ಾಶ್ರಮ ಪದವು ಈ ಸಂಧಿಗೆ ಸೂಕ್ತ ಉದಾಹರಣೆ

ಎ) ಗುಣಸಂಧಿ ಬಿ) ಸವರ್ಣದೀರ್ಘ ಸಂಧಿ ಸಿ) ವೃದ್ಧಿ ಸಂಧಿ ಡಿ) ಯಣ್ ಸಂಧಿ

VIJAYAPUR DISTRICT KANNADA SUBJECT FORUM

ಉತ್ತರ:ಬಿ) ಸವರ್ಣದೀರ್ಘ ಸಂಧಿ

32. 'ಗಾಂಡೀವಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ಬಹುವ್ರೀಹಿ ಬಿ) ತತ್ಪುರುಷ ಸಿ) ದ್ವಂದ್ವ ಡಿ) ಕರ್ಮಧಾರೆಯ

ಉತ್ತರ: ಎ) ಬಹುವ್ರೀಹಿ

33. ಪಾರಿಭಾಷಿಕ / ಅನ್ಯದೇಶಿಯ ಪದಗಳನ್ನು ಬಳಸುವ ಲೇಖನ ಚಿಹ್ನೆ :

ಎ) ಅಲ್ಪವಿರಾಮ ಬಿ) ವಾಕ್ಯವೇಷ್ಟನ ಸಿ) ಪ್ರಶ್ನಾರ್ಥಕ ಡಿ)ಪೂರ್ಣವಿರಾಮ

ಉತ್ತರ:ಬಿ) ವಾಕ್ಯವೇಷ್ಟನ

34. 'ಪ' ವರ್ಗದ ಅನುನಾಸಿಕ ಅಕ್ಷರ :

ಎ) ಮ ಬಿ) ಣ ಸಿ) ನ ಡಿ) ಙ

ಉತ್ತರ: ಎ) ಮ

35. 'ಅಂಜಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :

ಎ) ತದ್ಧಿತಾಂತ ಭಾವನಾಮ ಬಿ) ಕೃದಂತಾವ್ಯಯ

ಸಿ) ಕೃದಂತ ಭಾವನಾಮ ಡಿ) ತದ್ಧಿತಾಂತಾವ್ಯಯ

ಉತ್ತರ:ಸಿ) ಕೃದಂತ ಭಾವನಾಮ

36. ಪಂಚಮಿ ವಿಭಕ್ತಿಯ ಹಳಗನ್ನಡದ ಪ್ರತ್ಯಯ ರೂಪವಿದು :

ಎ) ಅಮ್ ಬಿ) ಒಳ್ ಸಿ) ಅತ್ತಣಿಂ ಡಿ) ಇಂ



ಉತ್ತರ:ಸಿ) ಅತ್ತಣಿಂ

37. “ವಿಶ್ವೇಶ್ವರಯ್ಯನವರು ಶ್ರೀನಿವಾಸ ಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ ದಂಪತಿಗಳ ಎರಡನೆಯ ಮಗನಾಗಿ ಜನಿಸಿದರು" ಈ ವಾಕ್ಯದ ಪ್ರಕಾರವು :

ಎ) ಮಿಶ್ರ ವಾಕ್ಯ ಬಿ) ಸಾಮಾನ್ಯ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ವಿಶೇಷ ವಾಕ್ಯ

ಉತ್ತರ: ಸಿ) ಸಂಯೋಜಿತ ವಾಕ್ಯ.

38. ‘ರಾಮು' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ :

ಎ) ಅನ್ವರ್ಥಕ ನಾಮ ಬಿ) ರೂಢನಾಮ ಸಿ) ಅಂಕಿತನಾಮ ಡಿ) ಸರ್ವನಾಮ

ಉತ್ತರ:ಸಿ) ಅಂಕಿತನಾಮ

39. ‘ಇಸವಾಸ' ಪದದ ಗ್ರಾಂಥಿಕ ರೂಪವಿದು :

ಎ) ವಿಸವಾಸ ಬಿ) ವಿಸ್ವಾಸ ಸಿ) ವಿಶವಾಸ ಡಿ) ವಿಶ್ವಾಸ

ಉತ್ತರ:ಡಿ) ವಿಶ್ವಾಸ

40. ಹಸು ಹೆಜ್ಜೆ ಇಟ್ಟ ನೆಲದಲ್ಲಿ ಹೊನ್ನ <u>ಬೆಳೆಯಿತು.</u> ಗೆರೆ ಎಳೆದ ಪದದ ಸಂಭವನಾರ್ಥಕ ರೂಪ :

ಎ) ಬೆಳೆಯಲಿ ಬಿ) ಬೆಳೆದೀತು ಸಿ) ಬೆಳೆಯದು ಡಿ) ಬೆಳೆಯುತ್ತದೆ.

ಉತ್ತರ: ಬಿ) ಬೆಳೆದೀತು

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ : 4 X 1 = 4**

41. ಹೃದಯ ; ಎದೆ :: ವಂಧ್ಯಾ ; ……………………

ಉತ್ತರ:ಬಂಜೆ.

42. ಎವೆ ; ಕಣ್ಣುರೆಪ್ಪೆ :: ಮನ್ವಂತರ ; ……………………

ಉತ್ತರ:ಪರಿವರ್ತನೆಯ ಕಾಲ.

43. ಗಲೀಜು ; ಅರಬ್ಬಿ :: ಚೌಕಾಪಿ ; ……………………

ಉತ್ತರ:ಪರ್ಷಿಯನ್.

44. ಮನೆಮಠ ; ಜೋಡುನುಡಿ :: ಮೊಟ್ಟಮೊದಲು ; ……………………

ಉತ್ತರ:ದ್ವಿರುಕ್ತಿ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ , ಗಣ ವಿಭಾಗ ಮಾಡಿ , ಛಂದಸ್ಸಿನ ಹೆಸರನ್ನು ಬರೆಯಿರಿ : 1X3=3**

45. UUU -UU -U - UU

ಎಡದ| ಮೈಯಲಿ| ಕೌರ|ವೇಂದ್ರರ = 14



UUU UUUU - U UUUU

ಗಡಣ| ಬಲದಲಿ| ಪಾಂಡು| ತನಯರ = 14

UUU UUUU -U -UU - U -UU -

ಗಡಣ|ವಿದಿರಲಿ| ಮಾದ್ರ| ಮಾಗಧ| ಯಾದ|ವಾದಿಗ|ಳು = 21 + 2

**ಛಂದಸ್ಸಿನ ಹೆಸರು** : <u>ಭಾಮಿನಿ ಷಟ್ಪದಿ.</u>

**ಅಥವಾ**

-U - --U UUU UU - -U

ಉರ್ವಿಯೊಳ್| ಕೌಸಲ್ಯೆ| ಪಡೆದ ಕುವ|ರಂ ರಾಮ = 20

-U - -U - UU - U UUUUU

ನೊರ್ವನೇ| ವೀರನಾ|ತನ ಯಜ್ಞ|ತುರಗಮಿದು = 20

-UUU -U - - U - UUU - -U - UUU - -

ನಿರ್ವಹಿಸ|ಲಾರ್ಪರಾ|ರಾದೊಡಂ| ತಡೆಯಲೆಂ|ದಿರ್ದ ಲೇ|ಖನವನೋ|ದಿ=30+2

VIJAYAPUR DISTRICT KANNADA SUBJECT FORUM

**ಛಂದಸ್ಸಿನ ಹೆಸರು** : <u>ವಾರ್ಧಕ ಷಟ್ಪದಿ.</u>

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಿಸಿ : 1 X 3 = 3**

46. "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ನೀಚರಿಗೆ ಮಾಡಿದ ಉಪಕಾರ.

**ಉಪಮಾನ** : ಹಾವಿಗೆ ಹಾಲೆರೆಯುವುದು.

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ** : ಲುಪ್ತ.(ನಿರರ್ಥಕ)

**ಸಮನ್ವಯ** : ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರ

ಉಪಮಾನವಾದ  ಹಾವಿಗೆ ಹಾಲೆರೆಯುವುದಕ್ಕೆ ಹೋಲಿಸಲಾಗಿದೆ. ಇದರಲ್ಲಿ ಸಮಾನ ಧರ್ಮ ಇಲ್ಲದಿರುವುದರಿಂದ ಇದು ಲುಪ್ತೋಪಮಾಲಂಕಾರ.

**ಅಥವಾ**



"ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನೆಗನ್ನಡಿಯೋ ಎಂಬಂತೆ ಶೋಭಿಸಿತು.

**ಅಲಂಕಾರದ ಹೆಸರು** : ಉತ್ಪ್ರೇಕ್ಷ ಅಲಂಕಾರ.

**ಲಕ್ಷಣ** : ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು   ಉತ್ಪ್ರೇಕ್ಷ ಅಲಂಕಾರ.

**ಉಪಮೇಯ** : ಅಚ್ಛೋದ ಸರೋವರ.

**ಉಪಮಾನ** : ರನ್ನಗನ್ನಡಿ.

**ಸಮನ್ವಯ** : ಇಲ್ಲಿ ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉತ್ಪ್ರೇಕ್ಷ ಅಲಂಕಾರ.

VIJAYAPUR DISTRICT KANNADA SUBJECT FORUM

**ಭಾಗ - 'ಸಿ'**

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : 1X3 = 3**

- ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.
- ಬೆಳೆಯುವ ಸಿರಿ ಮೊಳಕೆಯಲ್ಲಿ
- ಕಾಯಕವೇ ಕೈಲಾಸ

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ _______ _______________ ಎಂಬ ಗಾದೆ ಪ್ರಸಿದ್ಧವಾಗಿದೆ.

-------------------------------------------

-----------------------------------------------

-----------------------------------------------

-----------------------------------------------

**48.** ನಿಮ್ಮನ್ನು ವಿಜಯಪುರದ ಸೇನಾ ನಗರ ಬಡಾವಣೆ ಶಶಿಧರ / ಮಧು ಎಂದು ಭಾವಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೊಂದು ಮನವಿ ಪತ್ರ ಬರೆಯಿರಿ.. **1 X 5 = 5**

**ಅಥವಾ**



ನಿಮ್ಮನ್ನು ಕಲಬುರ್ಗಿಯ ಸರಕಾರಿ ಪ್ರೌಢ ಶಾಲೆಯ ಮಹೇಶ / ರೂಪಾ ಎಂದು ಭಾವಿಸಿ, ವಿಜಯಪುರಲ್ಲಿರುವ ನಿಮ್ಮ ಸಹೋದರನಿಗೆ ಶಾಲಾ ವಾರ್ಷಿಕೋತ್ಸವದ ಆಚರಣೆಯನ್ನು ಕುರಿತು ಒಂದು ಪತ್ರ ಬರೆಯಿರಿ.

**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ಇವರಿಗೆ,

-----------------

-----------------

-----------------

ಮಾನ್ಯರೆ,

ವಿಷಯ : ------------------------------

------------------------------

VIJAYAPUR DISTRICT KANNADA SUBJECT FORUM

--------------------------------------------

--------------------------------------------

--------------------------------------------

--------------------------------------------

------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ----------          ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------



## 2. ವೈಯಕ್ತಿಕ ಪತ್ರದ ಹಂತಗಳು :

ಇಂದ,

-----------------
-----------------
-----------------

ದಿನಾಂಕ. ----------------

(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

-----------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)

ಮುಖ್ಯ ವಿಷಯವೆನೆಂದರೆ ----------------------------

------------------------------------------------

VIJAYAPUR DISTRICT KANNADA SUBJECT FORUM

------------------------------------------------

------------------------------------------------

-----------------------------------------------

------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,

-------------------------
-------------------------
-------------------------

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ .** **1 X 5 = 5**

- ಗಣಕ ಯಂತ್ರದ ಮಹತ್ವ
- ಪ್ರಕೃತಿ ವಿಕೋಪದಿಂದಾಗುವ ಹಾನಿ
- ಶಾಲೆಯಲ್ಲಿ ಹೆಣ್ಣುಮಕ್ಕಳ ಸಂರಕ್ಷಣೆ



**ಪೀಠಿಕೆ** : ______________________________

______________________________

______________________________

**ವಿವರಣೆ** : ______________________________

______________________________

______________________________

______________________________

______________________________

______________________________

______________________________

VIJAYAPUR DISTRICT KANNADA SUBJECT FORUM

______________________________

______________________________

______________________________

**ಉಪಸಂಹಾರ** : ______________________________

______________________________

______________________________

*****************

# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

# ವಿಷಯ : ಪ್ರಥಮ ಭಾಷೆ ಕನ್ನಡ.

| 2015 - 16 ನೆಯ ಸಾಲಿನ ನೀಲನಕ್ಷೆಯ ಮಾದರಿ - 7. | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಕ್ರ. ಸಂ. | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಅಂಕಗಳು | ಪ್ರಶ್ನೆಗಳ ಸಂ. |
| | | ವ | ಕಿ | ದೀ | ವ | ಕಿ | ದೀ | ದೀ | ಕಿ | ದೀ | ದೀ | ದೀ | ದೀ | | |
| | | ನಿ | ಉ | ಉ | ನಿ | ಉ | ಉ | ಉ | ಉ | ಉ | ಉ | ಉ | ಉ | | |
| | | | 1 | 2 | | 2 | 1 | 2 | 2 | 1 | 2 | 3 | 2 | | |
| | **ಗದ್ಯಭಾಗ** | | | | | | | | | | | | | | |
| 01 | ಶಬರಿ. | | | | | | | | | | 4(1) | | | **4** | **1** |
| 02 | ಅ. ಗೊರೂರು. | | 1(1) | | | | 3(1) | | | | | | | **4** | **2** |
| 03 | ಜೀವನ ದೃಷ್ಟಿ. | | 1(1) | | | 2(1) | | | | | | | | **3** | **2** |
| 04 | ಧರ್ಮ ಸಮದೃಷ್ಟಿ. | | | | | | | | | 3(1) | | | | **3** | **1** |
| 05 | ಭಾ.ಶಿ.ಎಂ. ವಿ. | | | | | | | | | 3(1) | | | | **3** | **1** |
| 06 | ಎದೆಗೆ ಬಿದ್ದ ಅಕ್ಷರ. | | 1(1) | | | 2(1) | | | | | | | | **3** | **2** |
| 07 | ವೃಕ್ಷ ಸಾಕ್ಷಿ. | | 1(1) | | | 2(1) | | | | | | | | **3** | **2** |
| 08 | ವ್ಯಾಘ್ರಗೀತೆ. | | 1(1) | | | 2(1) | | | | | | | | **3** | **2** |
| | **ಗದ್ಯ ಒಟ್ಟು** | | **1(5)** | | | **2(4)** | **3(1)** | | | **3(2)** | **4(1)** | | | **26** | **13** |
| | **ಪದ್ಯಭಾಗ** | | | | | | | | | | | | | | |
| 01 | ಎಮ್ಮನುಡಿಗೇಳ್. | | 1(1) | | | | 3(1) | | | | | | | **4** | **2** |
| 02 | ಹ.ಹಾ. ನೋಡಿದಿರಾ. | | | 4(1) | | | | | | | | | | **4** | **1** |
| 03 | ಹಲಗಲಿ ಬೇಡರು. | | | | | | | | | 3(1) | | | | **3** | **1** |
| 04 | ವಚನ ಸೌರಭ. | | | | | | | | | 3(1) | | | | **3** | **1** |
| 05 | ಸಂಕಲ್ಪಗೀತೆ. | | | | | | | | | | | | 4(1) | **4** | **1** |

VIJAYAPUR DISTRICT KANNADA SUBJECT FORUM

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 06 | ಕೌ. ಕೊಂ. ನೀನು. | | | | | | | | | | 4(1) | | | **4** | **1** |
| 07 | ವೀರಲವ. | | 1(1) | | | 2(1) | | | | | | | | **3** | **2** |
| 08 | ಸಾರ್ಥಕತೆ. | | 1(1) | | | 2(1) | | | | | | | | **3** | **2** |
| | **ಪದ್ಯ ಒಟ್ಟು** | | **1(3)** | **4(1)** | | **2(2)** | **3(1)** | | | **3(2)** | **4(1)** | | **4(1)** | **28** | **11** |
| 01 | ಅಪಠಿತ ಗದ್ಯ. | | | | | | | 4(1) | | | | | | **4** | **1** |



| **ಕ್ರ. ಸಂ.** | **ಪಾಠದ ಹೆಸರು** | **ಸ್ಮರಣೆ** | | | **ಗ್ರಹಿಕೆ** | | | | **ಅಭಿವ್ಯಕ್ತಿ** | | | | **ಪ್ರಶಂಸೆ** | **ಅಂಕಗಳು** | **ಪ್ರಶ್ನೆಗಳ ಸಂ.** |
|---|---|---|---|---|---|---|---|---|---|---|---|---|---|---|---|
| | | **ವ** | **ಕಿ** | **ದೀ** | **ವ** | **ಕಿ** | **ದೀ** | **ದೀ** | **ಕಿ** | **ದೀ** | **ದೀ** | **ದೀ** | **ದೀ** | | |
| | | **ನಿ** | **ಉ** | **ಉ** | **ನಿ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | **ಉ** | | |
| | | | **1** | **2** | | **2** | **1** | **2** | **2** | **1** | **2** | **3** | **2** | | |
| | **ಪ.ಪೋ. ಅಧ್ಯಯನ** | | | | | | | | | | | | | | |
| 01 | ವಿಜ್ಞಾನ & ಸಮಾಜ. | | | | | | | | 2(1) | | | | | **2** | **1** |
| 02 | ನಾಮಫಲಕ. | | | | | 2(1) | | | | | | | | **2** | **1** |
| 03 | ಉದಾತ್ತ ಚಿಂತನೆಗಳು | | | | | 2(1) | | | | | | | | **2** | **1** |
| 04 | ಪಾರಿವಾಳ. | | 1(1) | | | | | | | | | | | **1** | **1** |
| 05 | ಜನಪದ ಒಗಟುಗಳು | | | | | | | | 2(1) | | | | | **2** | **1** |
| | **ಪ.ಪೋ.ಅ. ಒಟ್ಟು** | | **1(1)** | | | **2(2)** | | | **2(2)** | | | | | **9** | **5** |
| 01 | ವ್ಯಾಕರಣ | 1(12) | | | 1(2) | | | | | | | | | **14** | **14** |
| 02 | ಛಂದಸ್ಸು | | | | | | 3(1) | | | | | | | **3** | **1** |
| 03 | ಅಲಂಕಾರ | | | | | | 3(1) | | | | | | | **3** | **1** |
| 04 | ಗಾದೆ | | | | | | 3(1) | | | | | | | **3** | **1** |
| 05 | ಪತ್ರ / ಪ್ರಬಂಧ | | | | | | | | | | | 5(2) | | **10** | **2** |
| | **ಒಟ್ಟು** | **1(12)** | | | **1(2)** | | **3(3)** | | | | | **5(2)** | | **33** | **19** |
| | **ಸಮಗ್ರ ಒಟ್ಟು** | **1(12)** | **1(9)** | **4(1)** | **1(2)** | **2(8)** | **3(5)** | **4(1)** | **2(2)** | **3(4)** | **4(2)** | **5(2)** | **4(1)** | **100** | **49** |
| | **ಶೇಕಡಾ ಪ್ರಮಾಣ** | **25** | | | **37** | | | | **34** | | | | **04** | | |

VIJAYAPUR DISTRICT KANNADA SUBJECT FORUM

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ.

ಅಪಠಿತ ಗದ್ಯದಲ್ಲಿ 2 ಅಂಕದ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಪ್ರಶ್ನಾನುಸಾರ ವಿಶ್ಲೇಷಣೆ - 7

| ಪ್ರಶ್ನೆ ಸಂಖ್ಯೆ | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆ ಸ್ವರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|
| 01 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 02 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸಾಧಾರಣ | 2 ನಿಮಿಷ |
| 03 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 04 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 2 ನಿಮಿಷ |
| 05 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 06 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸಾಧಾರಣ | 1.5 ನಿಮಿಷ |
| 07 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 08 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸಾಧಾರಣ | 2 ನಿಮಿಷ |
| 09 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಒಂದು ವಾಕ್ಯದ ಉತ್ತರ | 1 | ಸುಲಭ | 1.5 ನಿಮಿಷ |
| 10 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 11 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 12 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 13 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 14 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 15 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 4 ನಿಮಿಷ |
| 16 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 4 ನಿಮಿಷ |
| 17 | ಗ್ರಹಿಕೆ | ವಿವರಿಸುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸಾಧಾರಣ | 3 ನಿಮಿಷ |
| 18 | ಗ್ರಹಿಕೆ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಸುಲಭ | 3 ನಿಮಿಷ |
| 19 | ಅಭಿವ್ಯಕ್ತಿ | ಹೇಳುತ್ತಾನೆ/ಳೆ | 3 / 4 ವಾಕ್ಯದ ಉತ್ತರ | 2 | ಕಠಿಣ | 3 ನಿಮಿಷ |

Vijayapur District Kannada Subject Forum

| | | | | | | |
|---|---|---|---|---|---|---|
| 20 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 5 ನಿಮಿಷ |
| 21 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಕಠಿಣ | 5 ನಿಮಿಷ |
| 22 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸುಲಭ | 4 ನಿಮಿಷ |
| 23 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಸಂದರ್ಭ ಮತ್ತು ಸ್ವಾರಸ್ಯ | 3 | ಸುಲಭ | 4 ನಿಮಿಷ |
| 24 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸುಲಭ | 4 ನಿಮಿಷ |
| 25 | ಗ್ರಹಿಕೆ | ವಿವೇಚಿಸಿ ಉತ್ತರಿಸುತ್ತಾರೆ | ಸಾಹಿತಿ/ಕವಿ ಪರಿಚಯ | 3 | ಸುಲಭ | 4 ನಿಮಿಷ |



| **ಪ್ರಶ್ನೆ ಸಂಖ್ಯೆ** | **ಉದ್ದಿಷ್ಟ** | **ನಿರ್ದಿಷ್ಟ** | **ಪ್ರಶ್ನೆ ಸ್ವರೂಪ** | **ಅಂಕ** | **ಕಠಿಣತೆಯ ಮಟ್ಟ** | **ಬೇಕಾಗುವ ಸಮಯ** |
|---|---|---|---|---|---|---|
| 26 | ಸ್ಮರಣೆ | ಸ್ಮರಿಸುತ್ತಾನೆ/ಳೆ | ಪದ್ಯ ಪೂರ್ಣಗೊಳಿಸುವುದು | 4 | ಸುಲಭ | 4 ನಿಮಿಷ |
| 27 | ಪ್ರಶಂಸೆ | ಮೌಲ್ಯಗಳನ್ನು ಮೆಚ್ಚುತ್ತಾರೆ | ಮೌಲ್ಯಾಧಾರಿತ ಸಾರಾಂಶ | 4 | ಕಠಿಣ | 5 ನಿಮಿಷ |
| 28 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಸಾಧಾರಣ | 6 ನಿಮಿಷ |
| 29 | ಅಭಿವ್ಯಕ್ತಿ | ವಿಶ್ಲೇಷಣೆ ಮಾಡುತ್ತಾರೆ. | 8 / 10 ವಾಕ್ಯದ ಉತ್ತರ | 4 | ಸಾಧಾರಣ | 6 ನಿಮಿಷ |
| 30 | ಗ್ರಹಿಕೆ | ಓದಿ ಅರ್ಥೈಸಿಕೊಂಡು ಉತ್ತರಿಸುತ್ತಾರೆ. | ಅಪಠಿತ ಗದ್ಯ | 4 | ಸಾಧಾರಣ | 5 ನಿಮಿಷ |
| 31 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 32 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 33 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 34 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 35 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 36 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 2 ನಿಮಿಷ |
| 37 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 38 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 39 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 40 | ಸ್ಮರಣೆ | ಸ್ಮರಿಸುತ್ತಾನೆ/ಳೆ | ವಸ್ತುನಿಷ್ಠ ಬಹುಆಯ್ಕೆ | 1 | ಸುಲಭ | 1.5 ನಿಮಿಷ |
| 41 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 1.5 ನಿಮಿಷ |
| 42 | ಗ್ರಹಿಕೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 43 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 44 | ಸ್ಮರಣೆ | ಆಲೋಚಿಸಿ ಅನ್ವಯಿಸುವರು | ಸಂಬಂಧೀ ಪದ | 1 | ಸುಲಭ | 2 ನಿಮಿಷ |
| 45 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಛಂದಸ್ಸು | 3 | ಸಾಧಾರಣ | 5 ನಿಮಿಷ |

Vijayapur District Kannada Subject Forum

| | | | | | | |
|---|---|---|---|---|---|---|
| 46 | ಗ್ರಹಿಕೆ | ಪತ್ತೆಹಚ್ಚುತ್ತಾನೆ/ಳೆ | ಅಲಂಕಾರ | 3 | ಸಾಧಾರಣ | 5 ನಿಮಿಷ |
| 47 | ಗ್ರಹಿಕೆ | ಅರ್ಥ ವಿಶ್ಲೇಷಿಸುವರು | ಗಾದೆಮಾತು | 3 | ಸಾಧಾರಣ | 4 ನಿಮಿಷ |
| 48 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪತ್ರಲೇಖನ | 5 | ಸಾಧಾರಣ | 10 ನಿಮಿಷ |
| 49 | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಪ್ರಬಂಧ | 5 | ಸಾಧಾರಣ | 10 ನಿಮಿಷ |



# ವಿಜಯಪುರ ಜಿಲ್ಲಾ ಕನ್ನಡ ವಿಷಯ ವೇದಿಕೆ

## ಮಾದರಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆ 7.

## ವಿಷಯ : ಪ್ರಥಮ ಭಾಷೆ ಕನ್ನಡ

### ಭಾಗ - 'ಎ'

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 9 X 1 = 9**

1. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು?

ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ 'ಅವರ ಹೆಂಡತಿ ಶಾಲೆಯ ಬಾಗಿಲಿನಿಂದ ಒಳಗೆ ಬಂದು, ಅವರ ಮುಂದೆ ನಿಂತಾಗ' ಜ್ಞಾನೋದಯವಾಯಿತು.

2. ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ ಏನು?

ಸಾಧಕನಿಗೆ, ಅಂತರ್ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂಬುದು ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ.

VIJAYAPUR DISTRICT KANNADA SUBJECT FORUM

3. ಅಶೋಕ ಪೈ ಅವರ ವೃತ್ತಿ ಯಾವುದು?

ಅಶೋಕ ಪೈ ಅವರು ಮನೋವೈದ್ಯ ವೃತ್ತಿಯಲ್ಲಿದ್ದರು.

4. ಧರ್ಮಾಧೀಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?

ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿಯ ನ್ಯಾಯವನ್ನು ಬಗೆಹರಿಸಲು ವೃಕ್ಷದ ಬಳಿ ಸಾಕ್ಷಿ ಕೇಳಲು ಧರ್ಮಾಧೀಕರಣರು ವಟವೃಕ್ಷದ ಸಮೀಪಕ್ಕೆ ಬಂದರು.

5. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

ಖಿರ್ದಿ ಪುಸ್ತಕ ಶಾನುಭೋಗರ ಬ್ರಹ್ಮಾಸ್ತ್ರವಾಗಿತ್ತು.

6. ಘಟ ಸಂಭೂತ ಎಂದರೆ ಯಾರು?

ಘಟ ಸಂಭೂತ ಎಂದರೆ ದ್ರೋಣ.

7. ಯಜ್ಞಾಶ್ವವನ್ನು ಕಟ್ಟಿದವರು ಯಾರು?

ಯಜ್ಞಾಶ್ವವನ್ನು ಕಟ್ಟಿದವರು ವೀರಲವ.

8. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?

ಮಾನವ ಭೂಮಿಯ ಮಾಲೀಕ ಆದೆನೆಂಬ ಅಹಂಕಾರದಿಂದ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡ.

9. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?

ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದಂತೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.



**ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 = 20**

10. ಅಂತರ್‌ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿಯನ್ನು ಕುರಿತು ಬರೆಯಿರಿ.

ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಹೊರಟ ಅವನಿಗೆ ಉಳಿದವರ ಯೋಗಕ್ಷೇಮವನ್ನು ಹೊರುವ ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ.

11. 'ಎದೆಗೆ ಬಿದ್ದ ಅಕ್ಷರ' ಪಾಠದ ಪ್ರಕಾರ ಪರಮಹಂಸರ ವ್ಯಕ್ತಿ ವೈಶಿಷ್ಟ್ಯ ಎಂತಹುದು?

'ಎದೆಗೆ ಬಿದ್ದ ಅಕ್ಷರ' ಪಾಠದ ಪ್ರಕಾರ ಪರಮಹಂಸರ ವ್ಯಕ್ತಿತ್ವದ ಬಗ್ಗೆ ದೇವನೂರರು "ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು" ಎಂದು ಹೇಳಿದ್ದಾರೆ.

12. ದುಷ್ಟಬುದ್ಧಿಯು ಧರ್ಮಬುದ್ಧಿಗೆ ನೀಡಿದ ಸಲಹೆ ಏನು?

ಧರ್ಮಬುದ್ಧಯು ದುಷ್ಟಬುದ್ಧಿಗೆ 'ಹೊನ್ನವನ್ನು ಹಂಚಿಕೊಳ್ಳೋಣ' ಎಂದಾಗ ದುಷ್ಟಬುದ್ಧಿಯು "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರಲು ಸಾಧ್ಯವಿಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಕಾರಣ ನನಗೂ ನಿನಗೂ ಖರ್ಚಿಗೆ ಬೇಕಾದಷ್ಟು ಮಾತ್ರ ಹಂಚಿಕೊಳ್ಳೋಣ. ಉಳಿದ ಹೊನ್ನವನ್ನು ಇಲ್ಲಿಯೇ ಇಟ್ಟು ಹೋಗೋಣ" ಎಂದು ಸಲಹೆಯಿತ್ತನು.

VIJAYAPUR DISTRICT KANNADA SUBJECT FORUM

13. ಲೇಖಕರಾದ ಎ. ಎನ್. ಮೂರ್ತಿರಾವ್ ಅವರು ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ತಿಳಿಸಿದ ಕಾರಣಗಳನ್ನು ಬರೆಯಿರಿ.

ಲೇಖಕರಾದ ಎ. ಎನ್. ಮೂರ್ತಿರಾವ್ ಅವರು ಭರತಖಂಡದ ಹುಲಿಗಳು ಯಾರನ್ನೆಯಾಗಲಿ

ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಏಕೆಂದರೆ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಶತ್ರುಗಳಾದರೂ ಸರಿ ಮುಂದಿನಿಂದ ಮಾತ್ರ ದಾಳಿ ಮಾಡುತ್ತವೆ. ತಮ್ಮ ಮುತ್ತಜ್ಜನ ತ್ಯಾಗವನ್ನು ನೆನಪಿಸಿಕೊಂಡ ಹುಲಿಯು ಹಿಂದಿನಿಂದ ಹಾರಿ ಕೊಲ್ಲಲಿಲ್ಲ. ಎಂದು ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳನ್ನು ನೀಡಿದ್ದಾರೆ.

14. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು. ಇದು ಅವನ ಯಜ್ಞ ಕುದುರೆ. ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

15. ಕವಿಯತ್ರಿ ಇಂದುಮತಿ ಲಮಾಣಿಯವರಿಗೆ 'ನನ್ನಾಸೆ' ಕವನದಲ್ಲಿರುವ ಆಸೆಗಳೇನು ವಿವರಿಸಿರಿ.



ಕವಿಯತ್ರಿ ಇಂದುಮತಿ ಲಮಾಣಿಯವರು 'ನನ್ನಾಸೆ' ಕವನದಲ್ಲಿ ಕವಿಯತ್ರಿಯು ಬೆಳಕು ನೀಡುವ ಬತ್ತಿಯಾಗಬೇಕು, ಮರವಾಗಿ ಬೆಳೆದು ಪುಣ್ಯವಂತರಿಗೆ ನೆರಳಾಗಬೇಕು, ಚಿಮ್ಮುವ ಚಿಲುಮೆಯಾಗಿ ದಾಹಗೊಂಡವರ ತನುವ ತಣಿಸುವಂತಾಗಬೇಕು. ಅಳುವ ಕಂದನ ನಗಿಸಲು ಅಮ್ಮನ ಕಂಠದ ಜೋಗುಳವಾಗಬೇಕು. ಅಜ್ಞಾನತೆಯನ್ನು ತೊಲಗಿಸಲು ಸರಸ್ವತಿಯ ಕೈಯಲ್ಲಿರುವ ಗ್ರಂಥವಾಗಬೇಕು, ದೀನರ ಊರುಗೋಲಾಗಬೇಕು. ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯವಾಗಬೇಕು ಎಂದು ಆಸೆ ಪಟ್ಟಿದ್ದಾರೆ.

16. ಡಾ. ಹೆಚ್. ನರಸಿಂಹಯ್ಯನವರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲುದು?

ಡಾ. ಹೆಚ್. ನರಸಿಂಹಯ್ಯನವರ ಪ್ರಕಾರ ವೈಜ್ಞಾನಿಕ ಮನೋಧರ್ಮ - ವಿಚಾರಗಳು ಪಠ್ಯದಲ್ಲಿ ಸೇರ್ಪಡೆಯಾಗಿ ವ್ಯಾಪಕವಾದ ಪ್ರಚಾರಕ್ಕೆ ಒಳಪಡಬೇಕು. ನಮ್ಮ ಸಮಾಜ ಎದುರುಸಿತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವನ್ನು ಸಹ ವೈಜ್ಞಾನಿಕ ಮನೋಭಾವಗಳಿಂದಲೇ ನೋಡಬೇಕು. ಆಗ ಮಾತ್ರ ವಿಶ್ವಧರ್ಮ ರೂಪಿತವಾಗಬಲ್ಲುದು.

17. ಕವಿ ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?

ಕವಿ ಪಂಪನು ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ತನ್ನ ಕೃತಿಗಳ ಮಹತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು. ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು. ಆದ್ದರಿಂದ ತನ್ನ ಹೆಸರನ್ನು ಕೆತ್ತಿಸಲಿಲ್ಲ.

VIJAYAPUR DISTRICT KANNADA SUBJECT FORUM

18. 'ಅನ್‌ಟು ದಿ ಲಾಸ್ಟ್' ಕೃತಿಯು ಗಾಂಧೀಜಿಯವರ ಮೇಲೆ ಯಾವ ರೀತಿ ಪರಿಣಾಮ ಬೀರಿತು?

ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಗಾಂಧೀಜಿಯವರು ಓದಲು ಪ್ರಾರಂಭಿಸಿದ ನಂತರ ಅದನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೂರೆಗೊಂಡಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಅವರ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು.

19. ‘ಗರಕೆಯ ಹುಲ್ಲ'ನ್ನು ಕುರಿತಾದ ಒಗಟಿನ ಅರ್ಥ ವಿವರಿಸಿ.

ಹೊಲದಲ್ಲಿ ಹುಟ್ಟುವುದು, ಹೊಲದಲ್ಲಿ ಬೆಳೆಯುವುದು. ರೈತನನ್ನು ಕಂಡರೆ ನಗುವುದು ಅಂದರೆ ರೈತ ಅದನ್ನು ತೆಗೆಯಲು ಎಷ್ಟೇ ಕಷ್ಟ ಪಟ್ಟರೂ ಅದು ಮತ್ತೆ ಮತ್ತೆ ಬೇಳೆಯುವುದು. ಎಂಬುದು ಗರಕೆ ಹುಲ್ಲಿನ ಕುರಿತು ಇರುವ ಒಗಟು.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 X 3 = 12**

20. “ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು.”

ಈ ವಾಕ್ಯವನ್ನು "ಶ್ರೀ ಬಿ. ಎಂ. ಶ್ರೀ" ಅವರು ಸಂಪಾದಿಸಿರುವ "ಕನ್ನಡ ಬಾವುಟ" ಕೃತಿಯಿಂದ ಆಯ್ದ **"ಧರ್ಮಸಮದೃಷ್ಟಿ"** ಎಂಬ ಶಾಸನದಿಂದ ಆಯ್ದುಕೊಳ್ಳಲಾಗಿದೆ.



ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನಗೊಳಿಸಬೇಕು ಎಂಬ ವಿಶಾಲ ಮನೋಭಾವನೆ ರಾಯನು ಹೊಂದಿರುವುದನ್ನು ಸ್ವಾರಸ್ಯಪೂರ್ಣವಾಗಿ ತಿಳಿಸಲಾಗಿದೆ.

21. “ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯವೇ ಸರಿ"

ಈ ವಾಕ್ಯವನ್ನು "ಶ್ರೀ ಡಿ. ಎಸ್. ಜಯಪ್ಪಗೌಡ" ಅವರು ರಚಿಸಿರುವ "ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು" ಎಂಬ ಸಂಶೋಧನಾ ಗ್ರಂಥದಿಂದಾಯ್ದ **"ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ"** ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ದಿವಾನರಾಗಿ ನೇಮಕಗೊಂಡ ವಿಶ್ವೇಶ್ವರಯ್ಯ ಅವರು ಆಡಳಿತದಲ್ಲಿ ಹೊಸ ಮಾದರಿಗಳನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಜನರು ಈ ರೀತಿ ಹಾಡಿ ಹೋಗಳುತ್ತಾರೆ.

ಮೈಸೂರು ಸಂಸ್ಥಾನದ ದಿವಾನರಾಗಿ ವಿಶ್ವೇಶ್ವರಯ್ಯ ಅವರು ಮಾಡಿದ ಕಾರ್ಯಗಳು ಅದ್ಭುತವಾದವುಗಳು ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

22. “ಹೊಡೆದರೋ ಗುಂಡ ಕರುಣೆ ಇಲ್ಲದ್ಹಂಗ"

ಈ ವಾಕ್ಯವನ್ನು "ಡಾ. ಬಿ. ಎಸ್. ಗದ್ದಗಿಮಠ" ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು" ಕೃತಿಯಿಂದ ಆಯ್ದ "**ಹಲಗಲಿಯ ಬೇಡರು**" ಎಂಬ ಲಾವಣಿಯಿಂದ ಆರಿಸಲಾಗಿದೆ.

VIJAYAPUR DISTRICT KANNADA SUBJECT FORUM

ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ ಸರಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕವರನ್ನು ಕರುಣೆಯಿಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುವನು.

ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

23. “ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು"

ಈ ವಾಕ್ಯವನ್ನು "ಶ್ರೀ ಸಂ. ಶಿ. ಭೂಸನೂರಮಠ" ಅವರು ಸಂಪಾದಿಸಿರುವ "ವಚನ ಸಾಹಿತ್ಯ ಸಂಗ್ರಹ" ಎಂಬ ಕೃತಿಯಿಂದಾಯ್ದ "**ವಚನ ಸೌರಭ** " ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಮಾತು ಮುತ್ತಾಗಬೇಕು, ಸ್ಪಟಿಕದ ಸಲಾಕೆಯಾಗಬೇಕು, ದೇವರು ಮೆಚ್ಚುವಂತೆ ಇರಬೇಕು ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಮಾತು ಹಿತಮಿತವಾಗಿರಬೇಕೆಂಬುದನ್ನು ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಈ ಮಾತಿನಲ್ಲಿ ವ್ಯಕ್ತಪಡಿಸಿದ್ದಾರೆ.



**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 X 3 = 6**

24. ಗೊರೂರು ರಾಮಸ್ವಾಮಿ ಅಯ್ಯಂಗಾರ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರು ಕ್ರಿ. ಶ. 1904 ರಲ್ಲಿ ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಅಮೆರಕಾದಲ್ಲಿ ಗೊರೂರು, ಮೆರವಣಿಗೆ,ಹೇಮಾವತಿ ತೀರದಲ್ಲಿ, ನಮ್ಮೂರಿನ ರಸಿಕರು ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಶ್ರಿಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಗೌರವ ಡಿ. ಲಿಟ್ ಪದವಿ ದೊರೆತಿದೆ.

25. ಆದಿ ಕವಿ ಪಂಪ

ಆದಿಕವಿ ಪಂಪನ ಕಾಲ ಕ್ರಿ.ಶ. ಸುಮಾರು 941. ಈತನ ಸ್ಥಳ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರ. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಈತ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ರತ್ನತ್ರಯರಲ್ಲಿ ಒಬ್ಬನಾದ

VIJAYAPUR DISTRICT KANNADA SUBJECT FORUM

ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳಿವೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ : 1 X 4 = 4**

26. ನೀಲಮೇಘಮಂಡಲ - ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ - ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4**



27. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಜಿ.ಎಸ್. ಶಿವರುದ್ರಪ್ಪನವರು ಈ ಪದ್ಯದಲ್ಲಿ 'ಎಲ್ಲಾ ಮತಗಳ ಧ್ಯೇಯ ಒಂದೆ ಆಗಿದ್ದು, ಸುಂದರ ಬದುಕಿಗೆ ಮಾರ್ಗವಾಗಿವೆ. ಸಂಶಯ ಅನುಮಾನಗಳೆಂಬ ಕತ್ತಲೆಯನ್ನು ಹೋಗಲಾಡಿಸಲು ಸಂಕಲ್ಪವೆಂಬ ಹಣತೆ ಬೆಳಕು ನೀಡಲಿ' ಎಂದು ಆಶಿಸಿದ್ದಾರೆ.

ಜಾತಿ ಮತಗಳು ಬೇರೆ ಬೇರೆ ರೀತಿ ನೀತಿಯನ್ನು ಅನುಸರಿಸುತ್ತಿದ್ದರೂ ಅವುಗಳ ಗುರಿ ಉದ್ದೇಶಗಳು ಒಂದೆಯಾಗಿವೆ. ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ನಾವು, ಭಾಷೆ, ಜಾತಿ, ಮತ,

VIJAYAPUR DISTRICT KANNADA SUBJECT FORUM

ಆಚಾರ, ವಿಚಾರಗಳಲ್ಲಿ ಭಿನ್ನತೆಯಿದ್ದರೂ ಒಂದೇ ಎಂಬ ಭಾವನೆಯಿಂದ ಬದುಕುತ್ತಿದ್ದೇವೆ. ಎಲ್ಲಾ ಮತಧರ್ಮಗಳು ಸುಂದರ ಬದುಕಿಗೆ ಸನ್ಮಾರ್ಗಗಳನ್ನು ತೋರಿಸುತ್ತವೆ ಎನ್ನುವ ಹೊಸ ಎಚ್ಚರಿಕೆಯಿಂದ, ಭೇದ, ಭಾವಗಳನ್ನು ಹೊಡೆದು ಹಾಕಿ, ಭಯ, ಸಂಶಯ, ಅನುಮಾನದಿಂದಿ ಕೂಡಿದ ಕಣ್ಣುಗಳಲ್ಲಿ ಶಾಂತಿ, ಸಮಾನತೆ ಸುಂದರ ಬದುಕುಗಳನ್ನು ಬಿತ್ತೋಣ ಎಂಬುದು ಈ ಪದ್ಯದ ಆಶಯವಾಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

28. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ? ವಿವರಿಸಿ.

ನಂಬಿ ಕೆಟ್ಟವರಿಲ್ಲ ಎಂಬುದು ದಾಸರ ವಾಣಿಯಾಗಿದೆ. ಭಾರತೀಯರ ಪುರಾಣ ಪುಣ್ಯ ಕಥೆಗಳಲ್ಲಿ, ಮಹಾಕಾವ್ಯಗಳಲ್ಲಿ ಈ ಮಾತಿನ ನಿದರ್ಶನಗಳು ಕಂಡು ಬರುತ್ತವೆ. ಅದರಂತೆ ಶಬರಿಯೂ ಕೂಡ. ಶಬರಿ ತನ್ನ ಭಕ್ತಿ, ಭಾವ, ಪ್ರೀತಿಯಿಂದ ರಾಮನ ಬರುವಿಕೆಗಾಗಿ ಹಗಲಿರುಳು ಕಾಯುವಳು. ತಮ್ಮ ಗುರುಗಳಾದ ಮತಂಗ ಋಷಿಗಳು "ರಾಮ ಲಕ್ಷ್ಮಣರು ಈ ಆಶ್ರಮಕ್ಕೆ ಬಂದೆ ಬರುತ್ತಾರೆ. ನಿನ್ನ ಇಷ್ಟಾರ್ಥ ನೆರವೇರುತ್ತದೆ". ಎಂದಿದ್ದರು. ಅವರ ಮಾತನ್ನು ನಂಬಿಕೊಂಡಿದ್ದ ಶಬರಿ ಕಾದು ಕಾದು ಕಾತರಿಸಿ,ಮುಪ್ಪಾಗಿ ಭಕ್ತಿಯೇ ರೂಪಗೊಂಡಂತಾದಳು. ರಾಮ ಬಂದರೆ ಅವನನ್ನು ಸತ್ಕರಿಸಲು ಪ್ರತಿನಿತ್ಯ ಕಾಡಿಗೆ ಹೋಗಿ ಹೂ ಹಣ್ಣು ತಳಿರುಗಳನ್ನು ತಂದು ಅಲಂಕರಿಸಿ ರಾಮನ ಆತಿಥ್ಯಕ್ಕೆ ಸಿದ್ಧಪಡಿಸುತ್ತಿದ್ದಳು. ಮತ್ತೆ ಮಾರನೆಯ ದಿವಸ ಇವುಗಳನ್ನು ತೆಗೆದು ಹೊಸದಾದ ಹೂ ಹಣ್ಣು ತಳಿರುಗಳನ್ನು ತಂದು ಅಲಂಕರಿಸುತ್ತಿದ್ದಳು. ನಂಬಿದ ರಾಮ ಬಂದೇ ಬರುವನೆಂದು ಹಲವಾರು ದಿನಗಳು ಕಾದಳು ಕೊನೆಗೆ ಆತನ ದರ್ಶನ ಮಾಡುವ ಕಾಲ ಬಂದಿತು. ಕುಟೀರಕ್ಕೆ ರಾಮಲಕ್ಷ್ಮಣರ ಆಗಮವಾದಾಗ ಶಬರಿ ಅತೀವ ಸೋತೋಷದಿಂದ ಅವರ ಸೇವೆಗೈದು ಮುಕ್ತಿಯನ್ನು ಹೊಂದಿದಳು. ಹಾಗಾಗಿ ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

**ಅಥವಾ**



ರಾಮನ ಆಗಮನದಿಂದ ಶಬರಿಯ ಚಿಂತೆಯು ಹಿಂಗಿ ಹೋದ ಸನ್ನಿವೇಶದ ಸ್ವಾರಸ್ಯವನ್ನು ವಿವರಿಸಿ.

ಹಗಲಿರುಳು ರಾಮನ ಬರುವಿಕೆಗಾಗಿಯೇ ಹಂಬಲಿಸುತ್ತ ಕಾಯುತ್ತಿರುವಾಗ ದನುವಿನ ಸಲಹೆಯಂತೆ ರಾಮಲಕ್ಷ್ಮಣರು ಆಶ್ರಮಕ್ಕೆ ಬಂದಿರುವುದನ್ನು ಕಂಡು ಹಿರಿಹಿರಿ ಹಿಗ್ಗಿ ಸಂತೋಷಪಡುತ್ತಾಳೆ. ಆ ಸಂಭ್ರಮದಲ್ಲಿ ತನ್ನನ್ನೆ ತಾನು ಮರೆತು ಅತೀವ ಆನಂದದಿಂದ ಅವರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ನಿಮ್ಮನ್ನು ಕಂಡ ನಾನು ಪರಮಸುಖಿ, ಸುಮ್ಮನೆ ಸುಖಿನಾನು ಎಂದು ಹಾಡುತ್ತ ನರ್ತಿಸುತ್ತಾಳೆ. ಸಡಗರದಲ್ಲಿ ಕಣ್ಣೀರು ತುಂಬಿಕೊಂಡು ನನ್ನ ಇರುವಿಕೆಯನ್ನು ಗುರುತಿಸಿ, ಬಂದು ಸಂತಸ ನೀಡಿದಿರಿ. ನಿಮಗೆ ಹಸಿವು ತೃಷೆ ಹಿಂಗಿತೇ? ಬಡವಿಯಾದ ನನ್ನ ಮೇಲೆ ಮರುಕ ತೋರಿದಿರಾ? ಎಂದಾಗ ರಾಮನು ನಿನ್ನ ಕಣ್ಣಲ್ಲಿ

VIJAYAPUR DISTRICT KANNADA SUBJECT FORUM

ನೀರೇಕೆ ತಾಯಿ? ನೀನು ಯಾವ ಕೊರತೆಯನ್ನೂ ಮಾಡಿಲ್ಲ, ಅರಮನೆಯ ಸುಖಕ್ಕಿಂತ ಮಿಗಿಲಾಗಿದೆ ನಿನ್ನ ಆತಿಥ್ಯ. ಇಂದು ಕಾಡನ್ನು ಮರೆತು ಮನೆಯೆಂದು ತಿಳಿದೆವು. ನೀನೆ ನಮ್ಮ ತಾಯಿ ಎಂದುಕೊಂಡೆವು. ಎಂದಾಗ ಶಬರಿಯು ನಿನ್ನ ರೂಪಿನಂತೆ ಮಾತು ಕೂಡ ಉದಾರವಾಗಿದೆ. ಸಿದ್ಧರ ಫಲವು ಇಂದು ಫಲಿಸಿತು. ಗುರು ಪೂಜೆಯನ್ನು ಮಾಡಿದ ಪುಣ್ಯ ದೊರೆಯಿತು. ನಾನು ಧನ್ಯನಾದೆ. ಇಂದು ನನ್ನ ಮನಸ್ಸಿನ ಭಾರ ಇಳಿಯಿತು. ನನ್ನ ಜೀವನ ಸಾರ್ಥಕವಾಯಿತು. ಇನ್ನು ನನಗೆ ಮುಕ್ತಿಯನ್ನು ದೊರಕಿಸಿಕೊಡು ಎಂದು ಸಂತೋಷಪಡುತ್ತ ತನ್ನ ಮನಸ್ಸಿನ ಚಿಂತೆಯನ್ನು ಹಿಂಗಿಸಿಕೊಂಡಳು.

29. ಪಾಂಡವರು ತನ್ನ ಸಹೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ವಿವರಿಸಿ.

ತನ್ನ ಒಡೆಯನ ಮೇಲೆ ಅಪಾರ ನಂಬಿಕೆಯಿಟ್ಟು ಪಾಂಡವರನ್ನು ಎದುರಿಸುವ ಭರದಲ್ಲಿದ್ದ ಕರ್ಣನಿಗೆ ಕೃಷ್ಣನು ಜನ್ಮ ರಹಸ್ಯವನ್ನು ತಿಳಿಸಿ, ಆಮಿಷಗಳನ್ನು ಒಡ್ಡಿದಾಗ ಕರ್ಣನ ಕೊರಳಸೆರೆ ಹಿಗ್ಗಿದವು. ಕಂಬನಿಯು ರಭಸದಿಂದ ಹರಿಯತೊಡಗಿದವು. ಅತ್ಯಂತ ದುಃಖತಪ್ತನಾದ ಕರ್ಣನು ಮನದಲ್ಲಿ ನೊಂದುಕೊಂಡು ದುರ್ಯೋಧನನಿಗೆ ಕೇಡಾಯಿತು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ? ಎಂದು ಮನದಲ್ಲಿ ನೊಂದುಕೊಂಡನು. ಕೃಷ್ಣನನ್ನು ಕುರಿತು "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಭರದಲ್ಲಿದ್ದೆ. ಆದರೆ ನೀನು ನನ್ನ ಜನ್ಮರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ. ಆ ವೀರ ದುರ್ಯೋಧನನೇ ನನಗೆ ಒಡೆಯ. ಆತನ ಶತ್ರುಗಳು ನನಗೂ ಶತ್ರುಗಳು. ನಾಳಿನ ಭಾರತವು ಮಾರಿಗೌತಣವಾಗುವುದು. ಕೌರವನ ಉಪಕಾರ (ಋಣ) ತೀರಿಸಲು ಯುದ್ಧರಂಗದಲ್ಲಿ ಹೋರಾಡಿ ಅವನಿಗಾಗಿ ಶರೀರವನು ನೂಕುವೆನು ಆದರೆ ನಿನ್ನ ವೀರರೈವರನು ನೋಯಿಸೆನು ರಾಜೀವಸಖನ ಮೇಲಾಣೆ" ಎಂದನು. ಹೀಗೆ ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿ ಬದಲಾಯಿತು.

**ಅಥವಾ**

ಕರ್ಣನನ್ನು ಸೆಳೆಯಲು ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು? ವಿವರಿಸಿ.



ಪಾಂಡವರನ್ನು ರಕ್ಷಿಸಬೇಕೆಂಬ ಮಹದಾಶೆಯೊಂದಿಗೆ ಕೃಷ್ಣ ಕೌರವರ ಸೇನೆಯಲ್ಲಿದ್ದ ಕರ್ಣನ್ನು ಒಲಿಸಿಕೊಳ್ಳಲು ಒಂದು ಸಂದರ್ಭವನ್ನು ಸೃಷ್ಟಿಸುತ್ತಾನೆ. ಕರ್ಣನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು "ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನೆ ನಿಜವಾಗಿ ಈ ಭೂಮಿಯ ಅಧಪತಿ. ಅದರ ಅರಿವು ನಿನಗಿಲ್ಲ. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ನೀನೆ ಮೊದಲಿಗ. ನಂತರ

VIJAYAPUR DISTRICT KANNADA SUBJECT FORUM

ಧರ್ಮರಾಯ. ಮೂರನೆಯವನು ಭೀಮ. ನಾಲ್ಕನೆಯ ಮಂತ್ರದಿಂದ ಜನಿಸಿದವ ಅರ್ಜುನ.

ಐದನೆಯ ಮಂತ್ರದಿಂದ ಮಾದ್ರಿಯ ಹೋಟ್ಟೆಯಲ್ಲಿ ಜನಿಸಿದವರೇ ನಕುಲ ಸಹದೇವರು" ಎಂದು ಆತನ ಹುಟ್ಟಿನ ರಹಸ್ಯವನ್ನು ತಿಳಿಸುತ್ತ "ಕರ್ಣ ಐದು ಜನ ಪಾಂಡವರಿಗಿಂತ ನೀನು ಹಿರಿಯವನು. ನಿನಗೆ ಈ ವಿಚಾರವನ್ನು ತಿಳಿಸುವದಕ್ಕಾಗಿಯೇ ನಿನ್ನನ್ನು ಕರೆದುಕೊಂಡು ಬಂದಿರುವೆನು. ನೀನು ಪಾಂಡವರ ಕಡೆಗೆ ಬಂದರೆ ನಿನ್ನನ್ನು ಹಸ್ತಿನಾವತಿಗೆ ರಾಜನಾಗಿ ಮಾಡುವೆನು. ಪಾಂಡವ ಕೌರವರು ನಿನ್ನನ್ನು ಒಪ್ಪಿಕೊಳ್ಳುವರು. ನಿನಗೆ ಎರಡೂ ವಂಶದವರು ಮರು ಮಾತನಾಡದೆ ಸೇವೆಯನ್ನು ಮಾಡುವರು. ನಿನ್ನ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು ಎದುರಲ್ಲಿ ಮಾದ್ರ ಮಾಗದ ಯಾದವಾದಿಗಳು, ಅವರ ಮಧ್ಯದಲ್ಲಿ ನೀನು ರಾಜನಾಗಿ ರಾರಾಜಿಸುವೆ" ಎಂದು ಕರ್ಣನಿಗೆ ಶ್ರೀಕೃಷ್ಣನು ಆಮಿಷಗಳನ್ನು ಒಡ್ಡಿದನು.

30. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು , ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 X 4 = 4 (2+2)**

ಅರಸನಿಂದ ಅಪ್ಪಣೆ ಪಡೆದ ಆರ್ಕಿಮಿಡಿಸ್ ಕೀರಿಟದಲ್ಲಿ ಇತರ ಲೋಹಗಳ ಮಿಶ್ರಣವಿದೆಯೇ ಎಂಬುದನ್ನು ತಿಳಿಯಲು ಯೋಚಿಸತೊಡಗಿದ. ಲೆಕ್ಕ ಗುಣಿಸಿದ. ಸಮಸ್ಯಯನ್ನು ಹಲವು ದೃಷ್ಟಿ ಕೋನಗಳಿಂದ ವಿಶ್ಲೇಷಿಸಿದ. ಏಕಾಗ್ರಚಿತ್ತನಾಗಿ ಚಿಂತನೆ ನಡೆಯಿಸಿದ. ಅನವರತ ತದೇಕ ಧ್ಯಾನ ಪರನಾದ. ಸ್ನಾನದ ಹೊತ್ತಿನಲ್ಲೂ ಅದನ್ನೇ ಯೊಚಿಸುತ್ತಿದ್ದ. ನೀರು ತುಂಬಿದ ತೊಟ್ಟಿಯೊಳಕ್ಕೆ ಇಳಿಯುತ್ತಿದ್ದಾಗ ಅದರೊಳಗೆ ಜಾರಿ ಬಿದ್ದ. ಒಂದಿಷ್ಟು ನೀರು ತುಳುಕಿ ಹೊರಚಲ್ಲಿತು. ಅದೋ! ತೇಲುವಿಕೆಯ ನಿಯಮ - .ಸಾಪೇಕ್ಷ ಸಾಂದ್ರತೆಯ ಸಿದ್ಧಾಂತದ ಸಾಕ್ಷಾತ್ಕಾರ ಅವನಿಗಾಯಿತು. ರಾಜನ ಕೀರಿಟದ ಖೋಟಾತನ ಬಯಲಿಗಳೆಯಲು ಬೇಕಾದುದು ಅದೇ. ತಡೆಯಲಾರದ ಆನಂದದಿಂದ ಮೈಮರೆತು ಸ್ಥಾನದ ತೊಟ್ಟಿಯಿಂದಲೇ ಆತ ಮೇಲೆ ಜಿಗಿದು 'ಯುರೇಕಾ' ಎಂದು ಕೂಗುತ್ತ ಓಡಿದ.

**ಪ್ರಶ್ನೆಗಳು :**

1. ಆರ್ಕಿಮಿಡಿಸ್ ಕೀರಿಟದಲ್ಲಿ ಇತರ ಲೋಹಗಳ ಮಿಶ್ರಣವಿದೆಯೇ ಎಂಬುದನ್ನು ತಿಳಿಯಲು ಹೇಗೆ ಯೋಚಿಸತೊಡಗಿದ?

ಆರ್ಕಿಮಿಡಿಸ್ ಕೀರಿಟದಲ್ಲಿ ಇತರ ಲೋಹಗಳ ಮಿಶ್ರಣವಿದೆಯೇ ಎಂಬುದನ್ನು ತಿಳಿಯಲು ಲೆಕ್ಕ ಗುಣಿಸಿದ. ಸಮಸ್ಯಯನ್ನು ಹಲವು ದೃಷ್ಟಿ ಕೋನಗಳಿಂದ ವಿಶ್ಲೇಷಿಸಿದ. ಏಕಾಗ್ರಚಿತ್ತನಾಗಿ



ಚಿಂತನೆ ನಡೆಯಿಸಿದ. ಅನವರತ ತದೇಕ ಧ್ಯಾನ ಪರನಾದ. ಹೀಗೆ ಯೋಚಿಸತೊಡಗಿದ.

2. ಆರ್ಕಿಮಿಡಿಸ್ 'ಯುರೇಕಾ' ಎಂದು ಕೂಗುತ್ತ ಓಡಿದರ ಹಿನ್ನಲೆಯನ್ನು ಬರೆಯಿರಿ.

ಸ್ನಾನದ ಹೊತ್ತಿನಲ್ಲಿ ನೀರು ತುಂಬಿದ ತೊಟ್ಟಿಯೊಳಕ್ಕೆ ಇಳಿಯುತ್ತಿದ್ದಾಗ ಅದರೊಳಗೆ ಜಾರಿ ಬಿದ್ದ. ಒಂದಿಷ್ಟು ನೀರು ತುಳುಕಿ ಹೊರಚಲ್ಲಿತು. ಅದೋ! ತೇಲುವಿಕೆಯ ನಿಯಮ-.ಸಾಪೇಕ್ಷ ಸಾಂದ್ರತೆಯ ಸಿದ್ಧಾಂತದ ಸಾಕ್ಷಾತ್ಕಾರ ಅವನಿಗಾಯಿತು. ರಾಜನ ಕೀರಿಟದ ಖೋಟಾತನ ಬಯಲಿಗೆಳೆಯಲು ಬೇಕಾದುದು ಅದೇ. ತಡೆಯಲಾರದ ಆನಂದದಿಂದ ಮೈಮರೆತು ಸ್ಥಾನದ ತೊಟ್ಟಿಯಿಂದಲೇ ಆತ ಮೇಲೆ ಜಿಗಿದು 'ಯುರೇಕಾ' ಎಂದು ಕೂಗುತ್ತ ಓಡಿದ.

## ಭಾಗ - 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ . ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ , ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ :** **10 X 1 = 10**

31. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆ :

VIJAYAPUR DISTRICT KANNADA SUBJECT FORUM

ಎ) ಬಹುವ್ರೀಹಿ ಬಿ) ತತ್ಪುರುಷ ಸಿ) ದ್ವಂದ್ವ ಡಿ) ಕರ್ಮಧಾರೆಯ

ಉತ್ತರ: ಡಿ) ಕರ್ಮಧಾರೆಯ

32. 'ಕಲೋಪಾಸಕ' ಪದವು ಈ ಸಂಧಿಗೆ ಉದಾಹರಣೆ :

ಎ) ಲೋಪಸಂಧಿ ಬಿ) ಗುಣಸಂಧಿ ಸಿ) ಆದೇಶ ಸಂಧಿ ಡಿ) ಆಗಮ ಸಂಧಿ

ಉತ್ತರ:ಬಿ) ಗುಣಸಂಧಿ

33. ಪಾರಿಭಾಷಿಕ / ಅನ್ಯದೇಶಿಯ ಪದಗಳನ್ನು ಬಳಸುವ ' ' ಲೇಖನ ಚಿಹ್ನೆ :

ಎ) ಆವರಣ ಬಿ) ವಾಕ್ಯವೇಷ್ಟನ ಸಿ) ಭಾವಸೂಚಕ ಡಿ) ಉದ್ಧರಣ

ಉತ್ತರ:ಬಿ) ವಾಕ್ಯವೇಷ್ಟನ

34. 'ತ' ವರ್ಗದ ಅನುನಾಸಿಕ ಅಕ್ಷರ :

ಎ) ಙ ಬಿ) ಣ ಸಿ) ನ ಡಿ) ಮ

ಉತ್ತರ:ಸಿ) ನ

35. 'ಜಾಣತನ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :

ಎ) ತದ್ಧಿತಾಂತ ಭಾವನಾಮ ಬಿ) ಕೃದಂತಾವ್ಯಯ

ಸಿ) ಕೃದಂತ ಭಾವನಾಮ ಡಿ) ಕೃದಂತಾವ್ಯಯ

ಉತ್ತರ:ಎ) ತದ್ಧಿತಾಂತ ಭಾವನಾಮ

36. ತೃತೀಯಾ ವಿಭಕ್ತಿಯ ಹಳಗನ್ನಡದ ರೂಪವಿದು :

ಎ) ಅಂ ಬಿ) ಅನ್ನು ಸಿ) ಇಂದ ಡಿ) ಇಂದಂ



ಉತ್ತರ:ಡಿ) ಇಂದಂ

37. ‘ಇಲಾಖೆ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

ಎ) ಹಿಂದೂಸ್ಥಾನಿ ಬಿ) ಫಾರ್ಸಿ ಸಿ) ಉರ್ದು ಡಿ) ಅರಬ್ಬಿ

ಉತ್ತರ:ಸಿ) ಉರ್ದು

38. ನಿಷೇಧಾರ್ಥಕ ಕ್ರಿಯಾಪದಕ್ಕೆ ಸೂಕ್ತ ಉದಾಹರಣೆಯಿದು :

ಎ) ಮಾಡನು ಬಿ) ತಿಂದಾಳು ಸಿ) ಮಾಡಲಿ ಡಿ) ಮಾಡಿಯಾನು

ಉತ್ತರ:ಎ) ಮಾಡನು

39. ಭಾವಸೂಚಕಾವ್ಯಯಕ್ಕೆ ಸೂಕ್ತ ಉದಾಹರಣೆಯಾದ ಪದವಿದು :

ಎ) ಓಹೋ! ಬಿ) ಸುಮ್ಮನೆ ಸಿ) ಧಗಧಗನೆ ಡಿ) ಆದ್ದರಿಂದ

ಉತ್ತರ:ಎ) ಓಹೋ!

40. "ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ಕುಮಾರನು ಮಲೇರಿಯಾದಿಂದ ಬಳಲಬೇಕಾಯಿತು" ಇದು ಈ ವಾಕ್ಯಕ್ಕೆ ಉದಾಹರಣೆಯಾಗಿದೆ :

ಎ) ಸಾಮಾನ್ಯ ಬಿ) ವಿದ್ಯರ್ಥಕ ಸಿ) ಸಂಯೋಜಿತ ಡಿ) ಮಿಶ್ರ

ಉತ್ತರ:ಸಿ) ಸಂಯೋಜಿತ

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಹೊಂದುವ ಸಂಬಂಧಿ ಪದವನ್ನು ಬರೆಯಿರಿ :** **4 X 1 = 4**

41. ತನೂಜ ; ಮಗ :: ದನುಜ ; ……………………

ಉತ್ತರ:ರಾಕ್ಷಸ.

42. ಮನೆಮಠ ; ಜೋಡುನುಡಿ :: ಓಡು ಓಡು ; ……………………

ಉತ್ತರ:ದ್ವಿರುಕ್ತಿ.

43. ವಿಜ್ಞಾನಿ ; ಅನ್ವರ್ಥಕನಾಮ :: ಪಡುವಣ ; ……………………

ಉತ್ತರ:ದಿಗ್ವಾಚಕ.

44. ಕಾರ್ಯ ; ಕಜ್ಜ :: ಸ್ಥಾನ ; ……………………

ಉತ್ತರ:ತಾಣ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ , ಗಣ ವಿಭಾಗ ಮಾಡಿ , ಛಂದಸ್ಸಿನ ಹೆಸರನ್ನು ಬರೆಯಿರಿ :** **1X3=3**

-UU -UU UUUU

ಭಾನುವೆ| ಸಾಲದೆ| ಪಗಲೆನಿ =12



- - - UU UUUU - - UU -

ತಾನುಂ| ದೀವಿಗೆ|ಗಳುರಿದೊ|ಡೇಂ ನಂ|ದಿದೊಡೇಂ =20

**ಛಂದಸ್ಸಿನ ಹೆಸರು :** <u>ಕಂದಪದ್ಯ.</u>

**ಅಥವಾ**

ಸ ಭ ರ ನ ಮ ಯ ಲಗು

UU- -UU - U - UUU - - - U - - U-

ಎನಗಂ| ಪಾಂಡುಗ|ಮಿಲ್ಲ ಭೇ|ದಮಿಳ್|ಯಂ ಪಚ್ಚಾ|ಳ್ವಮಾ ಪಾಂ|ಡುನಂ

ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ.

**ಛಂದಸ್ಸಿನ ಹೆಸರು :** <u>ಮತ್ತೇಭವಿಕ್ರೀಡಿತ ವೃತ್ತ.</u>

VIJAYAPUR DISTRICT KANNADA SUBJECT FORUM

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಿಸಿ :** **1 X 3 = 3**

46. "ಆತ್ಮ ಸುರಭಿ "

**ಅಲಂಕಾರದ ಹೆಸರು :** ರೂಪಕ ಅಲಂಕಾರ.

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕ ಅಲಂಕಾರ.

**ಉಪಮೇಯ :** ಆತ್ಮ.

**ಉಪಮಾನ :** ಸುರಭಿ.

**ಸಮನ್ವಯ :** ಇಲ್ಲಿ ಉಪಮೇಯವಾದ ಆತ್ಮವನ್ನು ಉಪಮಾನವಾದ ಸುರಭಿಗೆ ಅಭೇದವಾಗಿ ಹೋಲಿಸಲಾಗಿದ್ದರಿಂದ ಇದು ರೂಪಕ ಅಲಂಕಾರ.

**ಉದಾ**

"ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.



**ಉಪಮೇಯ** : ನುಡಿಯುವಿಕೆ.

**ಉಪಮಾನ** : ಸ್ಪಟಿಕದ ಶಲಾಕೆ.

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ** : ಇರುವುದು.

**ಸಮನ್ವಯ** : ಇಲ್ಲಿ ಉಪಮೇಯವಾದ ನುಡಿಯುವಿಕೆಯು ಉಪಮಾನವಾದ ಸ್ಪಟಿಕದ ಶಲಾಕೆಗೆ ಹೋಲಿಸಲಾಗಿದ್ದರಿಂದ ಇದು ಉಪಮಾ ಅಲಂಕಾರ.

## ಭಾಗ - 'ಸಿ'

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : 1X3 = 3**

- ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.
- ಹಾಸಿಗೆ ಇದ್ದಷ್ಟು ಕಾಲುಚಾಚು.
- ಮನೆ ಗೆದ್ದು ಮಾರು ಗೆಲ್ಲು.

ಗಾದೆಗಳು ಜನಪದರ ವೇದ ಎನ್ನುತ್ತಾರೆ. ಇವು ಜನರ ಅನುಭವದ ನುಡಿಮುತ್ತುಗಳು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೊಂದಿರುವ ಗಾದೆಗಳು ಜನರ ದಿನನಿತ್ಯದ ಮಾತುಗಳಲ್ಲಿ ಯಥೇಚ್ಛವಾಗಿ ಬಳಸಲ್ಪಡುತ್ತವೆ. ಇಂತಹ ಗಾದೆಗಳಲ್ಲಿ ______ ______________ ಎಂಬ ಗಾದೆ ಪ್ರಸಿದ್ಧವಾಗಿದೆ.

------------------------------------------------

VIJAYAPUR DISTRICT KANNADA SUBJECT FORUM

------------------------------------------------

------------------------------------------------

------------------------------------------------

**48.** ನಿಮ್ಮನ್ನು ಚಡಚಣದ ರಾಮದೇವನಗರ ಬಡಾವಣೆ ಆನಂದ / ಆಶಾ ಎಂದು ಭಾವಿಸಿ ನಿಮ್ಮ ಬಡಾವಣೆಯಲ್ಲಿ ಹಾಳಾದ ರಸ್ತೆಗಳನ್ನು ಸರಿಪಡಿಸಿಕೊಡುವಂತೆ ಸಂಬಂದಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.. **1 X 5 = 5**

**ಅಥವಾ**

ನಿಮ್ಮನ್ನು ಬಸವನ ಬಾಗೇವಾಡಿಯ ಸರಕಾರಿ ಪ್ರೌಢ ಶಾಲೆಯ ನವೀನ/ನಿವೇದಿತಾ ಎಂದು ಭಾವಿಸಿ, ವಿಜಯಪುರದಲ್ಲಿರುವ ನಿಮ್ಮ ಸ್ನೇಹಿತನಿಗೆ ಶಾಲೆಯಲ್ಲಿ ಆಚರಿಸಿದ ಸ್ವಚ್ಚತಾ ಆಂದೋಲನ ಕಾರ್ಯಕ್ರಮದ ಕುರಿತು ಪತ್ರ ಬರೆಯಿರಿ.



**1. ವ್ಯವಹಾರಿಕ ಪತ್ರದ ಹಂತಗಳು :**

ಇಂದ,

-----------------
-----------------
-----------------

ಇವರಿಗೆ,

-----------------
-----------------
-----------------

ಮಾನ್ಯರೆ,

ವಿಷಯ : ------------------------------

------------------------------

VIJAYAPUR DISTRICT KANNADA SUBJECT FORUM

--------------------------------------------
--------------------------------------------
--------------------------------------------
--------------------------------------------
------------------------

ವಂದನೆಗಳೊಂದಿಗೆ / ಧನ್ಯವಾದಗಳೊಂದಿಗೆ

ಸ್ಥಳ : ---------- ತಮ್ಮ ವಿಶ್ವಾಸಿ /ನಂಬುಗೆಯ

ದಿನಾಂಕ : ----------

**2. ಮುಕ್ತಿಕ ಪತ್ರದ ಹಂತಗಳು :**

ಇಂದ,

-----------------

-----------------

-----------------

ದಿನಾಂಕ. ----------------



(ಸಂಬೋಧನೆ ಉದಾ : ತೀರ್ಥರೂಪ / ಪೂಜ್ಯ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.)

-------------------------------------------------

ತರುವಾಯ ಪತ್ರ ಬರೆಯಲು ಕಾರಣವೆನೆಂದರೆ ನಾನು ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ತಮ್ಮ ಆರೋಗ್ಯದ ಬಗ್ಗೆ ತಿಳಿಸಬೇಕು. ತಾಯಿಯವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿರಿ. ಅವರ ಆರೋಗ್ಯದ ಬಗ್ಗೆ ತಿಳಿಸಿರಿ. (ಹೀಗೆ ಕ್ಷೇಮ ಸಮಾಚಾರದ ವಿಷಯವನ್ನು ಬರೆದ ನಂತರ ಪರಿಚ್ಛೇದ ಮಾಡಿ ಕೇಳಿರುವ ವಿಷಯದ ಬಗ್ಗೆ ವಿವರಣೆ ಬರೆಯುವುದು.)

ಮುಖ್ಯ ವಿಷಯವೆನೆಂದರೆ ----------------------------

-------------------------------------------------

-------------------------------------------------

-------------------------------------------------

-------------------------------------------------

VIJAYAPUR DISTRICT KANNADA SUBJECT FORUM

-------------------

(ಸಂಬೋಧನೆಗೆ ತಕ್ಕಂತೆ ಮುಕ್ತಾಯ)

ಇವರಿಗೆ,

-------------------------

-------------------------

-------------------------

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ**

**ಪ್ರಬಂಧ ಬರೆಯಿರಿ .** **1 X 5 = 5**

- ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆ.
- ರೈತರ ಆತ್ಮಹತ್ಯೆಯ ಹಿನ್ನಲೆ.
- ಅಂತರ್ ರಾಜ್ಯ ಜಲವಿವಾದ.

**ಪೀಠಿಕೆ** : ____________________________________

____________________________________

____________________________________

**ವಿವರಣೆ** : ____________________________________

____________________________________

____________________________________

____________________________________



____________________________________

____________________________________

____________________________________

____________________________________

____________________________________

____________________________________

____________________________________

VIJAYAPUR DISTRICT KANNADA SUBJECT FORUM

**ಉಪಸಂಹಾರ** : ____________________________________

____________________________________

____________________________________

*****************